ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ದಿನಾಂಕ ೩ನೇ ಮಾರ್ಚಿ ೧೯೮೬. ಫಾಲ್ಗುಣ ೧೨, ೧೯೦೭. ಶಕ

ವಿಧಾನಸೌಧದಲ್ಲಿರುವ, ವಿಧಾನ ಸಭೆಯ ಸಭಾಂಗಣದಲ್ಲಿ

ಸದನವು ಬೆಳಿಗ್ಗೆ ಹತ್ತು ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದ್ದರು.]

ಸಂತಾಪ ಸೂಚಕ ನಿರ್ಣಯ.

ಅಧ್ಯಕ್ಷರು.—ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಎಚ್. ಎಸ್. ಸೂರ್ಯನಾರಾಯಣರಾವ್‌ರವರು ದಿನಾಂಕ ೧೭ನೇ ಫೆಬ್ರುವರಿ ೧೯೮೬ ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ೧೯೪೫ ರಿಂದ ೧೯೪೯ ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಮೃತರ ಆತ್ಮಶಾಂತಿಗಾಗಿ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರೆಲ್ಲರೂ ಒಂದು ನಿಮಿಷ ಮೌನವನ್ನು ಆಚರಿಸಿದರು)

ವಿತ್ತೀಯ ಕಾರ್ಯಕಲಾಪಗಳು

೧೯೮೬–೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ— ಬೇ.ಸಂ, ೩೪, ೩೫, ೪೪, ೪೫, ೪೬.

(ಕಾಮಗಾರಿ ಮಂತ್ರಿಯವರಿಂದ ಉತ್ತರ)

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿ).—ಮಾನ್ಯ ಸಭಾಧ್ಯಕ್ಷರೇ, ಲೋಕೋಪಯೋಗಿ ಹಾಗೂ ನೀರಾವರಿ ಅಚ್ಚುಕಟ್ಟು ಅಭಿವೃದ್ಧಿ ಪ್ರದೇಶದ ಬಗ್ಗೆ ಮೊನ್ನೆ ಎಷ್ಟು ಚರ್ಚೆ ನಡೆಯಿತು, ಆ ಚರ್ಚೆಯಲ್ಲಿ ಕೇವಲ ೫–೬ ಜನ ಸದಸ್ಯರು ಮಾತನಾಡಿದರು. ಅವರು ಅತ್ಯಂತ ಪ್ರಾಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಚರ್ಚೆ ಅತ್ಯಂತ ಮೇಲ್ಮಟ್ಟದ ಚರ್ಚೆಯೆಂದು ನಾನು ಭಾವಿಸಿಕೊಳ್ಳುತ್ತೇನೆ. ಕಾರಣ ಇಷ್ಟೆ. ಮಾನ್ಯ ವೀರಪ್ಪಮೊಯಿಲಿಯವರು ಒಂದೂವರೆ ಗಂಟೆಗಳ ಕಾಲ, ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದರ ಮುಖಾಂತರ ರಾಜ್ಯದ ನೀರಾವರಿ ಸಮಸ್ಯೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ತೀವ್ರ ಪ್ರಯತ್ನ ಮಾಡಿದ್ದಾರೆ. ಅದರ ಜೊತೆಗೆ ನಮ್ಮ ನೀರಿನ ಹಕ್ಕನ್ನು ಯಾವರೀತಿ ಕಾಪಾಡಿಕೊಳ್ಳಬೇಕು, ಎಷ್ಟರಮಟ್ಟಿಗೆ ಎಚ್ಚರಿಕೆಯನ್ನು ವಹಿಸಬೇಕು ಎಂಬುದರ ಬಗ್ಗೆಯೂ ಅವರು ಸರ್ಕಾರಕ್ಕೆ ಕಾಠಿಣ್ಯವಾದ ಕೆಲವು ಮಾತುಗಳನ್ನು ಹೇಳಿದಾರೆ. ಅದೇರೀತಿ ಮತ್ತೊಬ್ಬ ಹಿರಿಯ ಸದಸ್ಯರು, ಮಾಜಿ ಮಂತ್ರಿಗಳೂ ಆದ ಬಸವಲಿಂಗಪ್ಪನವರು ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯ ಬಗ್ಗೆ ಹೆಚ್ಚು ಕಟು ಶಬ್ದಗಳಿಂದ ಟೀಕೆ ಮಾಡಿದ್ದಾರೆ. ಎಂದರೆ ಅವರು ಉಪಯೋಗಿಸಿದ ಎಲ್ಲಾ ಮಾತಿನ ಸಾರಾಂಶ, ಈ ಇಲಾಖೆಯಲ್ಲಿ ತೊಡಗಿಸತಕ್ಕ ಹಣ, ಒಂದು ನೂರು ರೂಪಾಯಿಯಲ್ಲಿ, ಅರವತ್ತು ರೂಪಾಯಿಗಳು ಪೋಲಾಗುತ್ತಿದೆ.

ಪ್ರತಿ ೨೦ ಶತ ಕಂಟ್ರಾಕ್ಟರುಗಳಿಗೆ ಹೋಗುತ್ತಿದೆ, ೨೦ ಶತ ಆಫೀಸರುಗಳಿಗೆ ಹೋಗುತ್ತಿದೆ, ೨೦ ಶತ ಮಾಸ್ ಕಲೆಕ್ಷನ್ ಹೆಸರಿನಲ್ಲಿ ದುರುಪಯೋಗವಾಗುತ್ತಿದೆ ಎಂದು ಹೇಳಿದರು. ಆ ಮೇಲೆ ಅಧಿಕಾರಿಗಳ ಆಸ್ತಿಪಾಸ್ತಿ, ವಜ್ರವೈಡೂರ್ಯ ಇವೆಲ್ಲವನ್ನೂ ಹೇಳಿದ್ದಾರೆ. ನಾನು ಅದಕ್ಕೆ ಮಹತ್ವ ಕೊಡುವುದಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣ ತೊಡಗಿಸತಕ್ಕ ಈ ಇಲಾಖೆಯಲ್ಲಿ, ಇದರ ಫಲ ಆಸ್ತಿ ಉಳ್ಳವರಿಗೆ ಮಾತ್ರ ದಕ್ಕುತ್ತಿದೆ. ಬಡವರಿಗೆ, ಕಾರ್ಮಿಕರಿಗೆ, ಕೃಷಿ ಕಾರ್ಮಿಕರಿಗೆ ಇದರಲ್ಲಿ ಯಾವುದೇ ಫಲ ಸಿಕ್ಕುವುದಿಲ್ಲ, ಆದ್ದರಿಂದ ನಮ್ಮ ಯೋಜನೆಯಲ್ಲಿ ಬದಲಾವಣೆ ಮಾಡದೇ ಹೋದರೆ, ಈ ದೇಶದಲ್ಲಿ ನಮ್ಮ ಇಂದಿನ ಸ್ಥಿತಿಗೆ ಧಕ್ಕೆ ಬರುತ್ತದೆ, ಕ್ರಾಂತಿಯ ಕಹಳೆಯನ್ನು ಊದತಕ್ಕ ಸನ್ನಿವೇಶ ಬರುತ್ತದೆ ಎಂಬ ಮಾತನ್ನು ಅವರು ಹೇಳಿದರು. ಅವರು ಈಗ ಸಭೆಯಲ್ಲಿ ಇಲ್ಲ, ಅವರು ಇದ್ದರೆ ಚೆನ್ನಾಗಿತ್ತು. ನಾನು ಪ್ರಥಮದಲ್ಲಿ, ಪೂರ್ವಭಾವಿಯಾಗಿ ನಾಲ್ಕು ಮಾತುಗಳನ್ನು ಹೇಳಲೇಬೇಕು. ಸ್ವಾಮಿ ಈ ದೇಶದಲ್ಲಿ ಆರು ಪಂಚವಾರ್ಷಿಕ ಯೋಜನೆಗಳನ್ನು ನಾವು ಕಾರ್ಯಗತ ಮಾಡಿದ್ದೇವೆ. ನಾಲ್ಕು ಪ್ಲಾನಿಂಗ್ ಹಾಲಿಡೇ ಆಗಿರುವುದು ತಮಗೂ ಗೊತ್ತಿದೆ. ೭ನೇ ಪಂಚವಾರ್ಷಿಕ ಯೋಜನೆಗೆ ನಾವು ಕಾಲಿಟ್ಟಿದ್ದೇವೆ. ಸ್ವಾಮಿ ಅವಿಭಾಜ್ಯ ಕಾಂಗ್ರೆಸ್‌ನಿಂದ ಹಿಡಿದು ಇಲ್ಲಿಯವರೆಗೆ ನಡೆದುಕೊಂಡು ಬಂದಿರತಕ್ಕ ಎಲ್ಲಾ ಕಾರ್ಯಕ್ರಮಗಳ ಪಟ್ಟಿಯನ್ನು ಒಂದು ಕಡೆ ಸೇರಿಸಿದಾಗ, ಬಡವರ ಹೆಸರಿನಲ್ಲಿ, ಸಮಾಜದಲ್ಲಿರತಕ್ಕ ದುರ್ಬಲ ವರ್ಗದವರ ಹೆಸರಿನಲ್ಲಿ, ಸಮಾಜದಲ್ಲಿರತಕ್ಕ ದಲಿತರ ಹೆಸರಿನಲ್ಲಿ ನಡೆದಿರತಕ್ಕ ಕಾರ್ಯಕ್ರಮಗಳನ್ನು ನೋಡಿದಾಗ, ಎಷ್ಟರಮಟ್ಟಿಗೆ ಈ ದಿಕ್ಕಿನಲ್ಲಿ ನಾವು ಯಶಸ್ಸು ಸಾಧಿಸಿದ್ದೇವೆಂದು ಲೆಕ್ಕ ಹಾಕಿದರೆ, ನನ್ನ ದೃಷ್ಟಿಕೋನದಲ್ಲಿ ಇದು ಅಷ್ಟೊಂದು ಉತ್ತೇಜನಕಾರಿಯಾಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ಎಸ್. ಕೆ. ಡೇ ಅವರ ಬಗ್ಗೆ ಎರಡು ಮಾತು ಹೇಳಿ, ಮುಂದೆ ಹೋಗುತ್ತೇನೆ. ರೂರಲ್ ಪ್ರೋಗ್ರಾಂ ಬಗ್ಗೆ ಘೋಷಣೆ ಮಾಡಿದರು. ಮೊದಲಿನಿಂದ ಕೊನೆಯವರೆಗೂ ಟ್ರೈಬಲ್ ಹಿಲ್ ಏರಿಯಾ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ತಂದರು. ಇಂತಹ ಸುಮಾರು ೨೩ ಕಾರ್ಯಕ್ರಮಗಳನ್ನು ನಾನು ಪಟ್ಟಿ ಮಾಡಿದ್ದೇನೆ. ಕೇವಲ ಬಡವರಿಗೋಸ್ಕರ ನಾವು ಕಲ್ಪನೆ ಮಾಡಿರತಕ್ಕ ಕಾರ್ಯಕ್ರಮಗಳು, ಕಾರ್ಯಗತ ಮಾಡಿರತಕ್ಕ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ ಜೋಡಣೆ ಮಾಡಿದ್ದೇನೆ. ಈ ರಾಷ್ಟ್ರದಲ್ಲಿ ೩೫–೩೬ ವರ್ಷದಲ್ಲಿ ಯೋಜನೆಗಳ ಮೂಲಕ ಆರ್ಥಿಕ ವ್ಯವಸ್ಥೆ ಈ ದೇಶದಲ್ಲಿ ಬಂದಮೇಲೆ, ಇವತ್ತಿನ ಚಿತ್ರ ಏನಿದೆ, ಕೇಂದ್ರ ಸರ್ಕಾರದವರು ಅಥವಾ ರಿಸರ್ವ್ ಬ್ಯಾಂಕ್‌ನವರು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ, ಪ್ರತಿ ಶತ, ೧೦೦ರಲ್ಲಿ ೩೮ರಷ್ಟು ಜನ ಬಡತನ ರೇಖೆಯ ಕೆಳಗೆ ಇದ್ದಾರೆ. ನಮ್ಮ ರಾಜ್ಯಕ್ಕೆ ಹೋಲಿಸಿಕೊಳ್ಳುವುದಾದರೆ, ೧೦೦ಕ್ಕೆ ೪೯ ಜನ ಅಸಂಘಟಿತ ಕಾರ್ಮಿಕರ ಸಂಖ್ಯೆ ಇದೆ. ಅವರಿಗೆ ಊಟಕ್ಕೂ ಗತಿ ಇಲ್ಲ. ನಿಲ್ಲುವುದಕ್ಕೆ ನೆಲೆ ಇಲ್ಲ ಎನ್ನುವ ಮಾತು. ಜನತಾ ಸರ್ಕಾರದ ಬಜೆಟ್ ಅಥವಾ ಇವೊತ್ತು ನಾವು ಏನು ಯೋಜನೆಯನ್ನು ರೂಪಿಸಿಕೊಂಡಿದ್ದೇವೆ, ಅದು ಶ್ರೀಮಾನ್ ಬಸವಲಿಂಗಪ್ಪನವರಿಗೆ ಹಿಡಿಸಿಲ್ಲವೆಂದು ಕಾಣುತ್ತದೆ. ನೀರಾವರಿಗೆ ತೊಡಗಿಸತಕ್ಕ ಹಣ ಕೇವಲ ಆಸ್ತಿಯುಳ್ಳವರಿಗೆ ಮಾತ್ರ ಲಾಭವಾಗುತ್ತದೆ ಎನ್ನುವ ದೃಷ್ಟಿಕೋನ ಇಟ್ಟುಕೊಂಡು ಈ ಸಭೆಯಲ್ಲಿ ಅವರು ಮಾತನಾಡಿದ್ದಾರೆ. ಅದರ ಬಗ್ಗೆ ನಾಲ್ಕು ಮಾತುಗಳನ್ನು ನಾನು ಹೇಳಲೇಬೇಕಾಗುತ್ತದೆ. ನೀರಾವರಿ ಪ್ರದೇಶದಲ್ಲಿರತಕ್ಕ ಕೃಷಿ ಕಾರ್ಮಿಕರು, ದಲಿತ ಸಮಾಜದವರು ಹಾಗೂ ಇವತ್ತು ಯಾರು ಸಮಾಜದಲ್ಲಿ ಹಿಂದೆ ಬಿದ್ದಿದ್ದಾರೆ ಅವರ ಆರ್ಥಿಕ ಶಕ್ತಿಯನ್ನು ಸಮೀಕ್ಷೆ ಮಾಡಬೇಕಾದದ್ದು ಅತ್ಯಂತ ಅವಶ್ಯಕ. ಕೃಷಿ ಪ್ರದೇಶದಲ್ಲಿ ಒಣ ಭೂಮಿಯನ್ನು ಅವಲಂಬನೆ ಮಾಡಿ ಜೀವನ ಮಾಡತಕ್ಕ ಜನರನ್ನು ಒಂದು ಕಡೆ ಸಮೀಕ್ಷೆ ಮಾಡಬೇಕು. ಹಾಗೆಯೇ ನೀರಾವರಿ ಪ್ರದೇಶದಲ್ಲಿ ಇರತಕ್ಕ ಈ ವರ್ಗದ ಜನ ಏನಿದ್ದಾರೆ, ಅವರನ್ನು ಬಡವರು ಎಂದು ಕರೆಯುತ್ತೇವೆ, ದಲಿತರು ಎಂದು ಕರೆಯುತ್ತೇವೆ, ಸಮಾಜದಲ್ಲಿ ಆರ್ಥಿಕವಾಗಿ ಹಿಂದೆ ಬಿದ್ದವರು ಎಂದು ಕರೆಯುತ್ತೇವೆ. ಇವರ ಆರ್ಥಿಕ ಮಟ್ಟ, ಈ ಭಾಗದಲ್ಲಿ ಎಷ್ಟರಮಟ್ಟಿಗೆ ಆಗಿವೆ ? ಕೃಷಿ ಆಧಾರದ ಮೇಲೆ ಜೀವನ ಮಾಡತಕ್ಕ ಪ್ರದೇಶದಲ್ಲಿ ಈ ವರ್ಗದ ಜನರ ಆರ್ಥಿಕ ಶಕ್ತಿ ಎಷ್ಟರಮಟ್ಟಿಗೆ ಮುಂದೆ ಹೋಗಿದೆ ಎಂಬುದನ್ನು ಪರಿಶೀಲನೆ ಮಾಡಿ, ಸಮೀಕ್ಷೆ ಮಾಡಬೇಕಾಗುತ್ತದೆ ಹಾಗೂ ಮಾಡಬೇಕು ಎಂದು ನಾನೂ ಹೇಳುತ್ತೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ, ನೀರಾವರಿ ಪ್ರದೇಶದಲ್ಲಿ ಈ ವರ್ಗದ ಜನರ ದುಡಿಮೆಯ ಶಕ್ತಿ ಹೆಚ್ಚಾಗಿದೆ. ಆರ್ಥಿಕ ಶಕ್ತಿ ಇಲ್ಲಿ ಹೆಚ್ಚಾಗಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಕೇವಲ ೨೩ ಆಂಟಿ ಪಾವರ್ಟಿ ಪ್ರೋಗ್ರಾಮ್ಸ್‌ನ್ನು ಜಾರಿಗೆ ತಂದಿದ್ದೇವೆ. ನೀರಾವರಿ ಹೊರಗೆ ಇರತಕ್ಕ ಜನರಿಗೆ ಬಲ ತಂದಿದ್ದೇವೆ. ಇನ್ನು ಈ ದೇಶದ ಮೂಲ ಮಂತ್ರ ಇರತಕ್ಕಂಥ ಪೂರ್ಣ ಜಲಸಂಪತ್ತನ್ನು ಉಪಯೋಗ ಮಾಡಿಕೊಳ್ಳುವುದಾದರೆ, ಅಧಿಕ ಭೂಮಿ

ಇರತಕ್ಕ ಕೃಷಿಕಾರ್ಮಿಕರ ಆರ್ಥಿಕ ಶಕ್ತಿಯೂ ತನ್ನಷ್ಟಕ್ಕೆತಾನೆ ಮೇಲೆ ಹೋಗುತ್ತದೆ. ಇದನ್ನು ಸಮೀಕ್ಷೆಯ ಆಧಾರದ ಮೇಲೆ ಹೇಳಬಹುದು. ನಾನು ಇದಕ್ಕೆ ಹಲವಾರು ಅಂಕಿಅಂಶಗಳನ್ನು ಉಲ್ಲೇಖ ಮಾಡಬಲ್ಲೆ. ನಾನು ಆ ವಿಷಯವಾಗಿ ಸುಮ್ಮನೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸಾಕಷ್ಟು ಆಧಾರಗಳನ್ನಿಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ ಮಾನ್ಯ ವೀರಪ್ಪಮೊಯಿಲಿಯವರು ತುಂಬಾ ಚೆನ್ನಾಗಿ ಮಾತನಾಡಿದರು. ಬಂಡವಾಳ ಹೂಡಿಕೆಯಲ್ಲಿ ನೀರಾವರಿಗೆ ಸಾಕಷ್ಟು ಪ್ರಾಧಾನ್ಯ ಕೊಟ್ಟಿಲ್ಲ ಎಂದು ಹೇಳಿದರು. ನಾನು ಅವರ ಮಾತನ್ನು ಸಾಕಷ್ಟು ಮೆಚ್ಚಿಕೊಳ್ಳುತ್ತೇನೆ ಅವರು ಮಾಡಿರತಕ್ಕಂಥ ಟೀಕೆಗೆ ನಾನು ಈ ಮಾತನ್ನು ಹೇಳಲೇಬೇಕಾಗಿದೆ. ಅಪಾರ್ಥ ಕಲ್ಪನೆ ಮಾಡಿಕೊಳ್ಳದಿರುವುದಕ್ಕೆ ಈ ಮಾತನ್ನು ಹೇಳುತ್ತೇನೆ. ಇದು ಸದನಕ್ಕೆ ಸಂಬಂಧಪಟ್ಟದ್ದು ಅಲ್ಲದೇ ಇದ್ದರೂ ಕೂಡ ಪ್ರಾಸಂಗಿಕವಾಗಿ ಒಂದು ಮಾತನ್ನು ಹೇಳುತ್ತೇನೆ. ಕೇಂದ್ರ ಸರ್ಕಾರದ ಬಜೆಟ್ ಹೊರಗೆ ಬಿದ್ದಿದೆ. ಮಾನ್ಯ ಕೆ. ಹೆಚ್. ಪಾಟೀಲರೂ ತುಂಬಾ ಚೆನ್ನಾಗಿ ಹೇಳಿದರು. ಆಂಟಿ ಪಾವರ್ಟಿ ಪ್ರೋಗ್ರಾಂಗೆ ೬೫ ಪರ್ಸೆಂಟ್ ಹಣ ಒದಗಿಸಿದ್ದಾರೆಂದು ಹೇಳಿದರು. ಅಂದರೆ ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚು. ನೀರಾವರಿಗೆ ಎಷ್ಟು ಹಣವನ್ನು ಒದಗಿಸಿದ್ದೇವೆ ಎಂಬ ಮಾತನ್ನು ಹೇಳುವುದಕ್ಕೆ ಇವತ್ತು ನಾನು ತಯಾರಿದ್ದೇನೆ.

ಕಾರಣ ಇಷ್ಟೆ. ನಾನು ಹಿಂದೆಯೂ ಕೂಡ ಈ ಮಾತನ್ನು ಹೇಳಿದ್ದೇನೆ. ರಾಜಕೀಯ ಪಕ್ಷಕ್ಕೆ ಕೇವಲ ಅನುತ್ಪಾದಕ ವೆಚ್ಚವನ್ನು ಹೆಚ್ಚು ಮಾಡತಕ್ಕಂಥ ಒಂದು ದೃಷ್ಟಿಕೋನ, ಮತ್ತೊಂದು ದೃಷ್ಟಿಕೋನ ತಾತ್ಕಾಲಿಕ ಪರಿಹಾರವನ್ನು ಕೊಡತಕ್ಕಂಥದ್ದು ಇರುತ್ತದೆ. ಇವೆರಡರ ಹಿನ್ನಲೆಯಲ್ಲಿ ಪೈಪೋಟಿಯಲ್ಲಿ ನಾವು ಮಗ್ನರಾಗಿದ್ದೇವೆ. ಇದು ಕೇವಲ ಒಂದು ರಾಜಕೀಯ ಪಕ್ಷಕ್ಕೇನೇ ಸೀಮಿತವಾದುದೇನೂ ಅಲ್ಲ ಈ ಬಗ್ಗೆ ಬೇಸಿಕ್ ಫೌಂಡೇಷನ್ ಆಗಲಿ ಅಥವಾ ಎಕನಾಮಿಕ್ ಫೌಂಡೇಷನ್ ಹಾಕುವಂಥಾದ್ದಾಗಲಿ ಇದ್ದರೆ ಅದು ಆರ್ಥಿಕ ವ್ಯವಸ್ಥೆಯಲ್ಲಿ ಯಾವ ಕಾರ್ಯಕ್ರಮಕ್ಕಾದರೂ ಆಗುತ್ತದೆ ಇದರ ಬಗ್ಗೆ ನಾವೆಲ್ಲರೂ ಕೂಡ ಹಿಂದೆ ಬಿದ್ದಿದ್ದೇವೆಂದು ಈ ಸದನದಲ್ಲಿ ಹೇಳಿದ್ದನ್ನು ಅವರು ಒಪ್ಪಿಕೊಳ್ಳಲೇ ಬೇಕಾಗಿದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳುವುದಾದರೆ ನಮ್ಮ ನೋಟ, ನಮ್ಮ ದೃಷ್ಟಿಕೋನ. ನಮ್ಮ ದಿಕ್ಕು, ಯಾವ ಕಡೆಗೆ ಹೋಗಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡುವ ಕಾಲ ಸಮೀಪವಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಸ್ವಾಮಿ, ನಾನು ಈ ಮಾತನ್ನು ೩೫ ವರ್ಷಗಳಿಂದಲೂ ಉಲ್ಲೇಖ ಮಾಡುತ್ತಾ ಬಂದಿದ್ದೇನೆ. ಇಡೀ ರಾಷ್ಟ್ರದ ಯಾವುದೇ ಭಾಗ ಇರಲಿ ಆ ಬಗ್ಗೆ ನಮ್ಮ ಒಟ್ಟು ಇಡೀ ರಾಷ್ಟ್ರದ ಜಲ ಸಂಪತ್ತು ೧೫೫೦ ಮಿಲಿಯನ್ ಇದ್ದರೆ ಏಳನೇ ಪಂಚವಾರ್ಷಿಕ ಯೋಜನೆಯ ಎರಡನೆ ವರ್ಷಕ್ಕೆ ನಾವು ಆ ಬಗ್ಗೆ ಕಾಲು ಇಟ್ಟಿದ್ದೇವೆ. ಈವೊತ್ತು ನಮ್ಮ ರಾಜ್ಯದ ಬಗ್ಗೆ ನಾವು ಉಪಯೋಗ ಮಾಡಿ ಕೊಂಡಿರತಕ್ಕಂಥಾದ್ದು ೨೦೦ ಮಿಲಿಯನ್ ಎಕರ್ಸ್ ಫುಟ್ ಮಾತ್ರ ಎಂದು ಮತ್ತೊಮ್ಮೆ ಒತ್ತಿ ಹೇಳ ಬೇಕಾಗಿದೆ. Economically useable water in this Country is 500 millian acres foot ಇನ್ನು ೩೦೦ ಮಿಲಿಯನ್ ಏರಿಯಾ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಇದನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ನಮ್ಮ ರಾಜ್ಯಕ್ಕೆ ಇನ್ನೂ ಒಂದು ಲಕ್ಷ ೩೬ ಸಾವಿರ ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕಾಗಿದೆ. ನೀವು ಹೋಗುವ ದಿಕ್ಕಿನಲ್ಲೇ ಹೋಗುವುದಾದರೆ ಅದರ ಬಗ್ಗೆ ಹೋದ ವರ್ಷ ೬೫ ಪರ್ಸೆಂಟ್ ಅಷ್ಟು ಹೆಚ್ಚುವರಿ ಪ್ರಮಾಣದಲ್ಲಿ ಮಾತ್ರ ಆಂಟಿ ಪಾವರ್ಟಿ ಪ್ರೋಗ್ರಾಂಗೆ ಉಪಯೋಗ ಮಾಡಿಕೊಂಡು ಹೋಗುತ್ತಿದ್ದೇವೆ. ೩೬–೩೭ ವರ್ಷದಿಂದಲೂ ಕೂಡ ಈ ಒಂದು ಕಹಿ ಅನುಭವವನ್ನು ನಾವು ಅನುಭವಿಸುತ್ತಿದ್ದೇವೆ ಇನ್ನೂ ನಾವು ಕಲಿತುಕೊಳ್ಳಬೇಕಾದ್ದು ಬೇಕಾದಷ್ಟು ಇದೆ ಈ ಒಂದು ಪೈಪೋಟಿಯಲ್ಲಿ ನಾವು ಎಷ್ಟರಮಟ್ಟಿಗೆ ಹೋಗಬೇಕಾಗಿದೆ ಎನ್ನುವುದನ್ನು ತಿಳಿಸುತ್ತೇನೆ. ಶ್ರೀಮಾನ್ ವೀರಪ್ಪಮೊಯ್ಲಿ ಅವರು ಹೇಳಿದ ವಿಷಯಕ್ಕೆ ನಾನು ಆಮೇಲೆ ಬರುತ್ತೇನೆ ಈ ನೀರಾವರಿ ಬಗ್ಗೆ ನಮ್ಮ ಬಂಡವಾಳ ಹೂಡಿಕೆ ಕಂಪೇರ್ ಟು ದಿ ಟೋಟಲ್ ಪ್ಲಾನ್ ಸೈಜ್ ಇಳಿಮುಖವಾಗುತ್ತಾ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಅವರ ಮಾತನ್ನು ಉತ್ಪ್ರೇಕ್ಷೆ ಮಾತು ಎಂದು ಹೇಳುವುದಿಲ್ಲ ಅವರು ಯಾವ ಆಧಾರದ ಮೇಲೆ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದನ್ನೇ ನಾನು ಇಟ್ಟುಕೊಂಡು ಉಲ್ಲೇಖನಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವೀರಪ್ಪಮೊಯ್ಲಿ ಅವರು ಅರ್ಥ ಸಚಿವರಾಗಿದ್ದ ಕಾಲದಲ್ಲಿ ಅವರು ಇದಕ್ಕಾಗಿ ಬಂಡವಾಳ ಏನು ತೊಡಗಿಸಿದ್ದಾರೆ ನಾವು ಏನೋ ಹಿಂದೆ ಹೋಗಿದ್ದೇವೆ ಎಂದು ಹೇಳಿದ್ದಾರೆ. ಸಂತೋಷ ಸ್ವಾಮಿ ಈ ಮೈನರ್ ಇರ್ರಿಗೇಷನ್ ಅನ್ನು ಅವರು ತೆಗೆದುಕೊಂಡರು

ಅದರ ಬಗ್ಗೆ ಕೆಲವು ಅಂಕಿಸಂಖ್ಯೆಗಳನ್ನು ತಮ್ಮ ಮುಂದೆ ಇಡುತ್ತೇನೆ. ೮೦–೮೧, ೮.೨೨ ೧೯೮೧–೮೨ಕ್ಕೆ ೬.೬೩ ಪರ್ಸೆಂಟ್ ಇದ್ದರೆ, ೧೯೭೭–೭೮ ಕ್ಕೆ ೫.೮೧ ಪರ್ಸೆಂಟ್ ಇದೆ. ನಾನು ನಿಮಗೆ ಈ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಪೇಜ್ ೨೬ ರಲ್ಲಿ ಈ ಒಂದು ಅಂಕಿ ಅಂಶ ಇದೆ ದಯವಿಟ್ಟು ತೆಗೆದುನೋಡಿ ಈ ಮೈನರ್ ಇರಿಗ್ರೇಷನ್‌ಗೆ ೮೦–೮೧ ರಲ್ಲಿ ೮.೨೫ ಪರ್ಸೆಂಟ್ ಇದ್ದರೆ ೧೯೮೧–೮೨ ರಲ್ಲಿ ೬.೬೩ ಪರ್ಸೆಂಟ್ ಹೋಗಿದೆ ೧೯೮೨–೮೩ ರಲ್ಲಿ ೫.೮೧ ಪರ್ಸೆಂಟ್‌ಗೆ ಹೋಗುತ್ತದೆ ಎಂದರೆ ನೀವು ಅರ್ಥ ಸಚಿವರಾಗಿದ್ದಂಥ ಕಾಲದಲ್ಲೇ ಇದಕ್ಕೆ ತೊಡಗಿಸಿದ ಹಣದ ವ್ಯವಸ್ಥೆಯು ವ್ಯವಹಾರ ಆಧಾರದ ಮೇಲೆ ನಾನು ಹೇಳಿದಾಗ ಇದರ ಪ್ಲಾನ್ಡ್ ಸೈಜ್ ಎಷ್ಟು ಕಡಿಮೆಯಾಗಿದೆ ಅನ್ನುವುದನ್ನು ತಿಳಿದುಕೊಳ್ಳಬಹುದು. ಆ ನಿರ್ಣಯದ ಮೇಲಿನ ಅಭಿಪ್ರಾಯವನ್ನೇ ನಾನು ಈಗ ವ್ಯಕ್ತಪಡಿಸುತ್ತಾ ಇದ್ದೇನೆ ಆಮೇಲೆ ನಾನು ಮುಂದಕ್ಕೆ ಹೋಗುತ್ತೇನೆ, ಇನ್ನು ರೋಡ್ಸ್ ಅಂಡ್ ಬ್ರಿಡ್ಜಸ್ ಬಗ್ಗೆ ಹೇಳುವುದಾದರೆ ರೂರಲ್ ಓರಿಯೆಂಟೆಡ್ ಪ್ರೋಗ್ರಾಂನಲ್ಲಿ ೧೯೮೦–೮೧ ರಲ್ಲಿ ೬.೧೮ ಪರ್ಸೆಂಟ್ ಆಗಿದೆ, ೧೯೮೧–೮೨ ರಲ್ಲಿ ೫.೭೫ ಪರ್ಸೆಂಟ್ ಆಗಿದೆ ೧೯೮೨–೮೩ ರಲ್ಲಿ ೫.೭೮ ಪರ್ಸೆಂಟ್ ಆಗಿದೆ, ೧೯೮೩–೮೪ ರಲ್ಲಿ ೭.೨೯ ಪರ್ಸೆಂಟ್ ಆಗಿದೆ ಇದು ವಾಸ್ತವಾಂಶವಲ್ಲ ಎನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ. ಇದರ ಟೋಟಲ್ ಪ್ಲಾನ್ಡ್ ಸೈಜ್ ಹೇಳಬೇಕಾದರೆ ಈ ಸೆಕ್ಟರ್‌ನಲ್ಲಿ ಎಷ್ಟು ಅಲಾಟ್ ಮಾಡಿದ್ದೇವೆ. ಯಾವ ಆಧಾರದ ಮೇಲೆ ನೀವು ಅಲಾಟ್ ಮಾಡಿದ್ದೀರಿ ಆ ಆಧಾರದ ಮೇಲೆ ನಾನು ಉಲ್ಲೇಖ ಮಾಡಿದ್ದೇನೆ. ಇನ್ನು ಮನಿವೈಸ್ ತೆಗೆದುಕೊಂಡರೆ ಹಿಂದೆ ನೀವು ಯಾವ ರೀತಿಯಾಗಿ ಅದಕ್ಕೆ ತೊಡಗಿಸಿದ್ದೀರಿ ಅದೇರೀತಿಯಾಗಿ ನಾವೂ ತೊಡಗಿಸಿದ್ದೇವೆ, ಬೇಕಾದರೆ ಅದರ ಅಂಕಿ ಅಂಶಗಳನ್ನೂ ಕೊಡುತ್ತೇನೆ. ಇನ್ನು ಫಿಜಿಕಲ್ ಪರ್ಫಾರ್ಮನ್ಸ್ ಇನ್‌ವೆಸ್ಟ್‌ಮೆಂಟ್ ಆಧಾರದ ಮೇಲೆ ನೀವು ಏನು ಬಂಡವಾಳ ಹೂಡಿದ್ದೀರಿ ನಾನು ಅದರ ಹಿಂದಿನ ವರ್ಷಕ್ಕೆ ಹೋಗುವುದಿಲ್ಲ, ನೀವು ಆ ವರ್ಷ ಏನು ಬಂಡವಾಳ ಹೂಡಿದ್ದೀರಿ ಆ ಅಂಕಿ ಅಂಶ ಮಾತ್ರ ಕೊಡುತ್ತೇನೆ ಇದರ ಜೊತೆಗೆ ಫಿಸಿಕಲ್ ಪರ್ ಫಾರ್ಮೆನ್ಸ್ ವೈಸ್ ಬಗ್ಗೆ ಹೇಳುವುದಾದರೆ ಅದು ಅಷ್ಟೊಂದು ಆಶಾದಾಯಕವಾಗಿ ಆಗಿಲ್ಲ ಒಟ್ಟು ಭಾಷಣದ ನಿಮ್ಮ ಸಾರಾಂಶ ಜನತಾ ಸರ್ಕಾರ ಬಂದ ಮೂರು ವರ್ಷದಲ್ಲಿ ಎಲ್ಲಾ ಹಳ್ಳಿಗಳಿಗೂ ಈ ಬಗ್ಗೆ ಪುರಸ್ಕಾರ ಕೊಟ್ಟಿರುವುದು ಕಡಿಮೆ ಎಂದು ಹೇಳಿದ್ದೀರಿ ಮತ್ತು ಎಲ್ಲಾ ಹಳ್ಳಿಗಳಿಗೂ ಪೂರಕವಾದ ಕಾರ್ಯಕ್ರಮವನ್ನು ಜನತೆಗೆ ಸರಿಯಾಗಿ ಹಾಕಿಲ್ಲ ಬಹಳ ಕಡಿಮೆ ಎಂದು ಹೇಳಿದ್ದೀರಿ. ಈ ಒಂದು ಇಲಾಖೆ ನೀರಾವರಿಯಲ್ಲಾಗಲಿ ಅಥವಾ ಸಂಪರ್ಕ ವ್ಯವಸ್ಥೆಯಲ್ಲಾಗಲಿ ಎಷ್ಟರ ಮಟ್ಟಿಗೆ ನಾವು ಹಣವನ್ನು ತೊಡಗಿಸಿದ್ದೇವೆ ಎಂದು ಹೇಳುವುದರ ಬಗ್ಗೆ ಅವರು ಏನು ಉಲ್ಲೇಖ ಮಾಡಿದ್ದಾರೆ ಅದರ ಬಗ್ಗೆ ಉಲ್ಲೇಖ ಮಾಡುವುದಾದರೆ ಅದರ ಬಗ್ಗೆ ಅವರು ಏನು ಸಾಬೀತು ಮಾಡಬೇಕು ಎಂದು ನಾನು ಈ ಸದನದ ಮುಖಾಂತರ ರಾಜ್ಯದ ಜನತೆಗೆ ಹೇಳಬೇಕು ಎಂದು ಹೇಳುತ್ತೇನೆ ಜನತಾ ಸರ್ಕಾರದಲ್ಲಿ ಈ ಒಂದು ದಿಕ್ಕಿನಲ್ಲಿ ವಿಫುಲವಾಗಿದೆ ಜನತಾ ಸರ್ಕಾರದಲ್ಲಿ ಇವೊತ್ತು ಕೇವಲ ಹೊರಗಡೆ ಅಬ್ಬರವಾಗಿ ಪ್ರಚಾರ ಭಾಷಣದಲ್ಲಿ ತೊಡಗತಕ್ಕ ಪರಿವಾತವಿದೆ. ಆದರೆ ಆ ಬಗ್ಗೆ ಪರಿಸರದಲ್ಲಿ ಕೆಲಸ ಮಾಡುವುದಕ್ಕೆ ತೊಡಗಿದೆ. ಅವರು ಒಟ್ಟು ಭಾಷಣದ ಸಾರಾಂಶದ ಬಗ್ಗೆ ಹೆಲ್ತಿ ಡಿಬೇಟ್ ಆದರೆ ನನಗೆ ಸಂತೋಷ ಇದರ ಬಗ್ಗೆ ಚರ್ಚೆಯಾಗಬೇಕು ಶ್ರೀಮಾನ್ ವೀರಪ್ಪ ಮೊಯ್ಲಿ ಅವರ ಭಾಷಣ ಆಗುವಾಗ ನಾನು ಇಲ್ಲಿದ್ದರೂ ಓಡಿಬಂದು ಕೇಳುತ್ತಿದ್ದೆ ಆದರೆ ಆವೊತ್ತಿನ ದಿವಸ ಬಂಡೀ ಸಿದ್ದೇಗೌಡರ ಒಂದು ಕಾರ್ಯಕ್ಕೆ ಹೋಗಿದ್ದುದರಿಂದ ಆವೊತ್ತು ಅವರ ಭಾಷಣವನ್ನು ಕೇಳುವುದಕ್ಕೆ ಆಗಲಿಲ್ಲ. ಈ ಸದನಕಲಿಕೆಗೆ ಒಂದು ವೇದಿಕೆ ಇಲ್ಲದೇ ಹೋದರೆ ಆವೊತ್ತು ನಾನು ಇದ್ದು ತಾವು ಹೇಳುವ ವಿಷಯಗಳನ್ನೆಲ್ಲಾ ಎಚ್ಚರ ವಹಿಸಿ ಒಂದೊಂದು ಮಾತನ್ನೂ ಸಹ ಗ್ರಹಿಸುತ್ತಿದ್ದೆ ಅದು ಆಗಲಿಲ್ಲ ಜನತಾ ಸರ್ಕಾರದ ಬಗ್ಗೆ ಹೇಳಬೇಕಾದರೆ ನಾನು ಎಲ್ಲವನ್ನೂ ಸಹ ಇದು ಹಳೇ ಕಥೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಅವಶ್ಯಕತೆ ನನಗೆ ಈಗ ಇಲ್ಲ ಅವರು ಅರ್ಥಸಚಿವರಾಗಿದ್ದಂಥ ಕಾಲದಲ್ಲಿ ಇದಕ್ಕೆ ಎಷ್ಟು ಬಂಡವಾಳವನ್ನು ಹೂಡಿದ್ದಾರೆ, ನಾವು ಈಗ ನಾವು ಏನು ಮಾಡಿದ್ದೇವೆ ಅದನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ ಮೇಜರ್ ಅಂಡ್ ಮೀಡಿಯಂ ಇರ್ರಿಗೇಷನ್‌ಗೆ ೧೯೮೦–೮೧ ರಲ್ಲಿ ಅವರು ಖರ್ಚು ಮಾಡಿದಂಥ ಹಣದ ಮೊತ್ತದ ವಿಚಾರವಾಗಿ ಹೇಳುತ್ತೇನೆ. ಅವರು ಮೈನರ್ ಇರ್ರಿಗೇಷನ್‌ಗೆ ಖರ್ಚು ಮಾಡಿರತಕ್ಕಂಥಾದ್ದು ೨೦ ಕೋಟಿ ೯೬ ಲಕ್ಷ ರೂಪಾಯಿ, ಮೇಜರ್ ಇರ್ರಿಗೇಷನ್‌ಗೆ ೭೨ ಕೋಟಿ ೫೫ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ಇದು ಪ್ಲಾನ್‌ನಲ್ಲಿ ಖರ್ಚು ಮಾಡಿರತಕ್ಕಂಥಾದ್ದು ಅಂಡರ್ ನಾನ್ ಪ್ಲಾನ್ ನಲ್ಲಿ ಮೇಜರ್ ಅಂಡ್ ಮೀಡಿಯಂ ಇರ್ರಿಗೇಷನ್‌ಗೆ ೨೫ ಕೋಟಿ ೧೫ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ.

ಆದರಲ್ಲಿ ನಾನ್ ಪ್ಲಾನ್‌ನಲ್ಲಿ ಮೈನರ್ ಇರಿಗೇಷನ್ ಮಾಡಿಲ್ಲ. ಇದರಲ್ಲಿ ಕಾವೇರಿ ಬೇಸಿನ್ ಪ್ರಾಜೆಕ್ಟ್ ಮಾತ್ರ ಬರುತ್ತದೆ. ಆದರಲ್ಲಿ ತೊಡಗಿಸಿರತಕ್ಕ ಹಣ ೯೭ ಕೋಟಿ ೭೦ ಲಕ್ಷ ರೂಪಾಯಿಗಳು ಒಟ್ಟು ಇಟ್ಟು ಹಣವನ್ನು ಮೇಜರ್ ಅಂಡ್ ಮೈನರ್ ಇರಿಗೇಷನ್‌ಗೆ ಪ್ಲಾನ್‌ನಲ್ಲಿ ಖರ್ಚು ಮಾಡಿದ್ದಾರೆ ಆದರೆ ಜನತಾ ಸರ್ಕಾರ ೧೯೮೬–೮೭ಕ್ಕೆ ಇಟ್ಟಿರತಕ್ಕ ಹಣ ೧೮೫.೦೫ ಕೋಟಿ ರೂಪಾಯಿಗಳು ಎಂದರೆ ೧೯೮೬–೮೭ಕ್ಕೆ ನಾವು ಒದಗಿಸಿರತಕ್ಕ ಹಣದ ಗಾತ್ರ ೧೮೫.೦೫ ಕೋಟಿ ರೂಪಾಯಿಗಳು ಇದು ಪ್ಲಾನ್ ಅಂಡ್ ನಾನ್‌ಪ್ಲಾನ್ ಮಾತ್ರ. ಮೇಜರ್ ಅಂಡ್ ಮೈನರ್ ಇರಿಗೇಷನ್ ಎರಡನ್ನೂ ಸೇರಿಸಿಕೊಂಡಾಗ ಇವೊತ್ತು ೧೮೫.೦೫ ಕೋಟಿ ಇಟ್ಟಿದ್ದೇವೆ, ಎಗೆನೆಸ್ಟ್ ೯೭–೦೭ ಕೋಟಿ ರೂಪಾಯಿಗಳು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ದೇವೇಗೌಡರು ಎಷ್ಟು ಚೆನ್ನಾಗಿ ಮಾತನಾಡುತ್ತಾ ಇದ್ದಾರೆ, ಜನತಾಪಕ್ಷದವರು ಒಬ್ಬರಾದರೂ ಸದಸ್ಯರಿದ್ದಾರೆಯೋ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಾವೆಲ್ಲಾ ಇದ್ದೇವೆ.

ಅಧ್ಯಕ್ಷರು.—ನಿಮ್ಮ ಕಡೆ ಇರುವವರೇ ಇಲ್ಲ, ಕೋರಂ ಇದೆ.

ಶ್ರೀ ಹೆಚ್.ಡಿ. ದೇವೇಗೌಡ.—ಟೋಟಲ್ ಇನ್‌ವೆಸ್ಟ್‌ಮೆಂಟ್, ಇನ್‌ಕ್ರೀಸ್ಡ್ ಇನ್‌ವೆಸ್ಟ್‌ಮೆಂಟ್ ೯೭.೭೦ ಕೋಟಿ ಅವರು ಮಾಡಿದ್ದರೆ ನಾವು ಮಾಡತಕ್ಕಂಥಾದ್ದು ೧೮೫.೦೫ ಕೋಟಿ. That means there is an increase of 87.35 crores in the total allocation.

ಮಾನ್ಯ ಬಸವಲಿಂಗಪ್ಪನವರು ೧೦೦ಕ್ಕೆ ೬೦ ರೂಪಾಯಿಗಳನ್ನು ತಿಂದು ಹಾಕುತ್ತಾರೆ ಎಂದು ಹೇಳಿದರು. ಅವರು ಈ ಜಾಗದಲ್ಲಿ ಕುಳಿತು ವಾದ ಮಾಡಿದರು. ಕಾವೇರಿ ಸೆಕೆಂಡ್ ಸ್ಟೇಜ್ ಅವರೇ ಮಾಡಿದರು. ಈಗ ೧೦೦ಕ್ಕೆ ೬೦ ರೂಪಾಯಿಗಳು ಹೋಗುತ್ತದೆ ಅಂದರೆ ಬೆಂಗಳೂರಿಗೆ ನೀರೇ ಬರುವುದಿಲ್ಲ. ಅವರು ಮುನಿಸಿಪಲ್ ಅಡ್ಮಿಸ್ಟ್ರೇಷನ್ ಮಂತ್ರಿಗಳಾಗಿದ್ದಾಗ ಕಾವೇರಿ ಸೆಕೆಂಡ್ ಸ್ಟೇಜ್ ಅವರೇ ಮಾಡಿದ್ದುದು. ೧೦೦ಕ್ಕೆ ೬೦ ರೂಪಾಯಿಗಳು ಹೊರಟು ಹೋಗುತ್ತದೆ ಎಂದರೆ ನೀರು ಈ ಊರಿಗೆ ಬರಲಿಕ್ಕೆ ಸಾಧ್ಯವಿರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ದೇವೇಗೌಡರು ಹೇಳಿದರು......

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ಆಮೇಲೆ ಮಾತನಾಡಿ, ಮಂತ್ರಿಗಳ ಉತ್ತರ ಮುಗಿಯಲಿ.

ಶ್ರೀ ಬಿ. ಬಸವಲಿಂಗಪ್ಪ.—ದಯಮಾಡಿ ಇಂತಹ ಸಂದರ್ಭದಲ್ಲಿ ಮಧ್ಯೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು, ಇದು ನಂಬರ್ ಒನ್. ಇಲ್ಲದೇಹೋದರೆ ಒಂದು ರೀತಿ ರೋಟೀನಾಗಿ ನಡೆಯುತ್ತಾ ಇರುತ್ತದೆ. ಮಾನ್ಯ ದೇವೇಗೌಡರು ನನ್ನ ಬಗ್ಗೆ ಹೇಳಿದರು. ಕಾವೇರಿ ನೀರನ್ನು ಬೆಂಗಳೂರಿಗೆ ತೆಗೆದುಕೊಂಡು ಬಂದೆ, ಆ ಯೋಜನೆ ಹಲವಾರು ವರ್ಷಗಳಿಂದ ಹಾಗೇ ನಿಂತಿತ್ತು. ನಾನು ಆವತ್ತು ಅಧಿಕಾರ ವಹಿಸಿಕೊಂಡಾಗ ಇಲ್ಲಿ ಸದನದಲ್ಲಿ ಹೇಳಿದ್ದೆ, ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಮಗೆ ಕಿವಿಯಲ್ಲಿ ಕೇಳಿದ್ದುದು ಜ್ಞಾಪಕ ಇರಬಹುದು. ಒಂದು ವರ್ಷದೊಳಗಾಗಿ ಕಾವೇರಿ ನೀರನ್ನು ಬೆಂಗಳೂರಿಗೆ ತಂದು ಕೊಡುತ್ತೇವೆ ಎಂದು ಹೇಳಿದ್ದೆ, ಅದಕ್ಕೆ ಮುಂಚಿತವಾಗಿ ತಂದೆ. ಅದು ಆಗ ಆಗದೇ ಇದ್ದಿದ್ದರೆ ಇಂತಹ ಬರಗಾಲದ ಕಾಲದಲ್ಲಿ ಏನಾಗುತ್ತಿತ್ತೋ ಗೊತ್ತಿಲ್ಲ ಒಂದು ಮಾತನ್ನು ಹೇಳುತ್ತೇನೆ. ಎಲ್ಲಾ ಕಂಟ್ರಾಕ್ಟರ್ಸ್ ಟೀ ಕೊಡುತ್ತಾರೆ ತೊರೆಕಾಡನಹಳ್ಳಿಗೆ ದಯಮಾಡಿ ಬರಬೇಕು ಎಂದು ಆಫೀಸರ್ಸ್ ಹೇಳಿದರು. ಆಗ ನಾನು ಹೇಳಿದೆ, ಈಗ ನನ್ನ ಮೇಲೆ ಪ್ರೇಮ ಉತ್ಪತ್ತಿಯಾಗಿದೆ, ಇವರಲ್ಲಿ ನಾನು ಎಂದೂ ಅವರನ್ನು ನೋಡೇ ಇಲ್ಲ. ಈಗ ಏಕೆ ಬಂತು ಪ್ರೇಮ ? ನಾನು ಪ್ರೇಮಕ್ಕೋಸ್ಕರ ಬಲಿಯಾಗುವುದಿಲ್ಲ, ಇನ್ನು ಮೇಲೆ ಕೆಲಸಕಾರ್ಯಗಳನ್ನು ಏನು ಮಾಡುತ್ತೀರಿ, ಆ ಕೆಲಸಗಳ ಮುಖ ನೋಡುವುದಕ್ಕೆ ತಯಾರಾಗಿದ್ದೇನೆ. ಇದು ಮುಗಿಯುವವರೆಗೆ ನಾನು ಯಾರ ಮುಖವನ್ನು ನೋಡುವುದಿಲ್ಲ ಎಂದು ಹೇಳಿದ್ದೇನೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅದನ್ನು ಸಾಧನೆ ಮಾಡಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ಕೆಲವರು ಬಸವಲಿಂಗಪ್ಪನವರಿಗೆ ಟೀ ಕೊಡುತ್ತೇವೆ ಎಂದು ಕರೆದರು, ಕೆಲವರಿಗೆ ವಿಸ್ಕಿ ಕೊಡುತ್ತೇವೆಂದು ಕರೆಯುತ್ತಾರೆ. ನಮ್ಮ ರಾಜ್ಯದಲ್ಲಿ ಮೊದಲು ಆ

ಪರಿಪಾಠ ಇತ್ತು. ಇಚ್ಛೆ ಪೂರೈಸತಕ್ಕ ವ್ಯವಸ್ಥೆ ದೇಶದಲ್ಲಿತ್ತು. ಇಚ್ಛೆ ಪೂರೈಸತಕ್ಕ ವ್ಯವಸ್ಥೆ ವ್ಯವಸ್ಥಿತವಾಗಿ ದೇಶದಲ್ಲಿ ಜಾರಿಗೆ ತರತಕ್ಕ ಕಾಲ ಇತ್ತು, ಅದಕ್ಕೆ ಇವತ್ತು ಕಡಿವಾಣ ಹಾಕಿದೆ, ನಾನು ಬಂಡವಾಳ ಹೂಡಿಕೆಯ ಬಗ್ಗೆ ಹೇಳುತ್ತಿದ್ದೆ. ೧೯೮೦-೮೧ರಲ್ಲಿ ೯೭.೭೦ ಕೋಟಿ ತೊಡಗಿಸಿದ್ದರೆ ೧೯೮೬-೮೭ಕ್ಕೆ ೧೮೫-೦೫ ಕೋಟಿ ರೂಪಾಯಿಗಳನ್ನು ನಾವು ತೊಡಗಿಸತಕ್ಕ ಪ್ರಯತ್ನ ಮಾಡಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗದೆ. ಇದರಿಂದ ನಾನು ಸಂತುಷ್ಟನಾಗಿದ್ದೇನೆ ಎಂದು ಹೇಳುವುದಿಲ್ಲ. ಸಂತುಷ್ಟನಾಗಿದ್ದೇನೆ ಎಂದು ಹೇಳುವುದಕ್ಕೆ ಸಿದ್ಧವಾಗಿಲ್ಲ. ನಮ್ಮ ಸಮಸ್ಯೆಯ ಗಾತ್ರ ಬಹಳ ದೊಡ್ಡದು. ಆಮೇಲೆ ಸಣ್ಣ ನೀರಾವರಿ ಬಗ್ಗೆ ಹೇಳಿದರು. ೧೯೮೦-೮೧ರಲ್ಲಿ ೨೦.೧೬ ಕೋಟಿ ಇನ್‌ವೆಸ್ಟ್ ಮಾಡಿದ್ದರೆ ನಾವು ಇವೊತ್ತಿನದಿವಸ ೧೯೮೬-೮೭ಕ್ಕೆ ೩೫.೯೭ ಕೋಟಿ ತೊಡಗಿಸತಕ್ಕ ನಿರ್ಣಯ ಮಾಡಿದ್ದೇವೆ. ೧೪,೭೧ ಕೋಟಿ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅಂದರೆ ಮೇಜರ್, ಮೀಡಿಯಂ, ಅಂಡ್ ಮೈನರ್ ಇರಿಗೇಷನ್‌ಗೆ ಟೋಟಲ್ ಇನ್‌ವೆಸ್ಟ್‌ಮೆಂಟ್ ೧೦೨-೦೬ ಕೋಟಿ ರೂಪಾಯಿಗಳನ್ನು ತೊಡಗಿಸತಕ್ಕ ಪ್ರಯತ್ನ ಮಾಡಿದ್ದೇವೆ. ಈ ಒಂದು ಪ್ರಾಮಾಣಿಕ ಪ್ರಯತ್ನವನ್ನು ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಾಡಿದೆ ಎನ್ನುವುದನ್ನು ಈ ಅಂಕಿಅಂಶ ಗಳಿಂದ ತಾವು ಒಪ್ಪಿಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ವ್ಯತ್ಯಾಸ ಇದ್ದರೆ ತಾವು ಪಬ್ಲಿಕ್ ಅಕೌಂಟ್ಸ್ ಕಮಿಟಿ ಚೇರ್ಮನ್ನಾಗಿದ್ದೀರಿ, ೧೯೮೦-೮೧ರಲ್ಲಿ ಏನು ಫಿಗರ್ಸ್ ಇದೆ, ೧೯೮೬-೮೭ಕ್ಕೆ ಬಡ್ಜೆಟ್ ಅಲೋಕೇಷಸ್ ಏನಿದೆ ಇವೆರಡನ್ನೂ ಪರಿಶೀಲನೆಮಾಡಲಿ. ಸ್ವಾಮಿ, ಮಂತ್ರಿಮಹೋದಯರಿಗೆ ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಟೋಟಲ್ ಫೈನಾನ್‌ಷಿಯಲ್ ಇನ್‌ವೆಸ್ಟ್‌ಮೆಂಟ್ ಹೇಳಿದೆ. ಇನ್ ಟರ್ಮ್ಸ್ ಫಿಸಿಕಲ್ ಫರ್‌ಫಾರ್ಮೆನ್ಸ್ ತೆಗೆದುಕೊಂಡಾಗ, ೧೯೮೦-೮೧ರಲ್ಲಿ ಮೇಜರ್ ಮೀಡಿಯಂ ಇರಿಗೇಷನ್‌ನಲ್ಲಿ ರಿವೈಸ್ಡ್ ಟಾರ್ಗೆಟ್ ೩೮,೨೦೦ ಹೆಕ್ಟೇರ್‌ಗೆ ನೀರನ್ನು ಕೊಡಬೇಕಾಗಿತ್ತು. ಆದರೆ ಕೊಟ್ಟಿರತಕ್ಕಂಥಾದ್ದು ೨೦.೪೫೬ ಹೆಕ್ಟೇರುಗಳಿಗೆ. ೧೯೮೦-೮೧ರಲ್ಲಿ ೭೦,೩೪೪ ಹೆಕ್ಟೇರುಗಳಿಗೆ ಮೇಜರ್ ಅಂಡ್ ಮೀಡಿಯಂನಲ್ಲಿ ಪೊಟೆನ್‌ಷಿಯಲ್ ಕ್ರಿಯೇಟ್ ನೀರನ್ನು ಕೊಡಬೇಕಾಗಿತ್ತು. ಆದರೆ ಅಚೀವ್‌ಮೆಂಟ್ ೨೫,೭೬೬ ಹೆಕ್ಟೇರ್ಸ್. ೧೯೮೨-೮೩ರಲ್ಲಿ ರಿವೈಸ್ಡ್ ಟಾರ್ಗೆಟ್ ೭೫,೯೧೦ ಹೆಕ್ಟೇರು ಗಳಿಗೆ ಕೊಡಬೇಕಾಗಿತ್ತು, ೪೮,೮೮೧ ಹೆಕ್ಟೇರುಗಳಿಗೆ ಕೊಟ್ಟಿದ್ದಾರೆ. ೧೯೮೩-೮೪ರಲ್ಲಿ ೮೧,೯೬೦ ಹೆಕ್ಟೇರು ಗಳಿಗೆ ಕೊಡಬೇಕಾಗಿತ್ತು, ಕೊಟ್ಟಿರತಕ್ಕಂಥಾದ್ದು ೫೪,೩೨೨ ಹೆಕ್ಟೇರುಗಳಿಗೆ. ೧೯೮೪-೮೫ರಲ್ಲಿ ೫೯,೪೧೦ ಹೆಕ್ಟೇರುಗಳಿಗೆ ಕೊಡಬೇಕಾಗಿತ್ತು, ೪೬,೫೮೨ ಹೆಕ್ಟೇರುಗಳಿಗೆ ಕೊಟ್ಟಿರತಕ್ಕಂಥಾದ್ದು. ಇದು ಅಚೀವ್‌ಮೆಂಟ್. ಈ ವರ್ಷದ ಫಿಗರ್ಸ್ ಇನ್ನೂ ನಡೆಯುತ್ತಿದೆ, ಆ ಫಿಗರ್ಸನ್ನು ಕೊಡಲಿಕ್ಕೆ ಹೋಗುವುದಿಲ್ಲ, ಮುಂದಿನ ಮೇ ವರೆಗೆ ತೆಗೆದುಕೊಳ್ಳಬೇಕಾಗುತ್ತದೆ. ಬೋತ್ ಫಿಸಿಕಲ್ ಪರ್‌ಫಾರ್ಮೆನ್ಸ್ ಆಸ್ ವೆಲ್ ಆಸ್ ಫೈನಾನ್‌ಷಿಯಲ್ ಇನ್‌ವೆಸ್ಟ್‌ಮೆಂಟ್ ಇದು. ಇನ್‌ವೆಸ್ಟ್ ಮೆಂಟ್ ಮತ್ತು ಫಿಸಿಕಲ್ ಅಚೀವ್‌ಮೆಂಟ್ ಇವೆರಡನ್ನೂ ಸದನದ ಮುಖಾಂತರ ರಾಜ್ಯದ ಜನತೆಯ ಮುಂದೆ ಇಡತಕ್ಕ ಪ್ರಯತ್ನ ಮಾಡಿದ್ದೇನೆ. ಪ್ರಾಮುಖ್ಯವಾಗಿ ರಾಜ್ಯದಲ್ಲಿ ನಾವು ಒಟ್ಟು ನೀರಾವರಿಗೆ ಕೊಟ್ಟಿರತಕ್ಕಂಥಾದ್ದರ ಬಗ್ಗೆ ಆದ್ಯತೆಯ ಒಂದು ಕಿರುಪರಿಚಯವನ್ನು ಮಾಡಿಕೊಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಬಹಳ ಪ್ರಾಮುಖ್ಯವಾಗಿ ಮಾನ್ಯ ವೀರಪ್ಪ ಮೊಯ್ಲಿಯವರ ಮನಸ್ಸು ಕಾಡುತ್ತಾ ಇರತಕ್ಕಂಥಾದ್ದು ಯು.ಕೆ.ಪಿ. ತುಂಬ ಆಸೆ, ಆಸಕ್ತಿಯನ್ನು ಅವರು ವಿರೋಧಪಕ್ಷಕ್ಕೆ ಬಂದಮೇಲೆ ವಹಿಸಿಕೊಂಡಿದ್ದಾರೆ, ತುಂಬ ಸಂತೋಷ. ಇದಕ್ಕೆ ಅವರು ಹಣ ಎಷ್ಟು ಕೊಟ್ಟಿದ್ದಾರೆ, ನಾವು ಎಷ್ಟು ಕೊಟ್ಟಿದ್ದೇವೆ ಎನ್ನುವುದನ್ನು ಪರಿಶೀಲನೆ ಮಾಡೋಣ.

ಎರಡು ಮಾತುಗಳನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಒಂದು ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳಿರುವುದರ ಬಗ್ಗೆ ಎಂದರೆ, ಎಲ್ಲರೂ ಒಂದೇ ಎಂಬ ಮನೋಭಾವವನ್ನು ಬೆಳೆಸಿಕೊಂಡು ಹೋಗುವುದರ ಬಗ್ಗೆ......

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಅದನ್ನು. ಹೇಳಿದ್ದುದು ನಾನು We must fight for the general happiness of all people.

ಶ್ರೀ ಹೆಚ್. ಡಿ. ದೇವೇಗೌಡ.—ತಪ್ಪು ಅಭಿಪ್ರಾಯ ಗ್ರಹಿಕೆಯಾಗಬಾರದು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ದೊಡ್ಡ ನೀರಾವರಿ ಮತ್ತು ಸಣ್ಣ ನೀರಾವರಿ ಬಗ್ಗೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ತೆಲುಗು-ಗಂಗಾ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನಾನು ಒಂದು

ಮಾತನ್ನು ಹೇಳಲಿಚ್ಛಿಸುತ್ತೇನೆ. ಅವರು ಆಗ್ರಹಪೂರ್ವಕವಾಗಿ ಹೇಳಿದ್ದಾರೆ. ಶ್ರೀ ನಿಜಲಿಂಗಪ್ಪನವರು ಮಾಜಿ ಮುಖ್ಯಮಂತ್ರಿಗಳು, ಏನು ಹೇಳಿದ್ದಾರೆ ಎಂದರೆ, ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ, ೧.೨೦೦ ಟಿಎಂಸಿಎಫ್‌ಟಿ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ೧,೨೦೦ ಸಿಕ್ಕುತ್ತದೆ ಎಂಬ ವಾದಕ್ಕೆ ಅರ್ಥ ಈಗಿಲ್ಲ ಈಗಾಗಲೇ ನೀರಿನ ಹಂಚಿಕೆಯು ನಿರ್ಣಯ ಆಗಿ ಹೋಗಿದೆ, ಅದಕ್ಕಿಂತ ಹೆಚ್ಚು ನೀರನ್ನು ಪಡೆಯಲು ಯಾವ ರಾಜ್ಯಕ್ಕೂ ಸಾಧ್ಯವಿಲ್ಲ. ಆಂಧ್ರಪ್ರದೇಶ ಏನಿದೆ, ಅದು ಒಂದು ಪ್ರತ್ಯೇಕ ರಾಷ್ಟ್ರವಾದಾಗ ಆ ಯೋಚನೆ ಮಾಡೋಣ. ಈಗಂತೂ ಅದು ಸಾಧ್ಯವಿಲ್ಲ ನಾನು ಈ ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಮಗೆ ಈಗಿರತಕ್ಕಂತಹ ೭೩೪ ಟಿಎಂಸಿಎಫ್‌ಟಿ ನೀರಿನ ಅವಾರ್ಡ್ ಪ್ರಕಾರ, ಉಪಯೋಗಿಸಿಕೊಳ್ಳುವುದರ ಬಗ್ಗೆ ಈಗ ಹೇಳಿದ್ದೀರಿ. ಇನ್ನು ಎರಡನೆಯದಾಗಿ, ರಿ–ಜನರೇಷನ್‌ನಿಂದ ಬರತಕ್ಕದ್ದು ೧೭ ಟಿಎಂಸಿಎಫ್‌ಟಿ ಷೇರ್ ಆಫ್ ಗೋದಾವರಿ ವಾಟರ್ ಟು ಬಿ ಡೈವರ್ಟೆಡ್ ಟು ಕೃಷ್ಣದಿಂದ ೨೧ ಟಿಎಂಸಿಎಫ್‌ಟಿ ಮತ್ತು ಸರ್‌ಪ್ಲಸ್ ವಾಟರ್ ೩೩೪ ಟಿಎಂಸಿಎಫ್‌ಟಿ ಸಿಕ್ಕುತ್ತದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಇದರಲ್ಲಿ according to the ratio that they have adopted and tribunal award 166 tmcft. total water including the surplus water, re–generation and Godavari diversion ನಿಂದ ಬರತಕ್ಕದ್ದು ಎಲ್ಲವನ್ನೂ ಲೆಕ್ಕಹಾಕಿದರೆ, ೯೪೦ ಟಿಎಂಸಿಎಫ್‌ಟಿ ನೀರು ನಮಗೆ ಸಿಕ್ಕಬೇಕಾಗುತ್ತದೆ. ಪೆನಿನ್ಸುಲಾರ್ ಡೆವಲಪ್‌ಮೆಂಟ್ ೨೧೪ ಟಿಎಂಸಿಎಫ್‌ಟಿ ಹೊಸದಾಗಿ ಪೆನಿನ್ಸುಲಾರ್ ಡೆವಲಪ್‌ಮೆಂಟ್‌ನಿಂದ ೨೧೪ ಟಿಎಂಸಿಎಫ್‌ಟಿ ನೀರು ಸಿಕ್ಕುತ್ತದೆ ಎಂದು ಅಭಿಪ್ರಾಯಪಟ್ಟರೂ ಕೂಡ ನಮಗೆ ಒಟ್ಟು ೧೦೫೪ ಟಿಎಂಸಿಎಫ್‌ಟಿ ಸಿಕ್ಕಬೇಕಾಗುತ್ತದೆ. ಈ ಒಂದು ಯಾರ್ಡ್–ಸ್ಟಿಕ್ ಆಧಾರದ ಮೇಲೆ ನಮಗೆ ಬರತಕ್ಕದ್ದು ೧೦೫೪ ಟಿಎಂಸಿಎಫ್ ನಷ್ಟು ನೀರು ನೀವು ಏನು ಮಾಡಿದ್ದೀರಿ ? ಪ್ರಾಜೆಕ್ಟ್‌ಗಳನ್ನು ಮಾಡಿ ಕಳುಹಿಸಿದ್ದೀರಾ ಎಂದು ಅವರು ಕೇಳಿದರು. ನಾವು ಕಳುಹಿಸಿದ್ದೇವೆ. ಆದರೆ ದುರ್ದೈವ. ಮಾನ್ಯ ಮೊಯಿಲಿಯವರು ಹಿಂದೆ ಅರ್ಥ ಸಚಿವರಾಗಿದ್ದುದರಿಂದ ಅವರಿಗೆ ನಮ್ಮ ದುರ್ದೈವದ ವಿಷಯ ಗೊತ್ತಿರಬಹುದು. ಅದೇನೆಂದರೆ, ಪ್ಲಾನಿಂಗ್ ಕಮಿಷನ್ ವರ್ಕಿಂಗ್ ಗ್ರೂಪ್‌ನವರು ನಾವು ಕಳಿಸಿದ ಪ್ರಾಜೆಕ್ಟ್ ಬಗ್ಗೆ ಏನು ಹೇಳಿದ್ದಾರೆ, ಆನ್ ಗೋಯಿಂಗ್ ಪ್ರಾಜೆಕ್ಟ್‌ಗಳನ್ನು ಮುಗಿಸದೇ ಹೊಸ ಯೋಜನೆಗಳಿಗೆ ಯಾವುದೇ ರೀತಿಯ ಅನುಮತಿ ಕೊಡುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ವೆರಿ ಗುಡ್.

ಶ್ರೀ ಹೆಚ್. ಡಿ. ದೇವೇಗೌಡ.—ಏನು ವೆರಿ ಗುಡ್ ? ಅವರು ಏನು ಹೇಳಿದ್ದಾರೆಂದರೆ,

> "In this connection, the State representatives were advised that as per approach paper to Seventh Plan, no new project should be taken up in view of the on going projects. Working Group did not recommend any outlay for the Seventh Plan for these projects in view for the Seventh Plan."

ನಾವು ಕಳುಹಿಸಿರತಕ್ಕಂತಹ ೭ ಪ್ರಾಜೆಕ್ಟ್‌ಗಳಿಗೆ ಅವರು ಮೊದಲನೆಯ ಹಂತದಲ್ಲೇ ಇದಕ್ಕೆ ಅನುಮತಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ತಮ್ಮ ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಇರತಕ್ಕಂತಹ ಪರಿಸ್ಥಿತಿಯಲ್ಲಿ ನಾವು ತೆಗೆದುಕೊಂಡಂತಹ ಪ್ರಾಜೆಕ್ಟ್‌ಗಳು ಏನಿವೆಯೋ, ಅವುಗಳನ್ನು ಮುಗಿಸಿ, ಮುಂದೆ ಹೊಸ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ, ನಿರ್ಣಯ ಮಾಡಿದ್ದೇವೆ. ತೆಲಗು ಗಂಗ ವಿಷಯದ ಬಗ್ಗೆ ಸಾರಿಸಾರಿ ಹೇಳಿದ್ದಾರೆ ಆಕ್ರೋಷದಿಂದ ಆಗ್ರಹಪೂರ್ವಕವಾಗಿ ಅವರು ಮಾತನಾಡಿದ್ದಾರೆ. ೭೩೪ ಟಿಎಂಸಿಎಫ್‌ಟಿ ನಮ್ಮ ಭಾಗದ ನೀರು ಏನಿದೆಯೋ, ಅದನ್ನು ೨ ಸಾವಿರ ಎ.ಡಿ.ಯೊಳಗೆ ನಾವು ಉಪಯೋಗಿಸಿಕೊಳ್ಳಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಅಥವಾ ನಾನು ೨ ಸಾವಿರ ಎ.ಡಿ. ಯೊಳಗೆ ಇರುತ್ತೇವೆಯೋ, ಇಲ್ಲವೋ ಎಂಬ ಪ್ರಶ್ನೆ ಇಲ್ಲ. ನಾವು ತೆಗೆದುಕೊಂಡಿರತಕ್ಕಂತಹ ನಿರ್ಣಯ ಏನಿದೆ ಅದನ್ನು ಯಾವುದೇ ಸರ್ಕಾರ ಬಂದರೂ ಹಿಂದೆ ಹಾಕಲಿಕ್ಕೆ ಸಾಧ್ಯವಿಲ್ಲ. ನಾವು ಏನು ನಿರ್ಣಯ ಮಾಡಿದ್ದೇವೆ, ನಾಳೆ ಶ್ರೀ ಕೃಷ್ಣನ್‌ರವರು ಬಂದರೂ, ಆ ದಿಕ್ಕಿನಲ್ಲಿ ಹಿಂದೆ

ಹೋಗಲು ಸಾಧ್ಯವಿಲ್ಲ. ನನಗೆ ದೃಢವಾದ ವಿಶ್ವಾಸವಿದೆ. ನಾವು ಒಂದು ಭದ್ರವಾದ ಹೆಜ್ಜೆಯನ್ನು ಇಟ್ಟಿದ್ದೇವೆ ಮತ್ತು ಈ ಯುಕೆಪಿ ಬಗ್ಗೆ ಸಂಬಂಧಪಟ್ಟ ೭೩೪ ಟಿಎಂಸಿಎಫ್‌ಟಿ ನೀರನ್ನು ೨ ಸಾವಿರ ಎ.ಡಿ ಯೊಳಗೆ ಉಪಯೋಗಿಸಿಕೊಳ್ಳಲು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ, ಅವುಗಳನ್ನು ನಾವು ಹಾಕಿಕೊಂಡಿದ್ದೇವೆ. ಯುಕೆಪಿಗೆ ೧೫೧ ಟಿಎಂಸಿಎಫ್‌ಟಿ ನೀರನ್ನು ಈ ೭೩೪ ರಲ್ಲಿ ಅದೂ ಮೊದಲನೆಯ ಸ್ಟೇಜ್‌ನಲ್ಲಿ ಅಲೊಕೇಟ್ ಮಾಡಿದ್ದೇವೆ ಆದರೆ, ಇದರಲ್ಲಿ ಉಪಯೋಗ ಮಾಡಿ ಕೊಂಡಿರುವುದು ೧೧೯ ಟಿಎಂಸಿಎಫ್‌ಟಿ ನೀರು ಮಾತ್ರ. ಈ ತೀರ್ಮಾನ ಮಾಡಿರುವುದು ನಾನಲ್ಲ. ಶ್ರೀ ವೀರಪ್ಪ ಮೊಯಿಲಿಯವರು ಇದ್ದಂತಹ ಕಾಲವಾದ ೧೯೭೭-೭೮ರಲ್ಲಿ ಆಗಿದೆ ಈ ಯುಕೆಪಿ ಪ್ರಾಜೆಕ್ಟನ್ನು ಪ್ರಾರಂಭ ಮಾಡಿದ್ದುದು ೧೯೬೮-೬೯ರಲ್ಲಿ. ಅವೊತ್ತಿನ ಎಸ್ಟಿಮೇಟ್ ಕಾಸ್ಟ್ ೨೮೩ ಕೋಟಿ, ೬೫ ಲಕ್ಷ ರೂಪಾಯಿಗಳು ಆದಾದಮೇಲೆ ನಾವು ವಿಶ್ವಬ್ಯಾಂಕ್‌ನವರು ಏನು ಪ್ರೊಜೆಕ್ಟ್ ಮಾಡಿ ದ್ದಾರೆ ಅಂದರೆ ೨೪೪.೫೪ ಕೋಟಿ ರೂಪಾಯಿ ೧೯೭೮ರಲ್ಲಿ ಇದರ ಫಸ್ಟ್ ಫೇಸ್ ಮಾಡಿದ್ದು. ವಿಶ್ವ ಬ್ಯಾಂಕ್ ಏನು ಒಂದು ಡೆಡ್ ಲೈನ್ ಕೊಟ್ಟಿದ್ದಾರೆ, ಆ ಪೀರಿಯಡ್‌ನಲ್ಲಿ ನಾನು ಖರ್ಚು ಮಾಡಿರುವ ಹಣ ೨೩೮.೨೨ ಕೋಟಿ ರೂಪಾಯಿಗಳು.

೧೯೮೫-೮೬ರಲ್ಲಿ ಖರ್ಚು ಮಾಡತಕ್ಕಂತಹ ಹಣ ೪೯ ಕೋಟಿ ರೂಪಾಯಿಗಳೆಂದು ಲೆಕ್ಕ ಹಾಕಿದ್ದೇವೆ. ಇವೊತ್ತು ವರ್ಲ್ಡ್ ಬ್ಯಾಂಕ್‌ನಿಂದ ಏನು ಕಮಿಟ್ ಮಾಡಿಕೊಂಡಿದ್ದೇವೆ ಅದರ ಪ್ರಕಾರ ನಾವು ಯೂಸ್ ಮಾಡತಕ್ಕಂತಹ ನೀರು ಕೇವಲ ೨೩ ಟಿ.ಎಂ.ಸಿ.ಎಫ್.ಟಿ. ಮಾತ್ರ ಅದೂ ಫಸ್ಟ್ ಫೇಸ್ ನಲ್ಲಿ. ೩೬೬ ಕೋಟಿ ಟೋಟಲ್ ಎಕ್ಸ್‌ಪೆಂಡಿಚರ್ ಆದರೂ ೨೩ ಟಿ.ಎಂ.ಸಿ. ಯಷ್ಟು ನಾವು ಉಪಯೋಗಿಸತಕ್ಕಂತಹ ನೀರು, ಅದರಲ್ಲಿ ಇರಿಗೇಟ್ ಮಾಡತಕ್ಕಂಥಾದ್ದು ೮೦ ಸಾವಿರ ಹೆಕ್ಟೇರ್ ಮಾತ್ರ. ನಾವು ಈಗಾಗಲೇ ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್ ಮಾಡಿದ್ದೇವೆ. ೧೯೮೬-೮೭, ೧೯೯೦-೯೧ರಲ್ಲಿ ಖರ್ಚು ಮಾಡತಕ್ಕಂತಹ ಹಣ ೪೮೦ ಕೋಟಿ, ನಾವು ಪಡೆಯತಕ್ಕಂತಹ ನೀರು ೪೯ ಟಿ.ಎಂ.ಸಿ. ಇರಿಗೇಟ್ ಆಗತಕ್ಕಂಥಾದ್ದು ಒಂದು ಲಕ್ಷ ಎಪ್ಪತ್ತಾರು ಸಾವಿರ ಹೆಕ್ಟೇರ್ ಮಾತ್ರ. ೧೯೯೦-೯೧, ೧೯೯೫-೯೬ರಲ್ಲಿ ಖರ್ಚು ಮಾಡಬೇಕು ಎನ್ನತಕ್ಕಂತಹ ಹಣ ೨೫೫ ಕೋಟಿ, ಆದರಿಂದ ಆಗತಕ್ಕಂತಹ ನೀರಾವರಿ ೩೧ ಲಕ್ಷ ೬೯ ಸಾವಿರ ಹೆಕ್ಟೇರ್, ಇದಕ್ಕೆ ನಾವು ೧೧೯ ಟಿ.ಎಂ.ಸಿ. ನೀರನ್ನು ಉಪಯೋಗಿಸಿ ಕೊಳ್ಳಬಹುದು. ಇದರ ಬಗ್ಗೆ ೧೦೭೧ ಕೋಟಿ ರಿವೈಸ್ ಎಸ್ಟಿಮೇಟ್ ಅನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಅಪ್ಪರ್-ತುಂಗ ಅಪ್ಪರ್-ಭದ್ರ ಬಗ್ಗೆ ತಾವು ಬಹಳ ಆಸಕ್ತಿಯಿಂದ ಇದ್ದೀರಿ. ಅದರಲ್ಲಿ ನಾವು ಈಗಾಗಲೇ ಖರ್ಚು ಮಾಡತಕ್ಕಂತಹ ಹಣ ೩೬೬ ಕೋಟಿ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ,......

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ......He is competent to defend himself. I don't think he wants your assistance.

ಶ್ರೀ ಎಚ್. ಡಿ. ದೇವೇಗೌಡ.—ತಾವು ಕುಳಿತುಕೊಂಡು ಕೇಳಿ, ಎಕ್ಸ್‌ಪ್ಲನೇಷನ್ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇದುವರೆಗೂ ಎಷ್ಟು ಲಕ್ಷ ಹೆಕ್ಟೇರ್ಸ್ ಭೂಮಿಯನ್ನು ಇಂಪ್ರೂವ್ ಮಾಡಿದ್ದೀರಿ ? ಒಂದು ಲಕ್ಷ ೨೬ ಸಾವಿರ ಎಕರೆಯನ್ನು ಈ ವರ್ಷ ನೀರಾವರಿ ಮಾಡುತ್ತೇವೆಂದು ಹೇಳಿದ್ದೀರಿ, ನೀವು ಮಾಡಿರುವುದು ೪೭ ಸಾವಿರ ಇನ್ನೂ ಒಂದು ಲಕ್ಷ ಮಾಡಬೇಕು. ಒಂದು ಲಕ್ಷ ಮಾಡಬೇಕಾದರೆ ಎಷ್ಟು ಹಣ ಖರ್ಚು ಮಾಡಬೇಕು ? ಅಪ್ಪರ್ ಕೃಷ್ಣಾದಲ್ಲಿ ಈ ವರ್ಷ ಖರ್ಚು ಮಾಡಿಲ್ಲ. ಬರೀ ಸಂಬಳ ಮಾತ್ರ ಕೊಟ್ಟಿದ್ದಾರೆ. ಇದಕ್ಕೆ ಹಣವನ್ನು ಎಲ್ಲಿಂದ ತರುತ್ತೀರಿ ? ಈ ಕೆಲಸವನ್ನು ತ್ವರಿತವಾಗಿ ಪೂರೈಸುತ್ತೀರಾ ? ೧,೨೦,೦೦೦ ಸಾವಿರ ಹೆಕ್ಟೇರ್ ಅನ್ನು ಯಾವಾಗ ನೀರಾವರಿ ಮಾಡುತ್ತೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ನಮ್ರತೆಯಿಂದ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರೀ ಅಧಿಕಾರಿಗಳಿಗೆ ಸಂಬಳ ಕೊಟ್ಟು ಕುಳಿತುಕೊಳ್ಳತಕ್ಕಂತಹ ಕೆಲಸವನ್ನು ಜನತಾ ಸರ್ಕಾರ ಮಾಡಿಲ್ಲ ಎನ್ನತಕ್ಕಂಥಾದ್ದನ್ನು ಮತ್ತೊಮ್ಮೆ ಪ್ರತಿಪಾದನೆ ಮಾಡುತ್ತೇನೆ. ಯಾವ ಯಾವ ವರ್ಷ ಯು.ಕೆ.ಪಿ.ಗೆ ಎಷ್ಟೆಷ್ಟು ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿದ್ದೇವೆ ಹಣ ಖರ್ಚು ಮಾಡಿದ್ದೇವೆ ಎಂಬುದರ ಬಗ್ಗೆ ಬ್ರೇಕಪ್ ಫಿಗರ್ಸ್ ಕೊಡುತ್ತೇನೆ ನಮ್ಮ ದೃಷ್ಟಿಕೋನದೊಳಗೆ ಏನೋ ಇಟ್ಟು

ಕೊಂಡು ಮಾತನಾಡಿದರೆ ಹೇಗೆ ? ೧೦೭೧ ಕೋಟಿ ರೂಪಾಯಿಗಳ ರಿವೈಸ್ ಎಸ್ಟಿಮೇಟನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಅದರಲ್ಲಿ ಈಗಾಗಲೇ ೩೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಉಳಿದಂತಹ ಹಣವನ್ನು ಕೊಟ್ಟು ಇದನ್ನು ೧೯೯೫-೯೬ರಲ್ಲಿ ಮುಗಿಸುತ್ತೇವೆಂದು ಹೇಳಿದ್ದೇನೆ. ಇನ್ನೂ ಇದಕ್ಕೆ ೭೭೦-೭೮೦ ಕೋಟಿ ರೂಪಾಯಿಗಳು ಆಗಬಹುದು. ಇನ್ನೂ ೧೦ ವರ್ಷ ಸಮಯ ಇದೆ. ಕಾಸ್ಟ್ ಎಸ್ಕಲೇಷನ್ ಸರಾಸರಿ ೧ ಸಾವಿರ ಕೋಟಿ ರೂಪಾಯಿಗಳಿಗೆ ಹೋಗಬಹುದು. ಪ್ರತಿ ವರ್ಷ ಆವರೇಜ್ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಎಷ್ಟೋ ಕೆಲಸವನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದ್ದೇನೆ. ಬಾಗಲಕೋಟೆಯಲ್ಲೂ ಈ ಮಾತನ್ನು ಹೇಳಿದೆ, ಇವತ್ತೂ ಹೇಳುತ್ತಿದ್ದೇನೆ. ನಾನು ಹೇಳಿದಂತೆ ನಡೆದುಕೊಳ್ಳುತ್ತೇನೆ. ಆದಾಗದಿದ್ದರೆ ಈ ಜಾಗ ಬಿಟ್ಟು ಹೋಗುತ್ತೇನೆ. ಇಲ್ಲಿ ಕುಳಿತುಕೊಳ್ಳಬೇಕೆಂಬ ವ್ಯಾಮೋಹ ನನಗೆ ಉಳಿದಿಲ್ಲ. ಈ ವರ್ಷ ಯು.ಕೆ.ಪಿ.ಗೆ ೭೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂತಹ ವ್ಯವಸ್ಥೆ ಮಾಡಿದ್ದೇನೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ೭೭ ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡ ತಕ್ಕಂತಹ ನಿರ್ಣಯವನ್ನು ಜನತಾ ಸರ್ಕಾರ ಮಾಡಿದೆ, ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇದರ ಬಗ್ಗೆ ಯಾವುದೇ ರೀತಿಯ ಸಂಶಯ ಬೇಕಾಗಿಲ್ಲ. ಮುಂದಿನ ಒಂಭತ್ತು ವರ್ಷದಲ್ಲಿ Our rate of spedding will be more. ೧೦೧೯ ಟಿ.ಎಂ.ಸಿ.ಎಫ್.ಟಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳಬಹುದು. ವಿಶ್ವ ಬ್ಯಾಂಕ್‌ನವರ ಹತ್ತಿರ ಕಮಿಟ್ ಮಾಡಿಕೊಂಡಿದ್ದೇವೆ. ಇಷ್ಟು ಹಣ ವನ್ನು ಇದಕ್ಕೆ ಖರ್ಚು ಮಾಡಿಯೇ ಮಾಡುತ್ತೇವೆ. ಇದರಲ್ಲಿ ಹಿಂದೆ ಹೋಗುವ ಪ್ರಶ್ನೆಯೇ ಇಲ್ಲ. ಇಲ್ಲಿ ಯಾವನೇ ಕುಳಿತರೂ ಹಿಂದೆ ಹೋಗುವುದಕ್ಕೆ ಆಗುವುದಿಲ್ಲ. Whether we get the world bank assistaı ce or not, we are going to complete the project. ಇದನ್ನು ಮತ್ತೊಮ್ಮೆ ಸ್ಪಷ್ಟೀಕರಣ ಮಾಡುತ್ತೇನೆ. ನಾವು ೩೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ವರ್ಲ್ಡ್ ಬ್ಯಾಂಕ್‌ನಿಂದ ೧೧೭ ಕೋಟಿ ರೂಪಾಯಿಯ ಅಸಿಸ್ಟೆನ್ಸ್ ಸಿಗುತ್ತದೆ. We have to go according to their norms and guidlenes. ಇದರಿಂದ ೨೫ ರಿಂದ ೩೦ ಪರ್ಸೆಂಟ್ ಕಾಸ್ಟ್ ಇನ್‌ಕ್ರೀಸ್ ಆಗುತ್ತದೆ. ಮಾನ್ಯ ರಂಗನಾಥ್‌ರವರು ಹಿಂದೆ ಇಲ್ಲಿ ಕುಳಿತಿದ್ದರು. ವರ್ಲ್ಡ್ ಬ್ಯಾಂಕ್‌ನಿಂದ ತೆಗೆದುಕೊಂಡಿರತಕ್ಕಂತಹ ನೀರಾವರಿ ಪ್ರಾಜೆಕ್ಟ್‌ನಲ್ಲಿ ಕಾಸ್ಟ್ ಪರ್ ಎಕರೆ ೨೩೦೦೦, ೨೪೦೦೦ ಆಗುತ್ತದೆ. ವರ್ಲ್ಡ್ ಬ್ಯಾಂಕಿನವರು ನಮ್ಮ ಬಾಳಿರುದ್ರಯ್ಯನವರ ಹತ್ತಿರ ಬಂದು ಕಲಿತುಕೊಂಡು ಹೋಗಬೇಕಾಗುತ್ತದೆ. ಅವರೇನೂ ನಮಗೆ ಹೇಳಿಕೊಡಬೇಕಾಗಿಲ್ಲ. ಅವರ ಅಸಿಸ್ಟೆನ್ಸ್ ಗೋಸ್ಕರ ಕಾದರೆ ಕಷ್ಟ ಹೆಚ್ಚಾಗುತ್ತದೆ. ಅವರು ಕೊಡುವುದಿಲ್ಲವೆಂದು ಹೇಳಿದರೆ ನಾವೇನೂ ಕೈಕಟ್ಟಿ ಕೊಂಡು ಕುಳಿತುಕೊಳ್ಳುವುದಿಲ್ಲ. I am going to say with all sincerity at my command, that we are going to provide sufficient funds to complete UKP to utilise all the water. ಅದೇನೇ ಆಗಲಿ ಅದರ ಬಗ್ಗೆ ವಾದ ವಿವಾದವಾಗುವುದು ಬೇಡ. ನಾವು ಈ ಕೆಲಸ ಮಾಡುತ್ತೇವೆಂದು ದೇಶದ ಜನತೆಯ ಮುಂದೆ ಹೇಳುತ್ತೇನೆ. We have provided Rs. 77 Crores for this project for the first time in the history of Karnataka. ಬಡ್ಜೆಟ್ ಪುಸ್ತಕವನ್ನು ತಾವು ಓದಿ.

ಶ್ರೀ ಎಂ. ಎಸ್. ಕೃಷ್ಣನ್.—ವರ್ಲ್ಡ್ ಬ್ಯಾಂಕ್ ಕೊಡಲೀ ಕೊಡದೇ ಹೋಗಲಿ ನಾವು ಮಾಡು ತ್ತೇವೆಂದು ಹೇಳಿದ್ದೀರಿ. ಅದಕ್ಕೆ ನಾವು ಸಪೋರ್ಟ್ ಮಾಡುತ್ತೇವೆ.

SRI H. D. DEVEGOWDA.—It is a challenge before 4 crores people of Karnataka. ನಾವು ಷಂಡರಲ್ಲ. ಕರ್ನಾಟಕ ಜನತೆಯ ಮುಂದೆ ಇದನ್ನು ಹೇಳುತ್ತೇನೆ. ನಮ್ಮ ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದು ನಮ್ಮ ಹಕ್ಕು. ಇದು ನಮ್ಮ ಸವಾಲು. ವರ್ಲ್ಡ್ ಬ್ಯಾಂಕ್‌ನವರು ಕೊಡಲೀ ಬಿಡಲೀ ಈ ಸವಾಲನ್ನು ಸ್ವೀಕಾರ ಮಾಡಲೇ ಬೇಕಾಗುತ್ತದೆ. ಮಾನ್ಯ ಬಸವಲಿಂಗಪ್ಪನವರು ಯು.ಕೆ.ಪಿ.ಯಲ್ಲಿ ನಿಮ್ಮ ಪೊಟೆನ್‌ಷಿಯಲ್ ಏನು, ಏನು ಕಡಿದಿದ್ದೀರಿ ಎಂದು ಕೇಳಿದರು. ಅದರ ಬಗ್ಗೆ ಹೇಳಲೇ ?

೧೯೮೨–೮೩ರಲ್ಲಿ ನೀವು ಪ್ರಾರಂಭ ಮಾಡಿದ್ದುದು ೧೨,೨೮೦ ಹೆಕ್ಟೇರ್ಸ್ ೧೯೮೪–೮೫ರಲ್ಲಿ ಜನತಾ ಸರ್ಕಾರ ಬಂದ ಮೇಲೆ ೧೪,೮೨೫ ಹೆಕ್ಟೇರ್ಸ್‌ಗೆ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಾರಂಭ ಮಾತ್ರ.

ಶ್ರೀ ಹೆಚ್. ಡಿ. ದೇವೇಗೌಡ.—ವಿಧಾನಸೌಧವನ್ನು ಹನುಮಂತಯ್ಯನವರು ಕಟ್ಟಿದರು ನೀವು ನಾವು ಮಾತನಾಡುತ್ತಿದ್ದೇವೆ. ನಾನು ಇದ್ದಾಗ ಹಾಗೆ ಮಾಡಿದ್ದೇನೆ. ಹೀಗೆ ಮಾಡಿದ್ದೇನೆ ಎಂದರೆ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ನೀವು ಮಾಡಿದ್ದನ್ನು ನೀವು ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಹೋಲಿಕೆ ಮಾಡುವುದಕ್ಕೆ ನನ್ನ ಅಡ್ಡಿಯಿಲ್ಲ. ಉದ್ದೇಶ ಪೂರ್ವಕವಾಗಿ ಹೋಲಿಕೆ ಮಾಡಿ ನಾನು ಹೇಳಲಿಲ್ಲ. ತಾವು ಆದನ್ನೇ ಮಾತನಾಡಿದರೆ ಏನೂ ಪ್ರಯೋಜನ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಇದನ್ನು ಸರ್ಕಾರ ಪಬ್ಲಿಷ್ ಮಾಡಿರತಕ್ಕಂಥಾದ್ದು ಇದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ರೆಕಾರ್ಡ್ ತರಿಸಿ ನೋಡಿ. ಟೆಂಪೊ ಆಫ್ ಡೆವಲಪ್‌ಮೆಂಟ್ ಪ್ರಾಮಾಣಿಕವಾದಂಥ ವಿಚಾರವನ್ನು ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ರೆಕಾರ್ಡ್ ತರಸಿ ನೋಡುವುದೇನೂ ಇಲ್ಲ. ಈ ಪುಸ್ತಕದಿಂದಲೇ ಮಾಜಿ ಸಚಿವರು ಈ ಡಾಕ್ಯುಮೆಂಟ್‌ನಿಂದಲೇ ಹೋಲಿಕೆ ಕೊಟ್ಟಿದ್ದಾರೆ. ತಾವು ಸೃಷ್ಟಿ ಮಾಡಿ ಹೇಳಿದ್ದೀರೆಂದು ನಾನು ಹೇಳಲಿಲ್ಲ. ೧೯೯೫–೯೬ನೇ ಇಸವಿ ಹೊತ್ತಿಗೆ ೧೧೯ ಟಿ.ಎಂ.ಸಿ.ಎಫ್.ಟಿ. ನೀರನ್ನು ಬಳಸಿಕೊಳ್ಳತಕ್ಕ ಯೋಜನೆ ಮಾಡಿದೇವೆ, ಉಳಿದ ೩೫ ಟಿ.ಎಂ.ಸಿ.ಎಫ್.ಟಿ. ನೀರನ್ನು ಬಳಸಿಕೊಳ್ಳುವುದಕ್ಕೆ ಸುಮಾರು ೨೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ಇನ್ನೂ ನಾಲ್ಕು ವರ್ಷ ಬೇಕಾಗುತ್ತದೆ. ವರ್ಷಕ್ಕೆ ೧೦೦ ಕೋಟಿಗಿಂತ ಜಾಸ್ತಿ ಮಾಡಿಕೊಂಡು ಹೋದರೂ ೧೫೧ ಟಿ.ಎಂ.ಸಿ ಎಫ್.ಟಿ. ನೀರನ್ನು ಪೂರ್ಣವಾಗಿ ಬಳಸಿಕೊಳ್ಳುವಂಥ ದಿಕ್ಕಿನಲ್ಲಿ ಸರ್ಕಾರ ದೃಢವಾದ ಹೆಜ್ಜೆಯನ್ನು ಇಟ್ಟಿದೆ ಎಂದು ಮತ್ತೊಮ್ಮೆ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇನ್ನು ತೆಲಗು ಗಂಗಾ ಯೋಜನೆ ಬಗ್ಗೆ ಹೇಳುವುದಾದರೆ ೩೦೦ ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವರು ಏನೊಂದು ಯೋಜನೆ ರೂಪಿಸಿದ್ದಾರೆ ಅದಕ್ಕೆ ಯಾವುದೇ ಕಾರಣದಿಂದ ಕರ್ನಾಟಕ ಸರ್ಕಾರ ಮಣಿಯಲಿಕ್ಕೆ ಸಾಧ್ಯವಿಲ್ಲ ಕೇಂದ್ರ ಸರ್ಕಾರದೊಂದಿಗೆ ಅವರ ಪ್ರಯತ್ನ ಮಾಡಿದರೂ ಕೂಡ ಕೊಡಬಾರದು ಕೊಡುವುದಕ್ಕೆ ಸಾಧ್ಯವೂ ಇಲ್ಲ. ಹರಿದು ಹೋಗುವಂಥ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಧಿಕಾರ ಇದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಒಂದು ಮಾತನ್ನು ಇಲ್ಲಿ ನಾವು ಮರೆಯಬಾರದು. ಆಂಧ್ರ ಸ್ನೇಹಿತರುಗಳು ಸರ್‌ಪ್ಲಸ್ ವಾಟರ್ ೧೬೦ ಟಿ.ಎಂ.ಸಿ.ಎಫ್.ಟಿ. ಕರ್ನಾಟಕದ ಪಾಲು, ಹಕ್ಕು ಏನಿದೆ ಅದನ್ನು ಕಿತ್ತುಕೊಳ್ಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಆಂಧ್ರಕ್ಕೂ ಸಾಧ್ಯವಿಲ್ಲ. ಮಹರಾಷ್ಟ್ರಕ್ಕೂ ಸಾಧ್ಯವಿಲ್ಲ. ಕೇಂದ್ರಸರ್ಕಾರಕ್ಕೂ ಕೂಡ ಸಾಧ್ಯವಿಲ್ಲ. It is binding on all these three States and the Govt. of India is bound to enforce. The Govt. of India is bound to enforce the award given by the Tribunal according to the Inter-State River Water Dispute Act. ಯಾವ ಪ್ರಶ್ನೆಯೂ ಇದರಲ್ಲಿ ಇಲ್ಲ. ಇದರಲ್ಲಿ ಒಂದು ಅಕಾರ ಶಬ್ದವನ್ನು ಬದಲಾವಣೆ ಮಾಡುವುಕ್ಕೆ ಯಾರಿಗೂ ಸಾಧ್ಯವಿಲ್ಲ. ನಮ್ಮ ಹಕ್ಕನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಎಲ್ಲಾ ಜನರು ಒಂದೇ ಮನಸ್ಸಿನಿಂದ ಅರಿವಿನಿಂದ ಮುಂದೆ ಹೋಗುತ್ತಾರೆ ಸರ್ಕಾರ ಕೂಡ ಆ ದಿಸೆಯಲ್ಲಿ ಪ್ರಾಮಾಣಿಕವಾಗಿ ಜನತೆಯ ಬೆಂಬಲವನ್ನು ಸ್ವಾಗತಿಸುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ವೀರಪ್ಪಮೊಯ್ಲಿಯವರು ವಿಶ್ವಬ್ಯಾಂಕಿನ ಸಹಾಯದ ಬಗ್ಗೆ ಸಣ್ಣ ನೀರಾವರಿಗೆ ಸಂಬಂದಪಟ್ಟಂತೆ ತಮ್ಮ ಅತೃಪಿಯನ್ನು ವ್ಯಕ್ತಪಡಿಸಿದ್ದಾರೇ ಇಷ್ಟನ್ನು ಮಾತ್ರ ಅವರ ಗಮನಕ್ಕೆ ತರುತ್ತೇನೆ. ತಾವು ಹಿಂದೆ ಮಾಡಿರುವುದನ್ನು ಟೀಕೆ ಮಾಡುತ್ತೆ. ನೆಂದು ತಾವು ತಿಳಿದುಕೊಳ್ಳಬೇಕಾಗಿಲ್ಲ. ನಮ್ಮ ಪ್ರಯತ್ನ ಈ ದಿಕ್ಕಿನಲ್ಲಿ ನಡೆದಿದೆ ಎಂದು ಮಾತ್ರ ಹೇಳುತ್ತೇನೆ.

Actual expenditure on World Bank assisted, minor irrigation projects 1981-82, 16.69 lakhs.

1982-83...154.32 lakhs

1983-84...636.54 lakhs

1984-85...1328.50 lakhs

1985-86...1800. lakhs

1986-87 We wanted to spend Rs. 1900 lakhs

೧೯ ಕೋಟಿ ರೂಪಾಯಿಗಳು. ಅಂದರೆ, ನಾವು ತೆಗೆದುಕೊಂಡಿರತಕ್ಕ ನಿರ್ಣಯದಿಂದ ತಾವು ಅರ್ಥ ಮಾಡಿಕೊಳ್ಳಬಹುದು. ವಿಶ್ವ ಬ್ಯಾಂಕ್ ನೆರವನ್ನು ನಮ್ಮ ಪ್ರಾಜೆಕ್ಟುಗಳಿಗೆ ಪಡೆಯುವದರಲ್ಲಿ ಸರ್ಕಾರ ಯಾವುದೇ ರೀತಿಯ ಅನಾಧರಣೆಯಿಂದ ಇದೆ ಎನ್ನುವ ಭಾವನೆ ಸರಿಯಲ್ಲವೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತು ೩೦-೩೫ ಪ್ರಾಜೆಕ್ಟುಗಳನ್ನು ಮುಗಿಸುವ ಇಚ್ಛೆ ಸರ್ಕಾರಕ್ಕೆ ಇದೆ. ಅದರಲ್ಲಿ ಯಶಸ್ಸನ್ನು ಕಾಣುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡಿಸುತ್ತೇನೆ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಈ ಗಂಗ ಕಲ್ಯಾಣದ ಬಗ್ಗೆ ವ್ಯಂಗ್ಯವಾಗಿ ಟೀಕೆ ಮಾಡಿದರು. ಅವರು ವ್ಯವಸಾಯದಿಂದ ಜೀವನ ಮಾಡಬೇಕಾಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮಪ್ಪ ವ್ಯಾಪಾರಿ. ನಮ್ಮಜ್ಜ ವ್ಯಾಪಾರಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ವ್ಯಾಪಾರಿ ಎಂದು ಹೇಳಲಿಲ್ಲ. ವ್ಯವಸಾಯವನ್ನು ಅವಲಂಬನೆ ಮಾಡಿರತಕ್ಕ ಆ ವರ್ಗದ ಜನ ಏನಿದ್ದಾರೆ ಅವರನ್ನು ಹೋಗಿ ಕೇಳಿ. ಗಂಗಾ ಕಲ್ಯಾಣ ಯೋಜನೆಯ ಫಲ ಏನೆಂಬುದನ್ನು ಅವರನ್ನು ಹೋಗಿ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಹೇಳಿ ಎಂದರೆ, ಅವರನ್ನು ಹೋಗಿ ಕೇಳಿ ಎಂದು ಹೇಳುತ್ತೀರಲ್ಲ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಈ ಯೋಜನೆಯನ್ನು ಜನತಾ ಸರ್ಕಾರ ಬಂದಮೇಲೆ ಜಾರಿಗೆ ತಂದಿದ್ದು, ೭೩.೯೧ ಲಕ್ಷ ಖರ್ಚು ಮಾಡಿದ್ದೇವೆ. ಇಲ್ಲಿಯವರೆಗೆ ೫೧ ಯೋಜನೆಗಳನ್ನು ಮುಗಿಸಿದ್ದೇವೆ. ೫೧೦ ಹೆಕ್ಟೇರ್‌ಗೆ ನೀರನ್ನು ಕೊಟ್ಟಿದ್ದೇವೆ. ತಾವು ಹೋಗಿ ನೋಡಿಕೊಂಡು ಬರಬಹುದು. ೨೩೦ ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಇದರಿಂದ ನೇರವಾದ ಅನುಕೂಲವಾಗಿದೆ. ಭಾರತ ಸರ್ಕಾರದ ಒಂದು ಯೋಜನೆ ಇದೆ. ಡಿ.ಆರ್ ಡಿ.ಎಸ್. ಎಂದು, ಇದರಲ್ಲಿ ಸಾಲ ಪಡೆದರೆ ೭೦ ಪರ್ಸೆಂಟ್ ಸಬ್ಸಿಡಿ, ೩೦ ಪರ್ಸೆಂಟ್ ಸಾಲ ತೀರಿಸುವುದು. ನನಗೆ ಗೊತ್ತಿದ್ದಂತೆ ಧಾರವಾಡ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಫೆಲ್ಯೂರ್ ಆಗಿದೆ. ಪಂಪು ಯಾರೋ ಕಿತ್ತುಕೊಂಡು ಹೋಗಿದ್ದಾರೆ. ಪೈಪು ಯಾರೋ ಕಿತ್ತುಕೊಂಡು ಹೋಗಿದ್ದಾರೆ. ಗಂಗಾಕಲ್ಯಾಣ ಯೋಜನೆಯಲ್ಲಿ ಆ ರೀತಿ ಆಗುವುದಕ್ಕೆ ಅವಕಾಶ ಕೊಟ್ಟಿಲ್ಲ. ಪೂರ್ಣ ಖರ್ಚುಗಳನ್ನು ಸರ್ಕಾರವೇ ವಹಿಸಿಕೊಂಡು. ಉಸ್ತುವಾರಿಯನ್ನು ಕೂಡ ನಾವೇ ನೋಡಿಕೊಂಡು ಮೋಟಾರು ಕೆಟ್ಟುಹೋಗಲಿ. ಬೇರೆ ಯಾವುದೇ ರೀತಿಯ ತೊಂದರೆ ಬರಲಿ ಎಲ್ಲಾ ಸರ್ಕಾರವೇ ನೋಡಿಕೊಂಡು ಜಮೀನಿಗೆ ನೀರು ಬಿಡುವವರೆಗೂ ನಮ್ಮದೇ ವ್ಯವಸ್ಥೆ. ಪ್ರಾರಂಭ ಹಂತದಲ್ಲಿ ಭೂಮಿಯನ್ನು ಅಭಿವೃದ್ಧಿ ಪಡಿಸುವುದು, ಮತ್ತೊಂದು ಕೆಲಸಗಳನ್ನು ಆತ ಮಾಡಿಕೊಳ್ಳಬೇಕಾಗಿರುವುದರಿಂದ ಯಾವುದೇ ರೀತಿಯ ಮೆಂಟೆನೆನ್ಸ್ ಚಾರ್ಜ ಕೂಡ ಆತನ ತಲೆ ಮೇಲೆ ಹಾಕಬಾರದೆಂದು ತೀರ್ಮಾನ ಮಾಡಿದ್ದೇವೆ.

ಇಂಥ ಒಳ್ಳೆಯ ಸ್ಕೀಂ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳಲಿಲ್ಲ ಬಸವಲಿಂಗಪ್ಪನವರು.

SRI B. BASAVALINGAPPA.—I compliment him.

SRI H.D. DEVEGOWDA.—I have got the highest regards to the hon'ble member Sri B. Basavalingappa.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಈ ಯೋಜನೆಯೇನೋ ಇವರದ್ದೆ. ಒಳ್ಳೆಯ ಉದ್ದೇಶ. ಪವಿತ್ರವಾದದ್ದು. ಚೆನ್ನಾಗಿಯೂ ಮಾಡಿದ್ದಾರೆ. ಆದರೆ ನಾನು ಈ ಸದನದಲ್ಲಿ ಹೋರಾಡತಕ್ಕಂಥಾದ್ದು ಒಂದೇ ಒಂದು ವಿಷಯದ ಮೇಲೆ. ಏನೆಂದರೆ ನೀವು ಏನೇ ಮಾಡಿ, ಅದು ಸರ್ವೇ ಸಾಧಾರಣವಾಗಿ ಎಲ್ಲರಿಗೂ ಅನುಕೂಲವಾಗಬೇಕು. ಈಗ ಈ ದೇಶದಲ್ಲಿ ೫೦ ಲಕ್ಷ ಎಸ್.ಸಿ. ಕುಟುಂಬಗಳಿರುವಾಗ ಕೇವಲ ೨೫೦ ಫ್ಯಾಮಿಲಿಗಳಿಗೆ ಉಪಯೋಗವಾಗಿದೆ ಎಂದು ಹೇಳುತ್ತೀರಿ. ಪ್ರಾರಂಭವಾಗುವುದು ಹೀಗೆಯೇ ಎಂದು ನಾನೂ ಒಪ್ಪುತ್ತೇನೆ. ಆದರೆ ನೀವು ೨೫೦ ಕುಟುಂಬಗಳಿಗೆ ಮಾಡಿ ಎಲ್ಲಕ್ಕೂ ಒಟ್ಟಾರೆ ಶಹಭಾಷ್‌ಗಿರಿ ಕೊಡಿ ಎಂದು ಕೇಳಿದರೆ? ನೀವು ಎಷ್ಟು ಮಾಡಿದ್ದೀರೋ ಅಷ್ಟು ಮಾತ್ರ ಕೊಡುತ್ತೇನೆ. ಜಾಸ್ತಿ ಕೊಡುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಮ್ಮನ್ನು ಅವರು ಹೊಗಳುವುದು ಬೇಡ. ಆದರೆ ಮಾಡಿದಂತಹ ಕೆಲಸದ ಬಗ್ಗೆ ಮೆಚ್ಚಿಗೆ ತೋರಿಸದಿದ್ದರೂ ಟೀಕೆ ಮಾಡುವುದು ಬೇಡ. ನಾನು ಆಗಲೇ ಈ ಸ್ಕೀಮನ್ನು ಈಗ ಫಾರ್ಮ್ಯುಲೇಟ್ ಮಾಡಿದ್ದು ಎಂದು ಹೇಳಿದ್ದೆ.

ಶ್ರೀ ಕೆ.ಹೆಚ್. ಪಾಟೀಲ್.—ಟೀಕೆ ಮಾಡಿದರೇ ನೀವು ತಿದ್ದಿಕೊಳ್ಳುವುದು ಸುಲಭ. ನೀವು ನಮಗೆ ಮಾಡಿ. ನಾವೂ ಒಪ್ಪುತ್ತೇವೆ.

ಶ್ರೀ ಹೆಚ್ ಡಿ. ದೇವೇಗೌಡ —ಅವರ ಟೀಕೆಯನ್ನು ಸ್ವಾಗತ ಮಾಡುತ್ತೇನೆ. ಆದರೆ ಟೀಕಿಸುವ ವ್ಯಕ್ತಿ ಟೀಕಿಸುವಾಗ ಅದರಲ್ಲಿ ಸತ್ವ ಇರಬೇಕು. ಸ್ವಾಮಿ ಈ ರಾಜ್ಯದಲ್ಲಿ ೧೪೦೦ ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕೆಂದು ನಮಗೆ ಆಸೆ ಇದೆ. ಅದರಲ್ಲೂ ೯೦೦ ಎಸ್.ಸಿ. ವರ್ಗಕ್ಕೆ ಅನುಕೂಲವಾಗುವ ಮತ್ತು ೪೩೫ ಹಿಂದುಳಿದ ವರ್ಗಕ್ಕೆ ಅನುಕೂಲವಾಗುವ ಸ್ಕೀಮ್‌ಗಳನ್ನು ಈಗಾಗಲೇ ಐಡೆಂಟಿಫೈ ಮಾಡಿದ್ದೇವೆ. ಸ್ಥಳವನ್ನು ಗುರುತಿಸಿದ್ದೇವೆ. ಆದ್ದರಿಂದ ೧೧,೫೭೧ ಹೆಕ್ಟೇರ್ ಜಮೀನಿಗೆ ನೀರು ಕೊಡಬಹುದೆಂಬ ಆಸೆ ನಮ್ಮದು. ಇದಕ್ಕೇನೋ ದೊಡ್ಡ ದೊಡ್ಡ ಹೆಸರು ಕೊಡುವುದು ಮಾಸ್ಟರ್ ಪ್ಲಾನ್ ಎಂದು ಕರೆಯುವುದು ನನಗಿಷ್ಟವಿಲ್ಲ. ಬದಲಿಗೆ ಈ ದಿಕ್ಕಿನಲ್ಲಿ ಸರ್ಕಾರ ಕೆಲಸ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿದೆ. ಸುಮಾರು ೧೦ ಕೋಟಿ ರೂಪಾಯಿಗಳನ್ನು ಈ ಬಾಬಿನಲ್ಲಿ ಖರ್ಚು ಮಾಡಬೇಕಾಗುತ್ತದೆ.

ಸ್ವಾಮಿ, ನಮ್ಮ ಕೆಲವು ಸ್ಕೀಮ್‌ಗಳಲ್ಲಿ ನೂರಕ್ಕೆ ನೂರರಷ್ಟು ಪ್ರಯೋಜನ ಎಸ್.ಸಿ. ಜನಾಂಗಕ್ಕೆ ಸಿಗುವಂಥವು ಇವೆ. ಉದಾಹರಣೆಗೆ ಟಿ. ನರಸೀಪುರದ ಕ್ಷೇತ್ರದಲ್ಲಿ, ಮೊಯ್ಲಿಯವರ ಸೌತ್ ಕೆನರಾದಲ್ಲಿ ಈ ತರಹ ಎಷ್ಟೋ ಇವೆ. ಸೌತ್ ಕೆನರಾದಲ್ಲಿ ೨೪ ಫ್ಯಾಮಿಲಿಗಳು ಪ್ರಯೋಜನ ಪಡೆದಿದ್ದು ಬೇರೆಯವರಿಗೆ ಒಬ್ಬರಿಗೂ ಅನುಕೂಲ ಆಗಿಲ್ಲ. ನಾನು ಎಸ್.ಸಿ. ಎಂದೇ ಹೇಳುತ್ತಿದ್ದೇನೆ. ಹರಿಜನ ಎಂದು ಪ್ರಯೋಗ ಮಾಡಿದರೆ ಬಸವಲಿಂಗಪ್ಪನವರಿಗೆ ಕೋಪ ಬರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಗಂಗಾ ಕಲ್ಯಾಣದಲ್ಲಿ ಗ್ರೇ ಏರಿಯಾ, ಡಾರ್ಕ್ ಏರಿಯಾ ಎಂದು ಇದೆ. ಅದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟುಬಿಡಿ.

ಶ್ರೀ ಹೆಚ್.ಡಿ. ದೇವೇಗೌಡ.—ಅದನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ತುಂಬಾ ಸಂತೋಷ.

ಶ್ರೀ ಸಿ. ಬೈರೇಗೌಡ.—ಮಾನ್ಯ ಬಸವಲಿಂಗಪ್ಪನವರಿಗೆ ಇದೆಲ್ಲ ಗೊತ್ತಿಲ್ಲ, ಬಿಡಿ.

ಶ್ರೀ ಹೆಚ್.ಡಿ. ದೇವೇಗೌಡ.—ಇನ್ನು ನೀರಾವರಿ ಬಗ್ಗೆ ಕೊನೆಯದಾಗಿ ಒಂದು ಮಾತನ್ನು ಹೇಳಿ ಬೇರೆ ವಿಷಯಕ್ಕೆ ಹೋಗುತ್ತೇನೆ. ಅದು ಫ್ಲಡ್ ಕಂಟ್ರೋಲ್ ಬಗ್ಗೆ.

ಅಧ್ಯಕ್ಷರು.—ಮಾನ್ಯ ದೇವೇಗೌಡರೇ ಒಂದು ಗಂಟೆ ಆಯಿತು ಆಗಲೇ.

ಶ್ರೀ ಎಚ್.ಡಿ. ದೇವೇಗೌಡ.—ಬೇಕಾದರೆ ನಾನು ಈಗಲೇ ಕೂತುಬಿಡುತ್ತೇನೆ, ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇನ್ನೂ ಅವರು ಮಾತನಾಡಿಯೇ ಇಲ್ಲ.

ಅಧ್ಯಕ್ಷರು.—ಹಾಗಲ್ಲ, ದೇವೇಗೌಡರ ಒಂದು ಗಂಟೆಯ ಅವಧಿಯಲ್ಲಿ ಅರ್ಧ ಗಂಟೆಯನ್ನು ವಿರೋಧ ಪಕ್ಷದವರೇ ತೆಗೆದುಕೊಂಡಿದ್ದಾರೆ, ಎಂದು ಹೇಳಿದೆ ಅಷ್ಟೇ.

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಮೊಯ್ಲಿಯವರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ನಾವು ತೊಡಗಿಸಿರತಕ್ಕ ಹಣ ಅತ್ಯಂತ ಕಡಿಮೆ. ೩೫ ಲಕ್ಷ ಮಾತ್ರ ನಮ್ಮ ಅನ್ಯೂಯಲ್ ಪ್ರೋಗ್ರಾಮ್. ಆದರೆ ಇದೊಂದು ದೊಡ್ಡ ಭೀಕರ ಸಮಸ್ಯೆ ಇದ್ದು ಅದರಲ್ಲೂ ಸೌತ್ ಕೆನರಾ ಇರಬಹುದು, ನಾರ್ತ್ ಕೆನರಾ ಇರಬಹುದು ಕಡಲ ತೀರದಲ್ಲಿ ಮೀನನ್ನೇ ಹಿಡಿದು ಜೀವನ ಮಾಡುವಂಥವರಿಗೆ ಇದರಿಂದ ಬಹಳ ತೊಂದರೆ ಇದೆ. ನಾನೇ ಹೋಗಿ ಸ್ಥಳಪರಿಶೀಲನೆ ಮಾಡಿ ಬಂದಿದ್ದೇನೆ. ಅದಕ್ಕೆ ಒಂದು ಯೋಜನೆಯನ್ನು ನಾವು ತಯಾರು ಮಾಡಿ ೧೫೦ ಕೋಟಿ ಬೇಕು ಎಂದು ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈ ಬಗ್ಗೆ ಕೇಂದ್ರದ ಮಂತ್ರಿಗಳನ್ನು, ಹಣಕಾಸಿನ ಕೇಂದ್ರ ಮಂತ್ರಿಗಳನ್ನೂ ನಾನೇ ಭೇಟಿ ಮಾಡಿ ಬಂದಿದ್ದೇವೆ. ಜೊತೆಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ಆಸ್ಕರ್ ಫರ್ನಾಂಡೀಸರನ್ನೂ ಭೇಟಿ ಮಾಡಿ ಹೇಳಿದ್ದೇನೆ. ಶ್ರೀಮತಿ ಮಾರ್ಗರೇಟ್ ಆಳ್ವರನ್ನೂ ಭೇಟಿ ಮಾಡಿ ಸಹಾಯ ಮಾಡುವಂತೆ ತೀವ್ರವಾಗಿ ಒತ್ತಾಯ ಪೂರ್ವಕವಾಗಿ ಹೇಳಿದ್ದೇನೆ. ಒಂದು ಸಲಹೆ ಏನೆಂದರೆ ನೆದರ್‌ಲ್ಯಾಂಡ್ ಗವರ್ನಮೆಂಟಿನಿಂದ ಸಹಾಯ ಪಡೆದುಕೊಳ್ಳಬಹುದೇ ಎಂಬ ಆಸೆಯನ್ನು ಅವರು ವ್ಯಕ್ತಪಡಿಸಿದರು. ಕೇರಳಕ್ಕೆ ಸ್ವಲ್ಪ ಹೆಚ್ಚು ಹಣ ಕೊಟ್ಟಿದ್ದಾರೆ. ಅದೇ ರೀತಿ ನಮಗೂ ಕೊಡಿ, ಕೇರಳಕ್ಕೆ ಹೆಚ್ಚು ಕೊಟ್ಟಿರುವುದು ಇತ್ತೀಚೆಗೆ ಬದಲಾದ ನೀತಿಗಳಿಂದ ಇರಬಹುದು ಎಂದು ಹೇಳಿ, ನೆದರ್‌ಲ್ಯಾಂಡ್ ಗವರ್ನಮೆಂಟ್‌ನಿಂದ ಹಣ ಪಡೆಯುವ ಬಗ್ಗೆ ನಮ್ಮ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇವೆ.

ಇನ್ನು ಕೃಷ್ಣ ಬೇಸಿನ್‌ಗೂ ಕಾವೇರಿ ಬೇಸಿನ್‌ಗೂ ಕೊಟ್ಟಿರುವ ದುಡ್ಡಿನ ಪ್ರಮಾಣದಲ್ಲಿ ತಾರತಮ್ಯವಾಗಿದೆ ಎನ್ನುವ ವಿರೋಧ ಪಕ್ಷದವರ ಮಾತನ್ನು ಹೋಗಲಾಡಿಸಲು ಪ್ರಯತ್ನಿಸುತ್ತೇನೆ. ೧೯೮೦–೮೧ರ ಎರಡೂ ಬೇಸಿನ್‌ಗಳ ಲೆಕ್ಕ ಇಟ್ಟುಕೊಂಡರೆ ೩೫ ಕೋಟಿ ಕೃಷ್ಣ ಬೇಸಿನ್‌ಗೆ ಕಡಿಮೆಯಾಗಿದೆ ಎಂದು ಹೇಳಿದರು. ನಾನು ಟೋಟಲ್ ಇನ್‌ವೆಸ್ಟ್‌ಮೆಂಟ್ ಕೊಟ್ಟಿದ್ದೇನೆ, ಆದರೆ ೪೧ ಕೋಟಿ ಕೃಷ್ಣ ಬೇಸಿನ್‌ಗೂ ೩೫ ಕೋಟಿಯನ್ನು ಕಾವೇರಿ ಬೇಸಿನ್‌ಗೂ ಖರ್ಚು ಮಾಡಿದ್ದೇವೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಕಾವೇರಿಯ ಬೇಸಿನ್‌ಗೆ ೧೫ ವರ್ಷದ ಗಡುವು ಇದೆ. ಆದ್ದರಿಂದ ಈ ತರಹದ ಪ್ರಾಂತೀಯ ಭಾವನೆಗೆ ಉತ್ತೇಜನ ಕೊಡಬಾರದು.

ಶ್ರೀ ಕೆ.ಹೆಚ್. ಪಾಟೀಲ್.—ಬೆಂಗಳೂರಿಗೆ ನೀರು ತರುವುದಕ್ಕೆಂದು ಕಾವೇರಿ ಬೇಸಿನ್‌ನಲ್ಲಿ ಬೇಕು ಬೇಕಾದಷ್ಟು ಹಣ ಕೊಡುತ್ತಿದ್ದೀರಿ? ಆದರೆ ನೀರು ಗದುಗ್‌ಗೆ ಬರಬೇಕು ಎಂದರೆ ನಮ್ಮ ಮಲಪ್ರಭಾಗೆ ಕೊಟ್ಟರೆ ತೊಂದರೆಯಾಗುತ್ತದೆ, ಎನ್ನುತ್ತೀರಿ ಹಣ ಇಲ್ಲ ಎನ್ನುತ್ತೀರಿ ಸರ್ಕಾರದ ಪಾಲಿಸಿ ಈ ರೀತಿಯಾಗಿದೆ ವೈಯುಕ್ತಿವಾಗಿ ನಾವು ಏನು ಹೇಳುವುದಿಲ್ಲ. ಈ ರೀತಿಯಾಗಬಾರದು.

ಶ್ರೀ ಹೆಚ್.ಡಿ. ದೇವೇಗೌಡ.—ನೀವು ಹೇಳುವುದನ್ನು ಅಕ್ಷರಶಃ ನಾನು ಶಿರಸಾ ವಹಿಸಿ ಒಪ್ಪಿಕೊಳ್ಳುತ್ತೇನೆ. ಪಕ್ಷ ರಾಜಕಾರಣ ಅಭಿವೃದ್ಧಿಯ ಕೆಲಸಕ್ಕೆ ಅಡ್ಡಿ ಬರಬಾರದು. ಈ ಮಾತನ್ನು ಈ ವೇದಿಕೆ ಮೇಲೆ ಹೇಳುತ್ತಿದ್ದೇನೆ. ಅಲ್ಲಿ ಜನತಾದವರು ಮಾತ್ರ ನೀರು ಕುಡಿಯುತ್ತಾರೆ, ಕಾಂಗ್ರೆಸ್‌ನವರು ನೀರು ಕುಡಿಯುವುದಿಲ್ಲ ಎಂದು ಅಲ್ಲ. ಮಲಪ್ರಭಾದ ಜನರ ಸಮಸ್ಯೆ ಬಹಳ ದಿನದ ಆಗಿದೆ. ನಾನು ಪಿ.ಎ.ಸಿ.ಯಲ್ಲಿ ಕೂಡ ಅಧ್ಯಕ್ಷನಾಗಿ ಕೆಲಸ ಮಾಡಿದಾಗ ಇದನ್ನು ನೋಡಿ, ಕ್ಯಾಬಿನೆಟ್‌ನಲ್ಲೂ ಇದಕ್ಕೆ ಮಹತ್ವ ಕೊಡಲು ನಾವು ನಿರ್ಣಯ ಮಾಡಿದ್ದೇವೆ ಹಣವನ್ನು ತೊಡಗಿಸತಕ್ಕ ವಿಷಯದಲ್ಲಿ ತಡವಾಗಿದೆ. ಲೇಟೆಸ್ಟ್ ಸ್ಪೆಂಡಿಂಗ್ ಗೊತ್ತಿಲ್ಲ. ಯಾವ ಸ್ಪೀಡ್‌ನಲ್ಲಿ ಹೋಗುತ್ತಿದ್ದೇವೆ ಎಂಬುದನ್ನು ಹೇಳಿದೆ. ಯಾವುದೇ ತಾರತಮ್ಯ ಇರಲಾರದೆಂದು ಮತ್ತೊಮ್ಮೆ ಹೇಳುತ್ತೇನೆ.

ಕರ್ನಾಟಕ ಆರ್ಥಿಕ ಅಭ್ಯುದಯಕ್ಕೆ ನಾವೆಲ್ಲರೂ ಸಾಹಿತಿಗಳು 'ಚೆಲುವ ಕನ್ನಡನಾಡು' ಎಂದು ಏನು ಹೇಳಿ ಹೋದರು ಅಂತಹ ಚೆಲುವ ಕನ್ನಡನಾಡನ್ನು ಕಟ್ಟುತ್ತೇವೆ. ಅದಕ್ಕೆ ಪ್ರಯತ್ನ ಮಾಡುವುದಾದರೆ ನೀರಾವರಿ. ನೀರಾವರಿಗಾಗಿ ಖರ್ಚು ಮಾಡತಕ್ಕಂಥ ಹಣ ಏನಿದೆ ರೇಟ್ ಆಫ್ ಸ್ಪೆಂಡಿಂಗ್ ೨೨೦.೭೨ ಕೋಟಿ ರೂಪಾಯಿ other than maintaince ಖರ್ಚು ಮಾಡುತ್ತೇವೆ. original work ಗಾಗಿ ೧೯೮೦–೮೧ರಲ್ಲಿ ೧೧೮ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಈಗ ಇರಿಗೇಷನ್‌ಗಾಗಿ ಪ್ಲಾನ್ ಅಂಡ್ ನಾನ್ ಪ್ಲಾನ್‌ನಲ್ಲಿ ೨೨೨ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ. ಅದು ಸಾಲದು ಕನಿಷ್ಟ ಪಕ್ಷ ೩೦೦ ಕೋಟಿ ರೂಪಾಯಿವರೆಗೆ ಆದರೂ ಖರ್ಚು ಮಾಡಬೇಕು. ಆ ದಿನವನ್ನು ಕಂಡಾಗಲೇ ಸ್ವಲ್ಪಮಟ್ಟಿಗೆ

ಸಂತೃಪ್ತರಾಗಬಹುದೆಂದು ನಾನು ಭಾವಿಸಿಕೊಳ್ಳುತ್ತೇನೆ. ಮಾನ್ಯ ಸದಸ್ಯರುಗಳು ಅತ್ಯುತ್ತಮ ಸಲಹೆ ಗಳನ್ನು ಕೊಟ್ಟಿದ್ದೀರಿ. ನೀರನ್ನು ಪಡೆದುಕೊಳ್ಳುವುದಕ್ಕೆ ನಾವು ಅವರಿಂದ ಸ್ವಲ್ಪ ಹಣವನ್ನು ತೆಗೆದು ಕೊಳ್ಳಬೇಕಾಗಿದೆ. ಅದನ್ನೇ ಮಾನ್ಯ ಮುಖ್ಯಮಂತ್ರಿಗಳು ಅವರ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ, ಆ ಹಣವನ್ನು ಡ್ರೈಲ್ಯಾಂಡ್‌ನಿಂದ ಜೀವನ ಮಾಡತಕ್ಕ ಜನ ಏನು ಇದ್ದಾರೆ, ಅವರ ಜೀವನವನ್ನು ಸುಖಮಯ ಮಾಡಲಿಕ್ಕೆ ಹಣ ಉಪಯೋಗ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಸರ್ಕಾರದ ಬಂಡವಾಳವನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಸಂಪನ್ಮೂಲಗಳಿಂದ ನೇರವಾಗಿ ಲಾಭವನ್ನು ಪಡೆದು ಕೊಳ್ಳುವುದಕ್ಕೆ, ಆಲೋಚನೆ ಮಾಡುತ್ತಿದ್ದೇವೆ ಆ ಕಡೆಯ ಸದಸ್ಯರು ಈ ಕಡೆಯ ಸದಸ್ಯರು ಎಲ್ಲರೂ ಇದರ ಬಗ್ಗೆ ಹೇಳಿದ್ದಾರೆ. ೩೦೦ ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಈ ವರ್ಷದಿಂದ ಸಂಕಲ್ಪ ಮಾಡಿದ್ದೇವೆಯೆಂದು ಹೇಳಿದ್ದೇವೆ. ಆ ದಿಕ್ಕನ್ನು ಯೋಜನೆಗಳನ್ನು ಕಂಡಾಗಲೇ ನಮ್ಮ ಆಸೆ ಪೂರೈಸುತ್ತದೆ. ಆದ್ದರಿಂದ ನಾವು ೧೦೦ ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದೇವೆ ಇದರಿಂದ ಸರಿಯಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕಾವೇರಿ ಜಲಾನಯನ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ದೈವ ನದಿಗಳು ಜೀವನಾಡಿಗಳು ಇದ್ದ ಹಾಗೆ, ಆ ವ್ಯಾಪ್ತಿಯಲ್ಲಿ ಬರತಕ್ಕ ಜನ ಯಾರೇ ಇರಲಿ ಅವರು ಸಮಾಜದ ಯಾವುದೇ ವರ್ಗಕ್ಕೆ ಸೇರಿರಲಿ ಅವರ ಆರ್ಥಿಕ-ಕಲ್ಯಾಣಕ್ಕೋಸ್ಕರ ನಾವೆಲ್ಲರೂ ಶ್ರಮಿಸೋಣವೆಂದು ಹೇಳುತ್ತೇನೆ. ಮಾನ್ಯ ಕೆ.ಎಚ್. ಪಾಟೀಲ್ ರವರು ಕಾಡಾ ಬಗ್ಗೆ ಸ್ವಲ್ಪ ಕಟುವಾದ ಟೀಕೆಯನ್ನು ಮಾಡಿದ್ದಾರೆ. ಒಳ್ಳೆಯ ಟೀಕೆಯನ್ನು ಮಾಡಿದ್ದಾರೆ, ಅವರು ಟೀಕೆ ಮಾಡಿದ್ದುದು ಅಸತ್ಯವಾದುದೆಂದು ಹೇಳಲಿಕ್ಕೆ ನಾನು ಸಿದ್ಧನಿಲ್ಲ. ಇದಕ್ಕೆ ಖಾಸಗಿಯವರನ್ನು ಛೇರ್ಮನ್ ಮಾಡಲಿಕ್ಕೆ ದೊಡ್ಡ ಮಹತ್ವವನ್ನು ಕೊಡಲಿಲ್ಲ. ನನಗೆ ಬೇಕಾಗಿರುವುದು ಕೆಲಸವಾಗಬೇಕೆನ್ನುವ ಮಾತನ್ನು ಹೇಳಿದ್ದೇನೆ. ಇದರಲ್ಲಿ ನಾವು ತೃಪ್ತಿಕರವಾದ ಸನ್ನಿವೇಶದಲ್ಲಿ ಕೆಲಸ ಕಾರ್ಯ ಮಾಡದಿದ್ದರೂ ಆ ದಿಕ್ಕಿನಲ್ಲಿ ಯೋಜನೆಗಳು ಸ್ವಲ್ಪಮಟ್ಟಿಗೆ ನಾವು ನಮ್ಮ ಬೆನ್ನನ್ನು ತಟ್ಟಿಕೊಳ್ಳುವಷ್ಟರ ಮಟ್ಟಿಗೆ ಕೆಲಸ ಮಾಡಿದ್ದೇವೆಂದು ಹೇಳಬಹುದು. ಪೂರ್ಣ ಯಶಸ್ಸು ಕಂಡಿದ್ದೇ ವೆಂದು ಹೇಳಲಿಕ್ಕೆ ಸಿದ್ಧನಿಲ್ಲ. 'ಕಾಡಾ' ಬಗ್ಗೆ ಹೇಳುವುದಾದರೆ ಕಾಡಾ ಪ್ರಾರಂಭ ಮಾಡಿದಾಗ ೨ ಕೋಟಿ ೯೮ ಲಕ್ಷ ರೂಪಾಯಿಗಳು ಇವರೆಗೆ ಖರ್ಚು ಮಾಡಿದ್ದೇವೆ. ೧೯೮೦–೮೧ರಲ್ಲಿ ೨ ಕೋಟಿ ೯೮ ಲಕ್ಷ ಖರ್ಚು ಮಾಡಲಾಗಿದೆ. ೧೯೮೧–೮೨ರಲ್ಲಿ ೪ ಕೋಟಿ ೮೭ ಲಕ್ಷ ಖರ್ಚು ಮಾಡಲಾಗಿದೆ. ೧೯೮೨–೮೩ರಲ್ಲಿ ೧೦ ಕೋಟಿ ೧೪ ಲಕ್ಷ ಖರ್ಚು ಮಾಡಿದ್ದೇವೆ. ೧೯೮೩–೮೪ರಲ್ಲಿ ೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೪–೮೫ರಲ್ಲಿ ೧೭.೧೭ ಲಕ್ಷ ಖರ್ಚು ಮಾಡಿದ್ದಾರೆ. ೧೯೮೫–೮೬ರಲ್ಲಿ ೩೩.೧೭ ಲಕ್ಷ ಖರ್ಚು ಮಾಡಿದ್ದೇವೆ, ಈ ವರ್ಷ ತುಸು ಹೆಚ್ಚು ಕಡಿಮೆ ಅಷ್ಟೇ ಖರ್ಚು ಮಾಡಿದ್ದೇವೆ. ಅಂದರೆ ಈ ದಿಕ್ಕಿನಲ್ಲಿ ನಾವು ಹೆಚ್ಚು ಪ್ರಯತ್ನ ಮಾಡಿ ಬಂಡವಾಳವನ್ನು ತೊಡಗಿಸಿ ಜನತೆಗೆ ಉಪಯೋಗ ಮಾಡಿಕೊಳ್ಳಬೇಕೆಂದು ಮಾಡಿದ್ದೇವೆ, ಅದರ ಅಂಕಿಅಂಶಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಪದೇ ಪದೇ ಹೇಳಿದ್ದಾರೆ, ನೀರು ನಿಂತು ಚೌಗು ಬಂದು ಭೂಮಿ ಹಾಳಾಗುತ್ತಿದೆ, ಇದರ ಬಗ್ಗೆ ಅಂಕಿಅಂಶಗಳನ್ನು ಕೇಳಿದ್ದಾರೆ. ಕೆಲವು ಕಡೆ ಅಚ್ಚುಕಟ್ಟು ಪ್ರದೇಶದಲ್ಲಿರತಕ್ಕ ಹಳ್ಳಿಗಳ ಜನರ ಸ್ಥಿತಿ ಧಾರುಣ ಸ್ಥಿತಿ ಇದೆ. ಕಮಾಂಡ್ ಏರಿಯಾದಲ್ಲಿ ಬರತಕ್ಕ ಹಳ್ಳಿಗಳಲ್ಲಿ ಜನರು ವಾಸ ಮಾಡುವುದಕ್ಕೆ ಆಗುವುದಿಲ್ಲ. ಮನೆಯಲ್ಲಿ ಮಕ್ಕಳನ್ನು ಮಲಗಿಸುವುದಕ್ಕೆ ಆಗದೇ ಮರದ ಕೊಂಬೆಗೆ ತೊಟ್ಟಿಲನ್ನು ಕಟ್ಟಿದ್ದರು. ಅದನ್ನು ನಾನು ಕಣ್ಣಿನಿಂದ ನೋಡಿದೇನೆ. ಅದರ ಬಗ್ಗೆ ಸ್ಥಳ ಪರಿಶೀಲನೆ ಮಾಡಿದ್ದೇನೆ ಕಳೆದ ೩೫ ವರ್ಷಗಳಿಂದ ಈ ಬಗ್ಗೆ ನಾವು ನಿರ್ಣಯ ಮಾಡಲಿಲ್ಲ. ನಾನು ೧೯೭೭–೭೮ರಲ್ಲಿ ಭಾಷಣ ಮಾಡಿದ್ದೇನೆ. ವಿರೋಧಪಕ್ಷದಲ್ಲಿದ್ದಾಗ ನಾವು ಎಷ್ಟೇ ಹೇಳಿದರೂ ಅದು ಆಗಲಿಲ್ಲ. ಮಾನ್ಯ ಮೊಯಿಲಿಯವರು ಸಚಿವ ಸಂಪುಟದಲ್ಲಿದ್ದಾಗ ರಾಜ್ಯದ ರೆವಿನ್ಯೂ ಡಿವಿಜನ್‌ಗಳಲ್ಲಿ ಸಚಿವ ಸಂಪುಟದ ಸಭೆಯನ್ನು ಮಾಡಿದಾಗ, ನಾವುಗಳೆಲ್ಲಾ ಮೈಸೂರು ಜಿಲ್ಲೆಯಲ್ಲಿ ಈ ಬಗ್ಗೆ ಮನವಿಯನ್ನು ಸಬ್‌ಮಿಟ್ ಮಾಡಿದ್ದೇವೆ. ಇವತ್ತು ಸರ್ಕಾರದ ಅಧಿಕಾರಿಗಳು ಆ ಬಗ್ಗೆ ವಿರೋಧ ವ್ಯಕ್ತಮಾಡಿದ್ದಾರೆ. ಕಮಾಂಡ್ ಏರಿಯಾದಲ್ಲಿರುವ ಜನರು ನೀರು ತೆಗೆದುಕೊಳ್ಳುತ್ತಾರೆ ಇದರಿಂದ ಅವರ ಆರ್ಥಿಕ ಶಕ್ತಿ ಹೆಚ್ಚಾಗುತ್ತದೆ, ಆ ಹಳ್ಳಿಗಳನ್ನು ಪುನರ್ ವ್ಯಾಪ್ತಿಗೆ ತರುವುದಕ್ಕೆ ಸಾಧ್ಯ ವಿಲ್ಲವೆಂದು ಹೇಳಿದಾಗ ಅದರ ಬಗ್ಗೆ ಜಗ್ಗಾಟವಾಯಿತು. ಅದರ ಬಗ್ಗೆ ನಿರ್ಣಯ ಮಾಡಲಿಕ್ಕೆ ಎರಡು ವರ್ಷಗಳಿಂದ ಹೆಣಗಾಡಿದ್ದು ಇಂತಹ ಹಳ್ಳಿಗಳವರಿಗೆ ಎಲ್ಲಾ ಪರಿಹಾರವನ್ನು ಕೊಟ್ಟು ಪುನರ್ ವಸತಿ ಕಲ್ಪಿಸಲಿಕ್ಕೆ ಒಂದು ನೀತಿ ನಿರೂಪಣೆ ಒಪ್ಪಿಕೊಂಡಿದ್ದೇವೆ. ಆ ಒಂದು ದಿಕ್ಕಿನಲ್ಲಿ ಕೆಲಸ ನಾವು ಮಾಡುತ್ತೇವೆ.

ಇನ್ನು ತುಂಗಭದ್ರ ಜಲಾಶಯದ ಹಿಂಭಾಗದಲ್ಲಿ ಹೆಚ್ಚು ಜೌಗು ಬಂದಿದೆ. ಹೊಸ ನೀರು ಬರುತ್ತಿದೆ, ಅದರ ಬಗ್ಗೆ ನಾವು ಹಾಕಿಕೊಂಡಿರತಕ್ಕ ಕ್ರಮ ಸಾಲದು. ಅದರ ಬಗ್ಗೆ ತೊಡಗಿಸಿರತಕ್ಕ ಹಣ ಸಾಲದೆಂದು ನಾನು ಒಪ್ಪಿಕೊಳ್ಳುತ್ತೇನೆ. ನಾವು ನಮ್ಮ ಅಧಿಕಾರಿಗಳು ಡಚ್ ಗೌರ್ನಮೆಂಟ್ ಜೊತೆ ದೆಹಲಿಯಲ್ಲಿ ಸಭೆ ಮಾಡಿದ್ದೇವೆ. ಅದರ ಬಗ್ಗೆ ಹೆಚ್ಚು ಪ್ರಯತ್ನ ಮಾಡುತ್ತಿದ್ದೇವೆಂದು ಇರತಕ್ಕ ವಾಸ್ತವಾಂಶವನ್ನು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿಂತ ನೀರಿನ ಬಗ್ಗೆ ಹೇಳಿ.

ಶ್ರೀ ಎಚ್, ಡಿ. ದೇವೇಗೌಡ.—ಅದರ ಬಗ್ಗೆ ಇನ್ನೂ ಮಾಡಬೇಕಾಗಿದೆ. ನಮ್ಮ ಬಂಡವಾಳ ಹೂಡಿಕೆ ಬಹಳ ಕಡಿಮೆಯೆಂದು ಹೇಳಿದ್ದಾರೆ. ಮಾನ್ಯ ಮೊಯಿಲಿಯವರ ಭಾಷಣವನ್ನು ಕಣ್ಣಲ್ಲಿ ಕಣ್ಣಿಟ್ಟು ಕಿವಿಯಲ್ಲಿ ಕಿವಿಯಿಟ್ಟು ಕೇಳಿದ್ದೇನೆ. ಅವರು ಏನು ಹೇಳುತ್ತಾರೆಂದರೆ ಕಾರ್ಯಕ್ರಮಗಳನ್ನು ಬಾಯಲ್ಲಿ ಹೇಳುತ್ತೀರಿ ಕೃತಿಯಲ್ಲಿ ನಡೆಸಲಿಲ್ಲವೆಂದು ಹೇಳಿದ್ದಾರೆ. ರಸ್ತೆಯ ಬಗ್ಗೆ ಹೇಳುವುದಾದರೆ ೧೯೮೦-೮೧ರಲ್ಲಿ ಪ್ಲಾನ್ ಅಂಡ್ ನಾನ್ ಪ್ಲಾನ್‌ನಲ್ಲಿ ೩೩.೭೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ೧೯೮೫-೮೬ರಲ್ಲಿ ೫೦ ಕೋಟಿ ೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ೧೯೮೬-೮೭ರಲ್ಲಿ ೬೬.೧೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಹಣವನ್ನು ಒದಗಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಎಂದರೆ ಒನ್ ಟು ಡಬ್ಬಲ್ ೩೩.೭೬ ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಿದ್ದರೆ ನಾವು ೬೬.೧೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿದ್ದೇವೆ. ಬಾಂಬೆ ಕರ್ನಾಟಕದ ಬ್ರೇಕ್‌ಅಪ್ ಕೊಡುತ್ತೇನೆ. ಮಾನ್ಯ ಕೆ.ಎಚ್, ಪಾಟೀಲ್‌ರವರು ೧೯೮೦-೮೧ರಲ್ಲಿ ೮.೨೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ನಾವು ೧೯೮೬-೮೭ರಲ್ಲಿ ೧೬.೫೫ ಲಕ್ಷ ಖರ್ಚು ಮಾಡುತ್ತಿದ್ದೇವೆ.

ಒಂದಕ್ಕೆ ಎರಡರಷ್ಟು ಖರ್ಚು ಮಾಡುತ್ತಿದ್ದೇವೆಂದಾಯಿತು. ನಂತರ ಹೈದರಾಬಾದ್ ಕರ್ನಾಟಕ ಭಾಗಕ್ಕೆ ನಿಮ್ಮ ಕಾಲದಲ್ಲಿ ಅಂದರೆ ೧೯೮೦-೮೧ರಲ್ಲಿ ೬೫೭ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರೆ, ನಾವು ೧೯೮೬-೮೭ನೇ ಸಾಲಿನಲ್ಲಿ ೧೨೫೧ ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ತಮಗೆ ಇದರಿಂದ ಸ್ವಲ್ಪ ಸಮಾಧಾನವಾಗಿರಬಹುದೆಂದು ನಾನು ಭಾವಿಸುತ್ತೇನೆ. ಅದೇ ರೀತಿ ಅಚೀವ್‌ಮೆಂಟ್‌ನ್ನು ಲೆಕ್ಕ ಹಾಕುವುದಾದರೆ. ನಿಮ್ಮ ಕಾಲದಲ್ಲಿ ಆ ಭಾಗದಲ್ಲಿ ೧೨೬೮ ಕಿಲೋಮೀಟರ್ ರಸ್ತೆಯನ್ನು ಟಾರ್ ರಸ್ತೆಯನ್ನಾಗಿ ಮಾಡಿದ್ದರೆ, ಇವತ್ತು ೧೯೮೪-೮೫ರಲ್ಲಿ ೨೦೫೫ ಕಿಲೋಮೀಟರ್ ರಸ್ತೆಯನ್ನು ಟಾರ್ ರಸ್ತೆಯನ್ನಾಗಿ ಮಾಡಿದ್ದೇವೆ. ಅದೇ ರೀತಿ ಮೆಟ್ಲ್ ರಸ್ತೆ ಬಗ್ಗೆ ಹೇಳುವುದಾದರೆ, ನಿಮ್ಮ ಕಾಲದಲ್ಲಿ ೧೯೭೨ ಕಿಲೋಮೀಟರ್ ಮಾಡಿದ್ದರೆ, ಇವತ್ತು ೪೦೮೨ ಕಿಲೋಮೀಟರ್ ಮಾಡಿದ್ದೇವೆ. ನಂತರ ಬ್ರಿಡ್ಜಸ್ ಬಗ್ಗೆ ಹೇಳುವುದಾದರೆ, ನಿಮ್ಮ ಕಾಲದಲ್ಲಿ ೫೫ ಬ್ರಿಡ್ಜಸ್‌ಗಳನ್ನು ಮಾಡಿದ್ದರೆ, ನಮ್ಮ ಕಾಲದಲ್ಲಿ ೧೦೧ ಬ್ರಿಡ್ಜಸ್‌ಗಳನ್ನು ಮಾಡಿದ್ದೇವೆ.

೭೪೬ ಹಳ್ಳಿಗಳಿಗೆ ನೀವು ಇಂಟರ್ ಕಮ್ಯುನಿಕೇಷನ್ ವ್ಯವಸ್ಥೆ ಮಾಡಿದ್ದರ, ನಾವು ೧,೦೨೨ ಹಳ್ಳಿಗಳಿಗೆ ಮಾಡಿದ್ದೇವೆ. ನಂತರ ಅಪ್ರೋಚ್ ರೋಡ್ ಟು ಹರಿಜನ್ ವಾಡಾ ಎನ್ನುವುದು ಹೊಸ ಕಾರ್ಯಕ್ರಮ. ಅದರಲ್ಲಿ ೪೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಹರಿಜನವಾಡಿ ರಸ್ತೆ ಎಂದು ಏಕೆ ಹೇಳುತ್ತಿದ್ದೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಅದು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿರುವುದರಿಂದ ಅದನ್ನು ಬದಲಾವಣೆ ಮಾಡುವುದಕಾಗುವುದಿಲ್ಲ. ತಾವು ಅಲ್ಲಿಂದ ಬದಲಾವಣೆ ಮಾಡುವಂತೆ ಹೇಳುವುದ್ದಾರೆ, ಅವರು ಯಾವ ಹೆಸರನ್ನು ಸೂಚಿಸುತ್ತಾರೋ ಅದನ್ನು ಹಾಕುತ್ತೇವೆ. ಅದರಲ್ಲಿ ೩೦೦ ಕಿಲೋಮೀಟರ್ ರಸ್ತೆಯನ್ನು ಮಾಡಿದ್ದೇವೆ. ೧೯೮೪-೮೫ರಲ್ಲಿ ಹಳ್ಳಿ ಹೆದ್ದಾರಿ ಕಾರ್ಯಕ್ರಮದಲ್ಲಿ ೩೧ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ೪ ಮುಗಿದಿದ್ದು ಉಳಿದವುಗಳು ವಿವಿಧ ಹಂತಗಳಲ್ಲಿವೆ. ಸೇತುಬಂಧನ ಕಾರ್ಯಕ್ರಮದಲ್ಲಿ ೨೦೮ ಕೆಲಸಗಳನ್ನು ೧೯೮೪-೮೫ರಲ್ಲಿ ತೆಗೆದುಕೊಂಡಿದ್ದು ಎಲ್ಲವನ್ನೂ ಪೂರ್ತಿ ಮಾಡಿ ಸರ್ವೀಸ್ ಕೊಟ್ಟಿದ್ದೇವೆ. ೧೯೮೫-೮೬ರಲ್ಲಿ ೪೪೨ ಕೆಲಸಗಳನ್ನು ಸೇತುಬಂಧನ ಕಾರ್ಯಕ್ರಮದಲ್ಲಿ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಈಗ ವಿವಿಧ ಹಂತದಲ್ಲಿ ಕೆಲಸಗಳಾಗುತ್ತವೆ ಹೊಸದಾಗಿ ತಂದಿರುವ ಕಾರ್ಯಕ್ರಮ ಎಂದರೆ ಪೀಪಲ್ಸ್ ಪಾರ್ಟಿಸಿಪೇಷನ್ ಪ್ರೋಗ್ರಾಂ ಎಂದು

ಹಳ್ಳಿಯವರೇ ಮುಂದೆ ಬಂದು ೨೫ ಪರ್ಸೆಂಟ್ ಕೆಲಸವನ್ನು ನಾವೆ ಮಾಡಿಕೊಳ್ಳುತ್ತೇವೆಂದರೆ ಅಂತಹ ಕಡೆ ಆಧ್ಯತೆಯ ಆಧಾರದ ಮೇಲೆ ಹಣವನ್ನು ಸರ್ಕಾರ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಇದಕ್ಕಾಗಿ ಅಂದಾಜಿನಲ್ಲಿ ೨೫ ಲಕ್ಷ ಹಣವನ್ನು ಲಂಪಮ್ಮಾಗಿ ಇಟ್ಟುಕೊಂಡಿದ್ದೇವೆ. ಬಸ್ಸುಗಳು ಓಡಾಡ ತಕ್ಕಂತಹ ಗ್ರಾಮಗಳಲ್ಲಿ ರಸ್ತೆಗೆ ಟಾರ್ ಇಲ್ಲದಿದ್ದರೆ ಧೂಳು ಬರುತ್ತದೆ, ಮನೆಯ ಒಳಗಡೆಯೂ ಧೂಳು ಬರುತ್ತದೆಂದು ದೂರು ನಮ್ಮಲ್ಲಿಗೆ ಬಂದಿರುವುದರಿಂದ ಅದನ್ನು ತಪ್ಪಿಸುವುದಕ್ಕೋಸ್ಕರ ವಿಲೇಜ್ ಲಿಮಿಟ್‌ನಲ್ಲಿ ಟಾರ್ ರಸ್ತೆಯನ್ನು ಮಾಡಬೇಕೆಂದು ೫೦ ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ. ಈ ಯೋಜನೆಯನ್ನು ಪ್ರಥಮಭಾರಿಗೆ ಜಾರಿಗೆ ತಂದಿದ್ದೇವೆಂದು ಹೇಳುತ್ತೇನೆ. ಸನ್ಮಾನ್ಯ ವೀರಪ್ಪ ಮೋಯಿಲಿಯವರು ಈಗಲಾದರೂ ತುಂಬಾ ಸಮಾಧಾನಪಟ್ಟಿರುತ್ತಾರೆಂದು ನಾನು ಭಾವಿಸುತ್ತೇನೆ. ಬೇಕಾದರೆ ಎಲ್ಲಾ ವಿಚಾರಗಳ ಬಗ್ಗೆ ವಿವರಗಳು ಇವೆ. ಅದನ್ನು ಕೊಡುತ್ತೇನೆ. ತಾವು ನೋಡಬೇಕು, ಮತ್ತೆ ನಾವು ಅಧಿಕಾರಕ್ಕೆ ಬಂದಂತಹ ಕಾಲದಲ್ಲಿ ರೋಡ್‌ಲೆಸ್ ವಿಲೇಜ್ ೧೧೧೯ ಹಳ್ಳಿಗಳು ಇದ್ದರೆ ಇವತ್ತು ಅದನ್ನು ತಾವು ೩೬೧ಕ್ಕೆ ಇಳಿಸಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದಕ್ಕಾಗಿ ನಿಮಗೆ ಕಾಂಪ್ಲಿಮೆಂಟ್ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—Thank you very much. ಇದರ ಜೊತೆಗೆ ಫೇರ್ ವೆದರ್ ರೋಡ್ ಅಂಡ್ ಆಲ್ ವೆದರ್ ರೋಡ್ ಅನ್ನು ಅನುಕರಣೆ ಮಾಡಿದ್ದೇವೆ. We have made sufficient headway. ಇಲ್ಲ ಎಂದು ಹೇಳುವುದಿಲ್ಲ. ಮಿನಿಮಮ್ ನೀಡ್ ಪ್ರೋಗ್ರಾಂನಲ್ಲೂ ಮುಂದೆ ಹೋಗಿದ್ದೇವೆ. ತಾವು ಇದ್ದಾಗ ಇದಕ್ಕಾಗಿ ೪೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ೧೯೮೩-೮೪ರಲ್ಲಿ ನಾವು ೧೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೪-೮೫ರಲ್ಲಿ ೧೨೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆ ದಿಕ್ಕಿನಲ್ಲೂ ಹೆಚ್ಚು ಕೆಲಸ ಮಾಡಿದ್ದೇವೆ. ಎಂಬುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಸ್ತೆಗಳನ್ನು ನಾವು ಇಂಪ್ರೂವ್ ಮಾಡಿದ್ದೇವೆ. ತಾವು ಮಾತನಾಡುವಾಗ ಜಪಾನ್ ರೋಡ್ ಹೈವೇಸ್ ಬಗ್ಗೆ ಕಾಮೆಂಟ್ ಮಾಡಿದ್ದೀರಿ, ವೆಸ್ಟನ್ ಕಂಟ್ರೀಸ್‌ಗೆ ಹೋಲಿಸಿಕೊಂಡಾಗ ನಾವು ಬಹಳ ಹಿಂದಿದ್ದೇವೆ. ಬೃಹದಾಕಾರವಾಗಿ ಬೆಳೆಯುತ್ತಿರತಕ್ಕಂತಹ ಈ ನಾಡಿನ್ನು ವೆಸ್ಟ್ರನ್ ಕಂಟ್ರೀಸ್‌ಗೆ ಹೋಲಿಸಿಕೊಂಡಾಗ ನಾವು ಬಹಳ ಹಿಂದೆ ಇದ್ದೇವೆ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಶ್ರೀಮಾನ್ ಬಸವಲಿಂಗಪ್ಪನವರು ಕೇಂದ್ರ ಸರ್ಕಾರದ ಮೇಲೆ ಕ್ರಾಂತಿಯ ಕೂಗನ್ನೂ ಕೂಗಿದಾಗ ಏನಾದರೂ ಆಗುತ್ತದೆಯೋ ಏನೋ ನೋಡೋಣ,

ಇನ್ನು ರಾಷ್ಟ್ರೀಯ ಹೆದ್ದಾರಿಗಳ ಪ್ರಾಮುಖ್ಯತೆಯ ಬಗ್ಗೆ ಅಷ್ಟಾಗಿ ಹೇಳಿಕೊಳ್ಳುವ ಸ್ಥಿತಿಯಲ್ಲಿಲ್ಲ ೧೯೭೭ ರಿಂದೀಚೆಗೆ ಒಂದು ಹೊಸ ರಸ್ತೆಯನ್ನೂ ತೆಗೆದುಕೊಳ್ಳಲಿಲ್ಲ. ಹಿಂದಿನ ಸರ್ಕಾರವೂ ಹೊಸರಸ್ತೆಯನ್ನು ತೆಗೆದುಕೊಳ್ಳಲೂ ಪ್ರತಿಪಾದನೆ ಮಾಡಿದೆ. ನಾವೂ ಪ್ರತಿಪಾದನೆ ಮಾಡಿದ್ದೇವೆ. ಇಷ್ಟೆಲ್ಲಾ ಆದ ಮೇಲೂ ಕೂಡ ಹೊಸದಾಗಿ ರಾಷ್ಟ್ರೀಯ ಹೆದ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ಬಗ್ಗೆ ಒತ್ತಾಯ ಕೇಂದ್ರ ಸರ್ಕಾರದ ಮೇಲೆ ಇದ್ದೇ ಇದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ತೆಗೆದುಕೊಳ್ಳಬೇಕೆಂದು ಮೊನ್ನೆ ರಾಜೇಶ್‌ಪಿಲಾಟ್ ಬಂದಾಗ ಈ ವಿಷಯ ಕುರಿತು ಪ್ರಸ್ತಾಪ ಮಾಡಿದ್ದೇವೆ, ಆ ಬಗ್ಗೆ ಅವರು ವಚನ ಕೊಟ್ಟಿದ್ದಾರೆ. ಏನಾದರೂ ಮಾಡುತ್ತೇನೆಂದು ಹೇಳಿದ್ದಾರೆ. ಅವರ ಮಾತಿನಿಂದ ನಮಗೆ ಮನವರಿಕೆಯಾಗಿದೆ. ಒಪ್ಪಿದ್ದೇವೆ. ಈ ಸಾರಿ ನಿಮಗೆ ಸಹಾಯ ಮಾಡುತ್ತೇನೆ ಎನ್ನತಕ್ಕಂತಹ ಮಾತನ್ನೂ ಸಹ ಹೇಳಿದ್ದಾರೆ. ಆ ಆಸೆಯನ್ನೂ ಇಟ್ಟುಕೊಂಡಿದ್ದೇವೆ. ನಮ್ಮ ಇಲಾಖೆ ಬೇಡಿಕೆ ಮುಗಿದ ಮೇಲೆ ದೆಹಲಿಗೆ ಬರುತ್ತೇನೆ, ನಮಗೆ ಸಹಾಯ ಕೊಡಬೇಕೆಂದೂ ಕೂಡ ಹೇಳಿದ್ದೇವೆ, ನಾವೂ ನಮ್ಮ ಅಧಿಕಾರಿಗಳೂ ಹೋಗಿ ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಸುಮಾರಾಗಿ ನಮ್ಮ ರಾಜ್ಯದಲ್ಲಿರತಕ್ಕಂತಹ ಕೆಲವು ರಸ್ತೆಗಳನ್ನು ಅಪ್‌ಗ್ರೇಡ್ ಮಾಡಬೇಕೆಂದಿದ್ದೇವೆ, ಕೇಂದ್ರ ಸರ್ಕಾರದ ಗೈಡ್‌ಲೈನ್ ಪ್ರಕಾರ as far as formulae suggested in the Road Development Plan, Karnataka State should have a length of 12000 Kms. State High Ways, 22,500 Kms. Major District Roads by 2001 AD. In order to achieve this, it is necessary to upgrade 4088 Kms. Roads of State

High Ways and 6523 Kms. of Major Dist.Roads. ಇದನ್ನು ಹೆಚ್ಚು ಮಾಡಬೇಕಾಗಿರುವುದರಿಂದ ಈ ಎರಡರ ಬಗ್ಗೆಯೂ ಸರ್ಕಾರ ನಿರ್ಣಯ ಮಾಡಬೇಕೆಂದಿದೆ. ಅದಕ್ಕೆ ಸನ್ಮಾನ್ಯ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು ಟ್ರಾಫಿಕ್ ಡೆನ್ಸಿಟಿ ಬಗ್ಗೆ ಈಗಾಗಲೇ ಸರ್ವೇ ಮಾಡಿದ್ದೇವೆ. ಅದರ ಆಧಾರದ ಮೇಲೆ ಕೆಲವು ರಸ್ತೆಗಳನ್ನು ಅಪ್‌ಗ್ರೇಡ್ ಮಾಡುತ್ತೇವೆಂದು ತಿಳಿಸುತ್ತೇನೆ, ಮಾನ್ಯ ಬಸವಲಿಂಗಪ್ಪನವರು ಒಂದು ಮಾತನ್ನು ಈ ಇಲಾಖೆಯ ಬಗ್ಗೆ ಹೇಳಿದರು. ಅದಕ್ಕೆ ಶ್ರೀಮಾನ್ ವೆಂಕಟರಾಮಯ್ಯನವರು ಬೇರೊಂದು ರೂಪದಲ್ಲಿ ಹೇಳಿದರು. ಶ್ರೀಮಾನ್ ಬಸವಲಿಂಗಪ್ಪನವರು "Public Works Department is Public Eneny number one" ಎಂದು ಹೇಳಿದರು.

ಶ್ರೀ ಬಿ. ಬಸವಲಿಂಗಪ್ಪ.—ಈ ರೀತಿ ರೂಢಿಯಾಗಿಬಿಟ್ಟಿದೆ. ಅದನ್ನು ನಿಮ್ಮ ಕಾಲದಲ್ಲಾದರೂ ಬದಲಾಯಿಸಿಕೊಳ್ಳಿ ಎಂದು ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ನೀವೂ ನಾವು ಕುಳಿತ್ತಿದ್ದೇವೆ ಈಗ. ಈ ಕಟ್ಟಡವನ್ನು ಕಟ್ಟಿದವರು ಯಾರು ?

ಶ್ರೀ ಬಿ. ಬಸವಲಿಂಗಪ್ಪ.—ಈ ಕಟ್ಟಡವನ್ನು ಕಟ್ಟುವ ವಿಚಾರ ಬೇರೆ.

ಶ್ರೀ ಎಚ್. ಡಿ. ದೇವೇಗೌಡ.—ಅಂದು ಇಂಜಿನೀಯರ್‍ಸ್ ಇದ್ದರು. ಅದನ್ನು ಮಾನ್ಯ ಬಸವಲಿಂಗಪ್ಪನವರು ವಿಚಾರ ಮಾಡದೇ ಆ ಮಾತನ್ನು ಹೇಳಿದ್ದಾರೆ, ನಾವು ಇವತ್ತು ಅಧಿಕಾರಕ್ಕೆ ಬಂದಿದ್ದೇವೆಂದು ಎಲ್ಲವನ್ನೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ನೀವು ಯಾವ ಅಧಿಕಾರಿಗಳಿಂದ ಕೆಲಸ ಮಾಡಿಸುತ್ತಿದ್ದೀರೋ, ಅದೇ ಅಧಿಕಾರಿಗಳಿಂದ ನಾವೂ ಕೆಲಸ ಮಾಡಿಸಬೇಕಾಗುತ್ತದೆ. ಎಲ್ಲರನ್ನೂ ಸರಿಮಾಡಿದ್ದೇವೆ. ಎಲ್ಲಿಯೂ ಅಪವ್ಯಯವಾಗಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ನಡೆಯತಕ್ಕಂಥ ಅಕ್ರಮಗಳನ್ನು ತಡೆಯತಕ್ಕಂಥ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಬಂದ ಮೇಲೆ ಹಲವಾರು ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸರ್‌ಪ್ರೈಸ್ ಚೆಕ್ ಸಿಸ್ಟಂನ್ನು ಇಂಟರ್‌ಡ್ಯೂಸ್ ಮಾಡಿದ್ದೇವೆ. ಪ್ರತಿ ವರ್ಷ ಸುಮಾರು ಎರಡೂವರೆ ಸಾವಿರಕ್ಕಿಂತ ಹೆಚ್ಚು ಸರ್‌ಪ್ರೈಸ್ ಚೆಕ್ ಮಾಡಬೇಕೆಂದು ತಿಳಿಸಿದ್ದೇವೆ. ಅದರಂತೆ ಪ್ರತಿ ತಿಂಗಳು ಚೀಫ್ ಇಂಜಿನೀಯರ್ ೫ ಸರ್‌ಪ್ರೈಸ್ ಚೆಕ್ ಮಾಡಬೇಕು. ಸೂಪರಿಂಟೆಂಡಿಂಗ್ ಇಂಜೀನಿಯರ್ ಪ್ರತಿ ತಿಂಗಳು ೮ ಸರ್‌ಪ್ರೈಸ್ ಚೆಕ್ ಮಾಡಬೇಕು. ನಂತರ ಎಕ್ಸಿಕ್ಯೂಟೀವ್ ಇಂಜಿನೀಯರ್ ಪ್ರತಿ ತಿಂಗಳು ೧೨ ಸರ್‌ಪ್ರೈಸ್ ಚೆಕ್ ಮಾಡಬೇಕೆಂದು ತಿಂಗಳ ಕೋಟಾವನ್ನು ನಿಗದಿ ಮಾಡಿದ್ದೇವೆ. ಆದರ ಪ್ರಕಾರ ನಮ್ಮಲ್ಲಿ ೧೯೮೪-೮೫ರಲ್ಲಿ ೧೬೮೦ ಸರ್‌ಪ್ರೈಸ್ ಚೆಕ್‌ಗಳನ್ನು ಮಾಡಿದ್ದು, ಮೂರು ಕೇಸುಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಿದ್ದೇವೆ. ಇದರ ಜೊತೆಗೆ ಫ್ಲೈಯಿಂಗ್ ಸ್ಕ್ವಾಡ್ ಎಂದು ಕೂಡ ಮಾಡಿದ್ದೇವೆ. ಈ ದಿಕ್ಕಿನಲ್ಲಿ ಹೊಸ ವಿಧಾನವನ್ನು ಅನುಸರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಸರ್‌ಪ್ರೈಸ್ ಚೆಕ್ ಸಿಸ್ಟಂನ್ನು ಜಾರಿಗೆ ತಂದಿದ್ದು ಸರ್‌ಪ್ರೈಸ್ ಚೆಕ್‌ಗಳನ್ನು ಮಾಡಿದಂತಹ ವರದಿ ಪ್ರತಿ ತಿಂಗಳು ೫ನೇ ತಾರೀಖಿನೊಳಗೆ ನನಗೆ ಮುಟ್ಟಬೇಕೆಂಬ ಆದೇಶವನ್ನೂ ಕೂಡ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ನೀಡಿದ್ದೇನೆ.

೨೨೩ ಕೇಸ್‌ನಲ್ಲಿ ತನಿಖೆ ಮಾಡಿದ್ದೇವೆ. ೮ ಕೇಸ್‌ನಲ್ಲಿ ಕೆಲವರನ್ನು ಸಸ್ಪೆಂಡ್ ಮಾಡಿದ್ದೇವೆ. ೧೭ ಕೇಸ್‌ನಲ್ಲಿ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡಿದ್ದೇವೆ ಏನೂ ಮಾಡಿಲ್ಲವೆಂದು ಮಾತ್ರ ಹೇಳಬೇಡಿ. ದೇವೇಗೌಡರು ಆರಂಭಶೂರತ್ವದಲ್ಲಿ ಸಸ್ಪೆಂಡ್ ಮಾಡಿದರು, ಈಗ ಮಾಡಲಿಲ್ಲವೆಂದು ಹೇಳಬೇಡಿ. ಅದನ್ನೆಲ್ಲಾ ನಾವು ಪತ್ರಿಕೆಗಳಿಗೆ ತಿಳಿಸಬಾರದೆಂದು ಮಾಡಿದ್ದೇವೆ. ಈ ಸದನದಲ್ಲಿ ಕುಳಿತಿರತಕ್ಕವರಿಗೆ ಅನುಭವ ಕಡಿಮೆ ಇದೆ ಎಂದು ನಾನು ಅಂದುಕೊಳ್ಳುವುದಿಲ್ಲ. ಆಕಸ್ಮಿಕವಾಗಿ ನಾನು ಇಲ್ಲಿದ್ದೇನೆ, ನೀವು ಅಲ್ಲಿದ್ದೀರಿ. ಬೇರೆ ಇಲಾಖೆಯಲ್ಲಿ ಭ್ರಷ್ಟಾಚಾರ ಇಲ್ಲವೇ ಎಂದರೆ ಇದೆ. ಮಾನ್ಯ ಬಸವಲಿಂಗಪ್ಪನವರಿಗೆ ಬೆಂಗಳೂರು ನಗರಸಭೆಯಲ್ಲಿ ಹೆಲ್ತ್ ಇನ್ಸ್‌ಪೆಕ್ಟರನ್ನು ಸರಿ ಮಾಡಲಿಕ್ಕೆ ಆಗಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಾನು ನೋಡಲಿಲ್ಲ. ಇವತ್ತು ಅನೇಕರು ಆಸ್ತಿಗಳನ್ನು ಮಾಡಿಕೊಂಡಿದ್ದಾರೆ ನೋಡಿ.

ಶ್ರೀ ಹೆಚ್. ಡಿ. ದೇವೇಗೌಡ.—ರಾಜಕಾರಣಿಗಳ ಆಸ್ತಿಯನ್ನು ನೋಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಕಾಲದಲ್ಲಿ ಇದ್ದವಗದ್ದನ್ನು ನೋಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮೊನ್ನೆ ೯ ಜನರನ್ನು ಸಸ್ಪೆಂಡ್ ಮಾಡಿದ್ದನ್ನು ಪತ್ರಿಕೆಗಳಿಗೆ ಹೇಳಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ನಡೆದದ್ದನ್ನೆಲ್ಲ ಪತ್ರಿಕೆಗಳಿಗೆ ಹೇಳುತ್ತಾ ಹೋದರೆ ಉತ್ತಮ ಕೆಲಸ ಮಾಡತಕ್ಕ ಅಧಿಕಾರಿಗಳ ಮೇಲೆ ಆಗತಕ್ಕ ಆಘಾತವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವ ಇಲಾಖೆಯಲ್ಲೂ ಏನೂ ಕಾರ್ಯಕ್ರಮ ನಡೆಯುವುದಿಲ್ಲ, ಕೇವಲ ನೀರಾವರಿ ಇಲಾಖೆಯಲ್ಲಿ ಮಾತ್ರ ನಡೆಯುತ್ತದೆಂದು ಹೇಳುವುದಾದರೆ ಅದಕ್ಕಿಂತ ಹುಸಿ ಇಲ್ಲ. ಇದು ಪಬ್ಲಿಕ್ ಎನಿಮಿ ನಂ. ೧ ಎಂದು ರಾಜಗೋಪಾಲಚಾರಿಯವರು ಹೇಳಿದರು ಎಂದು ಅದು ಸರ್ವ ಕಾಲಕ್ಕೂ ವೇದವಾಕ್ಯವಾಗುವುದಿಲ್ಲ. ಸರ್ವ ಕಾಲಕ್ಕೂ ವೇದವಾಕ್ಯವಾಗುತ್ತದೆಂದು ಹೇಳುವುದಾದರೆ ದೇಶವನ್ನು ಕಟ್ಟುವವರು ಯಾರು ? ಯಾವುದಕ್ಕೆ ಎಷ್ಟು ಹಣ ಕೊಡಬೇಕೆಂದು ಆದ್ಯತೆ ಮೇಲೆ ಕೊಡಬೇಕು. ನಾನು ಬಂದ ೨-೩ ವಾರದಲ್ಲಿ ಬೆಳಗಾಂನಲ್ಲಿ ಎಸ್. ಇ. ಅವರನ್ನು ಸಸ್ಪೆಂಡ್ ಮಾಡಿದೆ. ಅದು ಸಣ್ಣ ಅಕ್ರಮವಾದರೂ ಅದನ್ನು ಬಿಡಲಿಲ್ಲ. ಮೆಟೀರಿಯಲ್ ಪರ್ಚೇಸ್ ಮಾಡಲಿಕ್ಕೆ ಏನು ಗೈಡ್‌ಲೈನ್ ಕೊಡಲಾಗಿತ್ತು ಅದರಲ್ಲಿ ದಾರಿ ತಪ್ಪಿದ ಎಂದು ಆ ಹಿರಿಯ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದೆ. ನಾನು ಬರುವುದಕ್ಕಿಂತ ಮುಂಚೆ ೧೦ ಕೋಟಿ ರೂಪಾಯಿಗಳ ಸ್ಪೇರ್ ಪಾರ್ಟ್ಸ್ ಅನ್ನು ಪರ್ಚೇಸ್ ಮಾಡಿ ವಿವಿಧ ಸ್ಟೋರ್ಸ್‌ಗಳಲ್ಲಿ ಬಿಸಾಕಿದ್ದಾರೆ. ತಾವು ಬೇಕಾದರೆ ಹೋಗಿ ನೋಡಿ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳುವುದು ಸತ್ಯ.

ಶ್ರೀ ಹೆಚ್. ಡಿ. ದೇವೇಗೌಡ.—ಅದರ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳುವುದಕ್ಕೆ ತಾವು ತಯಾರಿಲ್ಲ. ಕಳೆದ ೪ ತಿಂಗಳುಗಳಿಂದ ನಾವು ಪತ್ರಿಕೆಗಳಿಗೆ ಏನೂ ಹೇಳುತ್ತಿಲ್ಲ. ಬೇರೆ ಇಲಾಖೆಗಳಲ್ಲಿ ಏನೇ ವ್ಯವಹಾರಗಳು ನಡೆಯುತ್ತಿರಬಹುದು. ನನ್ನ ಇಲಾಖೆಯಲ್ಲಿ ನಡೆಯುತ್ತಿದ್ದರೆ ಅದನ್ನು ನೋಡುವುದು ನನ್ನ ಕರ್ತವ್ಯ. ಈ ಇಲಾಖೆಯಲ್ಲಿ ಏನಾದರೂ ಕೆಲವು ಮಾರ್ಪಾಡುಗಳನ್ನು ಮಾಡಬೇಕೆಂದು ಸಂಕಲ್ಪ ಮಾಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಕೆಲವರನ್ನು ಸಸ್ಪೆಂಡ್ ಮಾಡಿದಿರಿ. ಬೇರೆ ಇಲಾಖೆಯವರು ಬಿಟ್ಟಿದ್ದಾರೆಯೆ ?

ಶ್ರೀ ಹೆಚ್. ಡಿ. ದೇವೇಗೌಡ.—ಇದು ಮೇಜರ್ ಸ್ಪೆಂಡಿಂಗ್ ಡಿಪಾರ್ಟ್‌ಮೆಂಟ್. ಎಲ್ಲರ ಕಣ್ಣು ಇದರ ಮೇಲೇ ಬೀಳುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜಿಲ್ಲೆಗೆ ಒಂದೆರಡಾದರೂ ಸರ್‌ಪ್ರೈಸ್ ಚೆಕ್ ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದ್ದೇವೆ. ಆದರೆ ಇದರಿಂದ ಸಂಪೂರ್ಣವಾಗಿ ಯಶಸ್ಸು ಕಂಡಿದ್ದೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಸಮಾಜದ ಎಲ್ಲಾ ವರ್ಗ, ಶಕ್ತಿ ಇವುಗಳನ್ನು ಪ್ರತಿನಿಧಿಸಿಕೊಂಡು ಹೋಗತಕ್ಕ ಸಮಾಜ ನಮ್ಮಲ್ಲಿದೆ. ಆದ್ದರಿಂದ ಇದನ್ನು ಏಕಕಾಲದಲ್ಲಿ ಸರಿಪಡಿಸುತ್ತೇವೆಂದು ಹೇಳತಕ್ಕ ಶಕ್ತಿ ನನಗೆ ಇಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೈಸೂರಿನಲ್ಲಿ ಕಟ್ಟುತ್ತಿರತಕ್ಕ ಕಟ್ಟಡದ ಬಗ್ಗೆ ಹೇಳಿದಿರಿ. ಈ ಸದನದ ಮುಖಾಂತರ ನಾಡಿನ ಜನತೆಗೆ ಮನವಿ ಮಾಡಿಕೊಳ್ಳುತ್ತೇನೆ. ಎಲ್ಲಾ ಕೆಲಸಗಳನ್ನು ನಾನು ಹೋಗಿ ನೋಡುವುದಕ್ಕಾಗುವುದಿಲ್ಲ. ಅಧಿಕಾರಿಗಳನ್ನು ಪ್ರತಿ ಹಂತದಲ್ಲೂ ವಿಶ್ಲೇಷಣೆ ಮಾಡುವುದಕ್ಕೆ ಕಷ್ಟವಾಗುತ್ತದೆ. ನಾಡಿನ ಜನತೆಗೆ ಅಕ್ರಮ ಅನ್ಯಾಯವಾಗುತ್ತಿದ್ದರೆ ಅದನ್ನು ನನಗೆ ತಿಳಿಸಿದರೆ ಸಾಕು, ನಾವು ಪ್ರಾಮಾಣಿಕವಾಗಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಕ್ಕೆ ಸಿದ್ಧವಿದ್ದೇವೆಂದು ಜನತೆಯಲ್ಲಿ ಕಳಕಳಿಯಿಂದ ಮನವಿ ಮಾಡಿದ್ದೇನೆ. ಅದರಲ್ಲಿ ಹಿಂದೆ ಬಿದ್ದರೆ ಸದನದಲ್ಲಿ ತರಾಟೆಗೆ ತೆಗೆದುಕೊಳ್ಳುವುದಕ್ಕೆ ನಿಮಗೆ ಅಧಿಕಾರ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಮೈಸೂರಿನದನ್ನು ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—೧೧ ಲಕ್ಷ ರೂಪಾಯಿಗಳ ಜವಾಬ್ದಾರಿಯನ್ನು ೧೩ ಜನರ ಮೇಲೆ ಹೊರಿಸತಕ್ಕ ವರದಿ ಕಮೀಷನರ್ ಅವರಿಂದ ಬಂದಿದೆ. ಇಲಾಖೆಯ ತನಿಖೆ ಆಗಬೇಕಾಗಿದೆ. ಕ್ರಿಮಿನಲ್

ಪ್ರಾಸಿಕ್ಯೂಷನ್ ಮಾಡುವುದಕ್ಕೆ ಸರ್ಕಾರದ ವಕೀಲರನ್ನು ಗೊತ್ತು ಮಾಡಿದ್ದೇವೆ. ಕಂಟ್ರಾಕ್ಟರ್ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ನಿರ್ದಾಕ್ಷಿಣ್ಯವಾಗಿ ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ರಂಗ ಮಂದಿರದ ವಿಚಾರ ಹೇಳಿದಿರಿ, ಅದು ನನ್ನ ವ್ಯಾಪ್ತಿಗೆ ಬರುವುದಿಲ್ಲ, ಮಾನ್ಯ ಜೀವರಾಜ ಆಳ್ವ ಅವರನ್ನು ಕೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಸದನಕ್ಕೆ ಬರುವುದಿಲ್ಲವಲ್ಲ !

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಜವಾಬ್ದಾರಿ. ಅದು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಅದು ಅವರ ಕೈಕೆಳಗೆ ಕೆಲಸ ಮಾಡುತ್ತದೆ ಅಷ್ಟೆ. ಅದು ಕಾಂಟ್ರಾಕ್ಟಿಂಗ್ ಏಜೆನ್ಸಿ.

ಶ್ರೀ ಕೆ. ಎಚ್. ಪಾಟೀಲ್.—ಅಲ್ಲಿ ಅಧಿಕಾರಿಗಳು ನಿಮ್ಮವರು ಇದ್ದಾರೆ. ನೀವು ಸರ್ಕಾರದ ಪ್ರತಿನಿಧಿಗಳು ಇದ್ದೀರಿ. ದಯವಿಟ್ಟು ವಿಚಾರ ಮಾಡಿ. ಏಕೆಂದರೆ ತಮ್ಮನ್ನು ಲೋಕೋಪಯೋಗಿ ಸಚಿವರು ಎಂದು ಮಾತ್ರ ತಿಳಿದುಕೊಳ್ಳುವುದಿಲ್ಲ, ಸೀನಿಯರ್ ಮೋಸ್ಟ್ ಕ್ಯಾಬಿನೆಟ್ ಮಿನಿಸ್ಟರು ತಾವು. ಯಾವುದೇ ಇಲಾಖೆಯಲ್ಲಿ ಹೆಚ್ಚು ಕಡಿಮೆಯಾದರೂ ಅವರ ಕಿವಿ ಹಿಡಿಯುವ ಅಧಿಕಾರ ನಿಮಗೆ ಇದೆ. ಆದ್ದರಿಂದ ಅದರ ಬಗ್ಗೆ ಗಮನ ಹರಿಸುತ್ತೀರೆಂದು ಅಪೇಕ್ಷೆಪಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಆಯಾಯ ಇಲಾಖೆಯ ಮಂತ್ರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಇನ್ನೊಬ್ಬರ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡುವ ಪರಿಪಾಠ ನನ್ನಲ್ಲಿ ಇಲ್ಲ. ಅವರು ಸಣ್ಣವರು ಇರಲಿ, ದೊಡ್ಡವರು ಇರಲಿ, ಹಿರಿಯರು ಇರಲಿ, ಕಿರಿಯರು ಇರಲಿ ಆ ಪ್ರಶ್ನೆ ಇಲ್ಲಿ ಇಲ್ಲ. ಎಲ್ಲರೂ ಅವರವರ ಕರ್ತವ್ಯ ಮಾಡುವುದಕ್ಕೆ ಸರ್ವ ಸ್ವಾತಂತ್ರ್ಯ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಜವಾಬ್ದಾರಿ ಕೊಟ್ಟಿದ್ದಾರೆ. ಆದರೆ ಸರ್ಕಾರದ ಕೆಲಸಕ್ಕೆ ಎಲ್ಲರೂ ಹೊಣೆ, ಅದರಲ್ಲಿ ನಿಮ್ಮದೂ ಇದೆ. ಇಲ್ಲಿ ಏಜೆನ್ಸಿ ಬೇರೆ ಇರಬಹುದು. ಆಕಾಶಕ್ಕೆ ಮುಟ್ಟುತಕ್ಕ ಲಂಚಗುಳಿತನ ಅಲ್ಲಿ ನಡೆದಿದೆ ಎಂದು ಹೇಳುತ್ತೇನೆ. ಇದರ ಬಗ್ಗೆ ತನಿಖೆ ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ನಾನು ಉತ್ತರಿಸುತ್ತೇನೆ. ಚಾರ್ಜಸ್ ಹಾಕಿದರೆ ವಿಚಾರಣೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ನುಣುಚಿಕೊಳ್ಳಬೇಕೆಂಬುದು ಇಲ್ಲ. ರಂಗಮಂದಿರದಲ್ಲಿ ಏನಾದರೂ ಅವ್ಯವಹಾರ ನಡೆದದ್ದು ಮಾನ್ಯ ಬಸವಲಿಂಗಪ್ಪನವರ ಗಮನಕ್ಕೆ ಬಂದಿದ್ದರೆ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದರೆ ಅದರ ಬಗ್ಗೆ ವಿಚಾರಣೆ ಮಾಡಿಸುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಲಂಚ ತೆಗೆದುಕೊಂಡವರು ಹೇಳುತ್ತಾರೆಯೇ?

ಅಧ್ಯಕ್ಷರು.—ಈಗ ಉತ್ತರ ಮುಗಿಸಬೇಕಾಗಿದೆ ಬಿಡಿ. ಇನ್ನೂ ಸಂಜೆಯವರೆಗೆ ಕಾರ್ಯಕ್ರಮ ಇದೆ. ಆಮೇಲೆ ಅವಕಾಶ ಕೊಡುತ್ತೇನೆ, ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಸೂ-ಮೋಟೋ ಮಾಡಬಹುದೆಂದು ಅಸೆಂಬ್ಲಿಯಲ್ಲೇ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಹೋಗಿ ನೋಡಿ. ಅದಕ್ಕೆ ಏನಾದರೂ ಗ್ರೌಂಡ್ ಬೇಕು. ಬಾಗೂರು ನವಿಲೆ ಟೆನಲ್ ಬಗ್ಗೆ ವಿಚಾರಣೆ ಆಗಬೇಕೆಂದರು. ಅದಕ್ಕೆ ಒಪ್ಪಿದ್ದೇನೆ. ಅಸೆಂಬ್ಲಿಯಲ್ಲಿ ಇನ್ನೊಂದು ಕಮಿಟಿ ಇದೆ. ಅದು ನಾವು ಇಲ್ಲಿ ಓಟ್ ಮಾಡಿಕೊಡತಕ್ಕ ಹಣ ಸರಿಯಾಗಿ ಖರ್ಚಾಗಿದೆಯೋ ಇಲ್ಲವೇ ಎಂಬುದನ್ನು ನೋಡುತ್ತದೆ. ಆಡಿಟ್ ರಿಪೋರ್ಟ್ ಬಂದ ಮೇಲೆ ಪಿಎಸಿ. ನೋಡುತ್ತದೆ. ನಾನು ಕೂಡ ಪಿಎಸಿ. ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅದನ್ನು ನೋಡುವುದಕ್ಕೆ ನಾನು ಬೇಡ ಎಂದು ಹೇಳಿಲ್ಲ. ಆರ್ಬಿಟ್ರೇಷನ್ ಬಗ್ಗೆ ನೋಡುತ್ತೇವೆಂದರು. ನೋಡಲಿ. ಕಣ್ಣಲ್ಲಿ ಕಣ್ಣಿಟ್ಟು ನೋಡಲಿ. ನನ್ನ ಸ್ವಭಾವ ಹೇಗೆಂದರೆ ಜಿಂಕೆ ಮಲಗಿದ್ದಾಗ ಹೊಡೆಯಬಾರದು, ಎಳಿಸಿ ಹೊಡೆಯಬೇಕೆಂಬುದು. ಆ ಪುರುಷತ್ವ ಇದ್ದರೆ ಮಾಡಬೇಕು. ಹಿಂದುಗಡೆ ಯಾವುದನ್ನೂ ಮಾಡುವುದಿಲ್ಲ.

ಮಾನ್ಯ ದೇವೇಗೌಡರು ಎನಿಮೀಸ್‌ಗಳನ್ನು ಜಾಸ್ತಿ ಮಾಡಿಕೊಳ್ಳುತ್ತಾರೆ ಎಂದು ಹೇಳುತ್ತಾರೆ. ರಾಜಕಾರಣದಲ್ಲಿ ಪುರುಷತ್ವ ಇಲ್ಲದೇ ಇದ್ದಲ್ಲಿ ನಾವು ರಾಜಕಾರಣ ಮಾಡಬಾರದು ಎಂದು ಅನಿಸುತ್ತದೆ.

ಇನ್ನು ಜೂನಿಯರ್ ಇಂಜಿನಿಯರ್‌ಗಳ ಬಗ್ಗೆ ವೆಂಕಟರಾಮಯ್ಯನವರು ಕೇಳಿದರು, ಅವರಿಗೆ ಎಂಟ್ರಿ ಗ್ರೇಡಿನಲ್ಲಿ ಹಣ ಹೆಚ್ಚು ಮಾಡಲಿಲ್ಲವೆಂದು ಅವರಿಗೆ ಅಸಮಾಧಾನ ಇದೆ. ಆದರೆ ನಾವು ಅವರ ಬಗ್ಗೆ ಪ್ರೊಮೋಷನ್ ಅಪರ್‌ಚ್ಯುನಿಟಿ ಹೆಚ್ಚು ಮಾಡಬೇಕು ಎಂದು ಪ್ರಾಮಾಣಿಕ ನಿರ್ಣಯವನ್ನು ಮಾಡಿದ್ದೇವೆ. ೨೫೦ ಹುದ್ದೆಗಳನ್ನು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ದರ್ಜೆಗೆ ಸ್ಥಾನವನ್ನು ಮೀಸಲಿಟ್ಟಿದ್ದೇವೆ. ೫೫೦ ಪೋಸ್ಟ್‌ಗಳನ್ನು ಅಸಿಸ್ಟೆಂಟ್ ಇಂಜಿನಿಯರಾಗಿ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಆದರೆ ಎಂಟ್ರಿಗ್ರೇಡ್‌ನಲ್ಲಿ ಸ್ವಲ್ಪ ಅಸಮಾಧಾನ ಇದೆ. ಇದೊಂದೇ ವರ್ಗ ಅಲ್ಲ. ಹಲವಾರು ವರ್ಗಗಳಲ್ಲಿ ಅತೃಪ್ತಿ, ಅಸಮಾಧಾನ ಉಂಟಾಗಿದೆ. ಪೇ ಕಮಿಷನನ್ನು ನೇಮಕ ಮಾಡಿದ್ದೇವೆ. ಇದೂ ಸಹ ಅಲ್ಲಿ ಹೋಗಲಿ ಎಂದು ಹೇಳುತ್ತೇನೆ. ಅವರು ಮಾಡತಕ್ಕಂಥ ಕೆಲಸ ಏನು ಇದೆ. ಅವರು ಹೋಗಿ ಕಾಡಿನಲ್ಲಿ ಸರ್ವೆ ಮಾಡಬೇಕು ಎಂದು ಹೇಳಿ, ಕಾಳಿ ನದಿಯಲ್ಲಿ ಸರ್ವೆ ಮಾಡಬೇಕು ಎಂದು ಹೇಳಿ ಮಾಡುತ್ತಾರೆ. ಪಿಎಸಿ. ಮೆಂಬರ್‌ಗಳು ಟನಲ್‌ನ ಒಳಗೆ ಹೋಗಿ ನೋಡದೆ ಹೊರಗಡೆ ಬರುತ್ತಾರೆ. ಅಂಥ ಕಡೆ ಕೆಲಸ ಮಾಡಬೇಕು. ಇವರ ಕೆಲಸಕ್ಕೂ, ಬೇರೆಯವರ ಕೆಲಸಕ್ಕೂ ತಾರತಮ್ಯ ಮಾಡಬಾರದು. ಸರ್ಕಾರಕ್ಕೆ ಅವರ ಬಗ್ಗೆ ಸಹಾನುಭೂತಿ ಇದೆ. ಅವರು ಮೂರನೆಯ ತಾರೀಖು ಮುಷ್ಕರ ಮಾಡುತ್ತೇವೆ ಎಂದು ಹೇಳಿರುತ್ತಾರೆ. ಆದ್ದರಿಂದ ನಾನು ಅವರನ್ನು ನನ್ನ ಹತ್ತಿರ ಕರೆಯಿಸಿ ಮಾತನಾಡಿದ್ದೇನೆ. ಸರ್ಕಾರಕ್ಕೆ ಅವರ ಬಗ್ಗೆ ಕಳಕಳಿ ಇದೆ. ನಿಮ್ಮಗಳ ಬಗ್ಗೆ ಸಹಾನುಭೂತಿ ಇದೆ. ಇವತ್ತು ರಾಜ್ಯದಲ್ಲಿ ಬರಗಾಲ ಇದೆ. ದೇಶದಲ್ಲಿ ಜನ ಹಾಹಾಕಾರಕ್ಕೆ ತುತ್ತಾಗಿದ್ದಾರೆ. ನೀರಾವರಿ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಕೆಲಸ ಮಾಡಬೇಕಾದರೆ ಅವರ ಸಹಕಾರ ಬೇಕು. ಜೂನಿಯರ್ ಇಂಜಿನೀಯರ್‌ಗಳು ಸರ್ಕಾರದಲ್ಲಿರತಕ್ಕಂಥ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಬರಗಾಲದಲ್ಲಿ ಕೆಲಸ ನಿಲ್ಲಿಸಿ ಮುಷ್ಕರ ಮಾಡಿದರೆ ಬಡವರಿಗೆ ಕಷ್ಟವಾಗುತ್ತದೆ. ನೀರಾವರಿ ಯೋಜನೆಗಳು ಕುಂಟಿತವಾಗುತ್ತವೆ ಪೇ ಕಮಿಷನ್ ಮುಂದೆ ಇವರೂ ಹೋಗಲಿ ಎನ್ನುವ ಅಭಿಪ್ರಾಯವನ್ನು ಕೊಡುತ್ತೇನೆ. ಪ್ರೊಮೋಷನಲ್ ಅಪರ್‌ಚ್ಯುನಿಟಿ ಕೊಡಬೇಕೆಂದು, ಇದು ತ್ವರಿತವಾಗಿ ಸರ್ಕಾರದ ಪರಿಶೀಲನೆಯಲ್ಲಿದೆ. ಈ ರೀತಿ ಕೆಲಸ ಬಿಟ್ಟು ಹೋಗಿ ಮುಷ್ಕರ ಮಾಡತಕ್ಕಂಥ ವಿಧಾನವನ್ನು ಅವರು ಈ ಸರ್ಕಾರದಲ್ಲಿ ವಿಶ್ವಾಸ ಇಟ್ಟು ಮುಂದೂಡುತ್ತಾರೆ ಎಂದು ನಾನು ಆಶಿಸುತ್ತೇನೆ.

ಇನ್ನು ಗ್ಯಾಂಗ್‌ಮೆನ್ ಬಗ್ಗೆ ಹೇಳಿದ್ದಾರೆ ಕೈಲಾದಮಟ್ಟಿಗೆ ಅವರ ಸಮಸ್ಯೆಯನ್ನು ಪರಿಹರಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಸುಪ್ರೀಂಕೋರ್ಟಿನಲ್ಲಿ ಕೆಲವು ವಿಷಯಗಳನ್ನು ಎತ್ತಿದ್ದಾರೆ. ಸುಪ್ರೀಂ ಕೋರ್ಟ್ ಯಾವ ರೀತಿಯ ನಿರ್ಣಯವನ್ನು ತೆಗೆದುಕೊಳ್ಳುತ್ತದೆ ಎಂದು ಕಾದು ನೋಡಬೇಕಾಗುತ್ತದೆ. ಏಕೆಂದರೆ ಅವರಿಂದ ಸರ್ಕಾರದ ಮೇಲೆ ಬರತಕ್ಕಂಥ ಹಣದ ಹೊರೆಯನ್ನು ಕೂಡ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮೆಯಿಂಟೆನೆನ್ಸ್ ಗ್ರಾಂಟ್ ಅವರಿಗೆ ಕೊಡತಕ್ಕಂಥದ್ದು ಮತ್ತು ಸಂಬಳವನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಇವತ್ತು ನಮ್ಮ ಮೇಲೆ ಬರತಕ್ಕಂಥ ಆರ್ಥಿಕ ಹೊರೆಯನ್ನು ಅವರ ಬಗ್ಗೆ ಸರ್ಕಾರ ಆಲೋಚನೆಯನ್ನು ಮಾಡಬೇಕಾಗುತ್ತದೆ. ಸುಪ್ರೀಂಕೋರ್ಟಿಗೆ ನ್ಯಾಯವನ್ನು ಅವರು ಹೂಡಿದ್ದಾರೆ. ಅಲ್ಲಿ ಆಗತಕ್ಕಂಥ ತೀರ್ಮಾನ ಏನು? ಎನ್ನತಕ್ಕಂಥದ್ದನ್ನು ಕಾದು ನೋಡಬೇಕಾಗುತ್ತದೆ. ನಾವು ನಮ್ಮ ನಿಲುವನ್ನು ತಾಳಿದ್ದೇವೆ. ಇಷ್ಟರಮಟ್ಟಿಗೆ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಸನ್ಮಾನ್ಯ ಹಿರಿಯ ಸದಸ್ಯರಾದ ಶಿರಾದ ಮೂಡಲಗಿರಿಯಪ್ಪನವರು ಮೈನರ್ ಸಬ್ ಡಿವಿಜನ್ ಮಾಡಬೇಕು ಎಂದು ಕೇಳಿದ್ದಾರೆ. ಕೆಲವು ವಿಷಯದ ಬಗ್ಗೆ ಅಲ್ಲಲ್ಲಿ ತಾರತಮ್ಯ ಇದೆ ಎಂಬ ಒಡಕು ಶಬ್ದ ಬಂದಿದೆ. ಈ ಸಭೆಯ ಮುಂದಿಟ್ಟಿರತಕ್ಕಂಥ ಬಜೆಟ್ ಪುಸ್ತಕ ಏನು ಇದೆ. ಅದರಲ್ಲಿ ಯಾವ ತಾರತಮ್ಯವನ್ನು ತೋರಿಸಬಾರದು ಎಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಕೆಲವು ಕಡೆ ಶ್ರೀಮಾನ್ ಕೆ.ಹೆಚ್. ಪಾಟೀಲರು ಹೇಳಿದ ಹಾಗೆ ಒಂದು ವೇಳೆ ೨-೩ ಕ್ಷೇತ್ರ ಬಂದಾಗ ಆ ರೀತಿ ಆಗಬಹುದು. ಈ ರೀತಿಯ ೪-೫ ಘಟನೆಗಳು ನನ್ನ ಗಮನಕ್ಕೆ ಬಂದಿದೆ. ಎಲ್ಲೆಲ್ಲಿ ಆ ರೀತಿ ಅನ್ಯಾಯವಾಗಿದೆ ಎನ್ನತಕ್ಕಂಥದ್ದನ್ನು ನನಗೆ ತಾವು ತಿಳಿಸಿದರೆ ಅದನ್ನು ಸರಿಪಡಿಸಲಿಕ್ಕೆ ಪಕ್ಷಾತೀತವಾದ ಪ್ರಯತ್ನವನ್ನು ಮಾಡುತ್ತೇನೆಂದು ಈ ಸದನದಲ್ಲಿ ವಚನವನ್ನು ಕೊಡುತ್ತೇನೆ. ಎಲ್ಲಾ ನಮ್ಮವರೇ. ಆ ಪ್ರಶ್ನೆ ನಮಗಿಲ್ಲ. ಮೈನರ್ ಇರಿಗೇಷನ್‌ಗೆ ಲಂಪ್‌ಸಮ್ ಹಣವನ್ನು ಇಟ್ಟುಕೊಂಡಿದ್ದೇವೆ. ಸಿ ಅಂಡ್ ಬಿ.ಗೂ ಹಣವನ್ನು ಇಟ್ಟುಕೊಂಡಿದ್ದೇವೆ. ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಮೊಯಿಲಿಯವರು ಎರಡು ಪ್ರಾಮುಖ್ಯವಾದ ವಿಷಯವನ್ನು ಎತ್ತಿದ್ದಾರೆ. ಪೂರ್ತಿ ಹಣವನ್ನು ಇಟ್ಟಿಲ್ಲ. ಕ್ಯಾಬಿನೆಟ್ ನಿರ್ಣಯದಂತೆ ೨೫ ಪರ್ಸೆಂಟ್ ಇಡಬೇಕು ಎಂದು ಹೇಳಿದ್ದಾರೆ.

ಈ ಸಾರಿ ತೆಗೆದುಕೊಳ್ಳತಕ್ಕಂಥದ್ದು ೧೫ ಪರ್ಸೆಂಟ್. ೭೦ ಕೋಟಿ ರೂಪಾಯಿಗಳನ್ನು ಹೊಸ ಕೆಲಸಕ್ಕಾಗಿ ತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ೩೮ ಕೋಟಿ ರೂಪಾಯಿಗಳನು ರಸ್ತೆ ಮತ್ತು ಸೇತುವೆಗಳಿಗಾಗಿ ೩೨ ಕೋಟಿ ರೂಪಾಯಿಗಳನ್ನು ನೀರಾವರಿ ಕೆಲಸಕ್ಕಾಗಿ. ಒಟ್ಟು ೭೦ ಕೋಟಿ ರೂಪಾಯಿಗಳ ಹಣದ ಮೊತ್ತದ ಕೆಲಸವನ್ನು ತೆಗೆದುಕೊಳ್ಳಬೇಕೆಂದು ೧೧ ಕೋಟಿ ರೂಪಾಯಿಗಳನ್ನು ನಾವು ಅನುದಾನವಾಗಿ ಕೊಟ್ಟಿದ್ದೇವೆ. ಇನ್ನು ಅಪೆಂಡಿಕ್ಸ್ ಇ.ನಲ್ಲಿ ಹಾಕತಕ್ಕಂಥ ಎಲ್ಲಾ ಕೆಲಸಗಳನ್ನು ಈ ವರ್ಷವೇ ಕೈಗೆ ಎತ್ತಿಕೊಳ್ಳುತ್ತೇವೆ, ಕೆಲಸ ನಡೆಯುತ್ತಿದೆ. ಅದರ ಬಗ್ಗೆ ಸಂಶಯ ಬೇಕಾಗಿಲ್ಲ. ಇದು ಸರ್ಕಾರದ ಧೃಡ ನಿಲುವು ಕೂಡ. ಇನ್ನೊಂದು ಎರಡು ಕ್ಷೇತ್ರಗಳಲ್ಲಿ ಉಪೇಕ್ಷೆ ಆಗಿದೆ ಎನ್ನುವ ಭಾವನೆ ಬೇಡ. ಅದನ್ನು ಸರಿಪಡಿಸಿಕೊಡುತ್ತೇವೆ ಎಂದು ಹೇಳುತ್ತೇನೆ.

ಕೊನೆಯದಾಗಿ, ಮೊಯಿಲಿಯವರು ಇರಿಗೇಷನ್ ಬಗ್ಗೆ ಒಂದು ಕಾರ್ಪೊರೇಷನ್ ಮಾಡಿ ಎಂದು ಒಂದು ಮಾತನ್ನು ಹೇಳಿದ್ದಾರೆ. ಈ ಸಾರಿ ನಾವು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಬಹುದು ಎಂದು ಮಾಡಿದ್ದೆವು. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಬೇಕು ಎಂದು ಜನಗಳ ಮುಂದೆ ೨೫ ಪರ್ಸೆಂಟ್ ಹಣವನ್ನು ಕೊಡಲಿಕ್ಕೆ ಮುಂದೆ ಬರುತ್ತಿದ್ದಾರೆ ದಯಮಾಡಿ ಈ ಯೋಜನೆಗಳನ್ನು ಕಾರ್ಯಗತ ಮಾಡಿ ಎಂದು ಹೇಳುತ್ತಿದ್ದಾರೆ. ಹಣವನ್ನು ಕೊಡಲಿಕ್ಕೆ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ಸ್‌ಗಳು ಮತ್ತು ನಬಾರ್ಡ್ ಮುಂದೆ ಬಂದಿವೆ. ಈ ಎಲ್ಲಾ ಕಾರಣಗಳಿಂದ ಬೇರೆಬೇರೆ ಹಣಕಾಸು ಸಂಸ್ಥೆಗಳಿಂದ ಹಣವನ್ನು ಕ್ರೋಡೀಕರಿಸುವುದರ ಮುಖೇನ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ನಾವು ಹೆಚ್ಚು ಲಿಫ್ಟ್ ಇರಿಗೇಷನ್ ಮಾಡಬಹುದು ಎಂದು ತೀರ್ಮಾನ ಮಾಡಿದ್ದೇವೆ. ಅದಕ್ಕೋಸ್ಕರವಾಗಿ ಸೀಡ್ ಮನಿಯನ್ನು ಒಂದು ಕೋಟಿ ರೂಪಾಯಿಯನ್ನು ಬಜೆಟ್‌ನಲ್ಲಿ ಇಟ್ಟುಕೊಂಡಿದ್ದೇವೆ. ಅವರ ಇಂಗಿತವನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು. ಸರ್ಕಾರ ಈ ದಿಕ್ಕಿನಲ್ಲಿ ಇವೊತ್ತು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಹೇಳುತ್ತೇನೆ. ಮೊಯಿಲಿಯವರ ಅವರ ಅನುಭವ ಆಧಾರದ ಮೇಲೆ ಇರಿಗೇಷನ್ ಕಾರ್ಪೊರೇಷನ್ ಮಾಡುವುದು ಒಳ್ಳೆಯದು ಎಂದು ಹೇಳಿದರೆ ಸರ್ಕಾರ ಅದರ ಬಗ್ಗೆ ಸಮಾಲೋಚನೆ ಮಾಡುತ್ತದೆ. ದಾಮೋದರ್‌ನಲ್ಲಿ ಈ ರೀತಿಯ ಕಾರ್ಪೊರೇಷನ್‌ನನ್ನು ಮಾಡಿದ್ದಾರೆ. ಬೇರೆ ಬೇರೆ ಕಡೆಯಲ್ಲೂ ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ. ಆದರೆ ಒಂದೇ ಒಂದು ಮನಸ್ಸಿನಲ್ಲಿರುವ ಸಂಶಯ ಏನೆಂದರೆ ಇವತ್ತಿನ ದಿವಸ ಮುಖ್ಯ ಮಂತ್ರಿಗಳು ಹಿಂದೆ ಅರ್ಥ ಸಚಿವರು ಆಗಿದ್ದಂಥ ಕಾಲದಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ ಎಂದು ಮಾಡಿದರು. ಇದಕ್ಕಾಗಿ ಬೇರೆ ಬೇರೆ ಹಣಕಾಸು ಸಂಸ್ಥೆಗಳಿಂದ ಎಲ್‌ಐಸಿ. ಯಿಂದ, ಕಮರ್ಷಿಯಲ್ ಬ್ಯಾಂಕ್‌ಗಳಿಂದ ಹಣವನ್ನು ಹೊರಕಿಸಿಕೊಡಬಹುದು ಎಂದು ಮಾಡಿದರು. ಆದರೆ ನಿರೀಕ್ಷಿತ ಮಟ್ಟದಲ್ಲಿ ಇದಕ್ಕೆ ಬಂಡವಾಳ ದೊರೆತಿಲ್ಲ. ನಾವೇ ಬಂಡವಾಳವನ್ನು ಕೊಡಬೇಕಾಗಿ ಬಂತು. ಈ ಕಹಿ ಅನುಭವದಿಂದ ೧೦-೧೨ ವರ್ಷಗಳಲ್ಲಿ ಈ ಪವರ್ ಕಾರ್ಪೊರೇಷನ್ ಏನು ನಡೆಯಿತು ಆ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಈ ಇರಿಗೇಷನ್ ಕಾರ್ಪೊರೇಷನ್ ಮಾಡಬೇಕೆನ್ನುವುದು ಸರಿಯೋ ತಪ್ಪೋ ಎಂದು ಮತ್ತೊಮ್ಮೆ ಸಮಾಲೋಚನೆ ಮಾಡುತ್ತೇವೆಂದು ಹೇಳುತ್ತೇನೆ.

Sri K. H. Patil—It is only to make use of the Institutional Finances.

Sri H.D. DEVE GOWDA.—I agree. I don't want to shut. ಮತ್ತೊಮ್ಮೆ ನಾನು ತೆರೆದ ಮನಸ್ಸಿನಿಂದ ಹೇಳುತ್ತೇನೆ. ಇದರ ಬಗ್ಗೆ ನಾನು ಮತ್ತೊಮ್ಮೆ ತೆರೆದ ಮನಸ್ಸಿನಿಂದ ಸಮಾಲೋಚನೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಟ್ಟಿನಲ್ಲಿ ಈ ಇಲಾಖೆಯು ತುಂಬಾ ಅಭಿವೃದ್ಧಿಪೂರ್ಣ ಹೊಣೆಗಾರಿಕೆಯನ್ನು ಹೊಂದಿದೆ ಎಂದು ಹೇಳದೇ ಇದ್ದರೂ ಕೂಡ ಬಹು ಭಾಗ ರಾಜ್ಯದ ಅಭಿವೃದ್ಧಿಯ ಹೊಣೆಗಾರಿಕೆಯಲ್ಲಿ ೧೦೦ರಲ್ಲಿ ೮೦ ಭಾಗ ಎಂದು ಕರೆದರೂ ಚಿಂತೆ ಇಲ್ಲ. ಇಷ್ಟು ಹೊಣೆಗಾರಿಕೆ ಈ ಇಲಾಖೆಯದು ಇದೆ, ೪೦೦ ಕೋಟಿ ರೂಪಾಯಿಯವರೆಗೂ ಹೆಚ್ಚು ಹಣವನ್ನು ಇಲ್ಲಿ ಖರ್ಚು ಮಾಡುತ್ತೇವೆ. ಪ್ರತಿಯೊಂದು ಕಾಸೂ ಕೂಡ ನಾಡಿನ ಜನತೆ ಬೆವರು ಸುರಿಸಿ ಬರತಕ್ಕಂಥ ಹಣ. ಆದ್ದರಿಂದ ಹಣ ಈ ಉಪಯುಕ್ತವಾಗಿ ಖರ್ಚಾಗಬೇಕು ಇದರಲ್ಲಿ ಅಪವ್ಯಯವನ್ನು ತಡೆಗಟ್ಟಬೇಕೆಂದು ಒಪ್ಪಿಕೊಂಡು ತಮ್ಮ ಸಹಕಾರವನ್ನು ಕೋರುತ್ತೇನೆ. ಒಂದು ವೇಳೆ ನಮ್ಮಲ್ಲಿ ದೋಷ ಇದ್ದರೆ ತಲೆಬಾಗುತ್ತೇನೆ. ಷರತ್ತಿನ ಮೇಲೆ ನಿಲ್ಲುವುದಕ್ಕೆ ಸಿದ್ಧನಿಲ್ಲ.

ಸದನದ ಒಳಗಡೆ ಇರಬಹುದು, ಹೊರಗಡೆ ಇರಬಹುದು. ಸದನ ಮುಗಿದುಹೋದರೆ ಆರು ತಿಂಗಳು ನಾವುಗಳು ನಿಮ್ಮ ಕೈಯಲ್ಲಿ ಸಿಗುವುದಿಲ್ಲ ಎನ್ನುವ ಪ್ರಶ್ನೆ ನಿಮಗೆ ಬೇಡ. ತಾವು ಯಾವ ಸಂದರ್ಭದಲ್ಲಿ ಲೋಪವನ್ನು ಎತ್ತಿ ತೋರಿಸಿದರೂ ತಲೆಬಾಗಲಿಕ್ಕೆ, ಸರಿಪಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗುತ್ತದೆ.

ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಇಂಜಿನಿಯರಿಂಗ್ ವಿಷಯದಲ್ಲಿ ನಾವು ಬಹುಮಟ್ಟಿಗೆ ಮುಂದೆ ಇದ್ದೇವೆ ಎಂಬುದನ್ನು ಪ್ರಾಮಾಣಿಕವಾಗಿ ಎಲ್ಲರೂ ಒಪ್ಪಿಕೊಳ್ಳಲೇಬೇಕಾಗುತ್ತದೆ. I can give number of officers, honest officers......

ಶ್ರೀಯುತ್ ಕೆ. ಸಿ. ರೆಡ್ಡಿಯವರು, ಬಾಳೇಕುಂದರಗಿ ಮಾತ್ರವಲ್ಲ. ನೀರೂ ಸಹ ಕುಡಿಯುವುದಕ್ಕೆ ಹಿಂಜರಿಯುವ ಅಧಿಕಾರಿಗಳು ಬಹಳ ಜನ ಇದ್ದಾರೆ. ನಾನು ಬೇಕಾದರೆ ಹಲವಾರು ಹೆಸರುಗಳನ್ನು ಹೇಳಬಲ್ಲೆ. ನಾವು ಹೇಗಿರುತ್ತೇವೋ ಹಾಗೆ ಅವರಿರುತ್ತಾರೆ. ನಾವು ದಾರಿ ತಪ್ಪಿ ಟಿ. ಬಿ. ಗೆ ಹೋದಾಗ ಎರಡು ಸಾವಿರ ರೂಪಾಯಿನ ಶಿವಾಸ್ ರೀಗಲ್ ತಂದುಕೊಡು ಎಂದರೆ ತಂದುಕೊಡು ಕೊಡುತ್ತಾರೆ. ಎರಡು ಮೂಟೆ ಸಿಮೆಂಟ್ ಕದ್ದು ಮಾರಿ ತಂದುಕೊಡುತ್ತಾರೆ. ಅಥವಾ ನನಗೆ ಡಾನ್ಸ್ ಮಾಡುವವರು ಬೇಕು ಎಂದರೆ ತಂದುಕೊಡುತ್ತಾರೆ. ಅವರ ಮೇಲೆ ನಾವು ಏತಕ್ಕೆ ಹೇಳುತ್ತೀರಿ ? ಸಮಾಜ ಸರಿಯಾಗಿದ್ದರೆ, ಸಮಾಜದ ನಡವಳಿಕೆ ಸರಿಯಾಗಿದ್ದರೆ ಎಲ್ಲವೂ ಹಂತಹಂತವಾಗಿ ಅದು ಪ್ರಸರವಾಗುತ್ತದೆ. It goes to the root. ಈ ದಿಸೆಯಲ್ಲಿ ನಾನು ಸರಿಯಾಗಿರಲು ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಕೆ. ಎಚ್. ಪಾಟೀಲರು ಮಾತನಾಡುತ್ತಾ, ನೀವು ಕಾನೂನಿಗೆ ಅಂಜದೇ ಹೋಗಬಹುದು, ಅಥವಾ ಮನುಷ್ಯನಿಗೆ ಅಂಜದೇ ಹೋಗಬಹುದು, ಆದರೆ ದೇವರಿಗೆ ಅಂಜಬೇಕು ಎಂದು ಹೇಳಿದರು. ನಾನು ಅದನ್ನು ಶಿರಸಾವಹಿಸಿ ಒಪ್ಪಿಕೊಳ್ಳುತ್ತೇನೆ. ಆ ಧೈರ್ಯ ನಮ್ಮಲ್ಲಿರಬೇಕು. ಒಬ್ಬ ಕಂಟ್ರಾಕ್ಟರ್ ಅವಾರ್ಡ್ ಮಾಡುವಾಗ ಅವನು ನಮ್ಮ ಮನೆಗೆ ಬರುವುದಕ್ಕೆ ಶಕ್ತಿ ಇದೆಯೆ ? ಬೇರೆಯವರನ್ನು ಕರೆಯಿಸಿ ಬೇಕಾದರೆ ವಿಚಾರ ಮಾಡಲಿ. ನಿಮಗೆ ಹೇಳುತ್ತೇನೆ, ಆ ಕಡತ ೫ ನಿಮಿಷ ನನ್ನ ಛೇಂಬರ್‌ನಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್ ರೆಕಮೆಂಡ್ ಮಾಡಿದ ಫೈಲ್ ಮೂರು ತಿಂಗಳು ವಿಧಾನ ಸೌಧದಲ್ಲಿ ಬಿದ್ದಿತ್ತು. ಏತಕ್ಕೆಂದರೆ ಅವರು ಬರಬೇಕು. ನೋಡಬೇಕು. ಫೈನಾನ್ಸ್ ಸೆಕ್ರೆಟರಿಯಿಂದ ಬಂದಂಥ ಫೈಲ್ ನನ್ನ ಹತ್ತಿರ ೫ ನಿಮಿಷ ಕೂಡ ಇರುವುದಿಲ್ಲ, This is a major department where I have got responsiblity, that's why I am telling.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಾ ಇರುವುದು ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲೇ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಹೊಣೆಗಾರಿಕೆಯನ್ನು ನಾನು ಹೇಳುತ್ತಿದ್ದೇನೆ. ಪ್ರೊಮೋಷನ್‌ನಲ್ಲಿ ದುಡ್ಡು ಹೊಡೆಯುವುದಿರಬಹುದು, ಕಾಂಟ್ರಾಕ್ಟ್ ಅವಾಯಿಡ್ ಮಾಡಿ ದುಡ್ಡು ಹೊಡೆಯುವುದಿರಬಹುದು, ಎಸ್ ಕಲೇಷನ್ ಕೊಡುವುದರಲ್ಲಿ ಇರಬಹುದು ಯಾವುದೇ ವಿಷಯದಲ್ಲಿ I am subjected to scrutiny of this House. It is a highest body-I bow my head to this. ಅವರು ರಿಪೋರ್ಟ್ ಕೊಟ್ಟರು. ಮರುಕ್ಷಣದಲ್ಲೇ ನಾನು ತೀರ್ಮಾನವನ್ನು ಹೇಳಿದೆ. ಮುಖ್ಯಮಂತ್ರಿಯವರನ್ನು ಕೇಳಲಿಲ್ಲ. ಸಚಿವಸಂಪುಟವನ್ನೂ ಕೇಳಲಿಲ್ಲ. ೨೫ ವರ್ಷದಿಂದ ನಾನು ಅಲ್ಲಿ ಕುಳಿತು ಏನು ಪ್ರತಿಪಾದನೆ ಮಾಡಿಕೊಂಡು ಬಂದೆನೋ ಆ ತತ್ವಕ್ಕೆ ಮಣಿಯಬೇಕು ಎಂದು ನಿರ್ಣಯ ಮಾಡಿದೆ. ನಾನು ಆ ಬಗ್ಗೆ ಚಕಾರ ಎತ್ತುವುದಿಲ್ಲ. ರಿಪೋರ್ಟ್ ಹೊರಗೆ ಬಂದ ಮೇಲೆ ನಾನು ಮಾತನಾಡುತ್ತೇನೆ. ಅಲ್ಲಿಯವರೆಗೆ ಮಾತನಾಡುವುದಿಲ್ಲ. ಅಧಿಕಾರಿಗಳು ಎಸ್ಟಿಮೇಟ್ ಕಾಸ್ಟನ್ನು ಬೂಸ್ಟ್ ಮಾಡುತ್ತಾರೆ ಎಂದು ಮಾನ್ಯ ಎಂ. ಎಸ್. ಕೃಷ್ಣನ್ ಅವರು ಹೇಳಿದರು ಗೈಡ್ ಲೈನ್ಸ್ ಬಗ್ಗೆ ಅವರ ಸ್ನೇಹಿತರಾದ ಭೂಪತಿಯವರು ೭೦೦ ಎಕರೆಗೆ ನೀರು ಕೊಡದೇ ಹೋದರೆ ತುಂಗಭದ್ರಾ ಹೈಲೆವೆಲ್ ಕೆನಾಲ್ ಹಿಂಭಾಗದಲ್ಲಿ ಸತ್ಯಾಗ್ರಹ ಮಾಡುತ್ತೇನೆ ಎಂದು ಹೇಳಿದರು. ಮಾನ್ಯ ಕೃಷ್ಣನ್ ಅವರು ಪಿಸುಮಾತಿನಲ್ಲಿ ಕೊಡಿ ಎಂದು ಹೇಳಿದರು. ಹೈ ಲೆವೆಲ್ ಕನಾಲ್ ಏನು ಡಿಸೈನ್ ಮಾಡಿದ್ದಾರೆ ಅವರು ಎಷ್ಟು ಎಕರೆಗೆ ಮಾಡಿದ್ದಾರೆ ಅದನ್ನು ೭೦೦ ಎಕರೆಗೆ ವ್ಯಾಪ್ತಿಗೆ ತರಬೇಕಾದರೆ ಕಾಸ್ಟ್ ಎಸ್ಟಿಮೇಟ್ ಜಾಸ್ತಿಯಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—೮ ಲಕ್ಷ ಆಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಹೇಳಿದು ೮ ಲಕ್ಷ. ಮಾನ್ಯ ಬಸವನಗೌಡರು ಹೇಳಿದ್ದು ೧೨ ಲಕ್ಷ. ಮಾನ್ಯ ಕಡಪಟ್ಟಿಯವರು ಹೇಳಿದ್ದುದು ೩೬ ಲಕ್ಷ.

ಶ್ರೀ ಎಂ. ಎಸ್. ಕೃಷ್ಣನ್.—ಯೋಚನೆ ಮಾಡಿ, ಮಾಡಿ.

ಶ್ರೀ ಎಚ್. ಡಿ. ದೇವೇಗೌಡ.—ನೀವೂ ಇಂಜಿನಿಯರ್, ನಾನು ಇಂಜಿನಿಯರ್. Cost escalasion is not because of official fault......

ಒಂದು ಕಡೆ ಹೊಸ ಹೊಸ ಕಾಂಪೊನೆಂಟ್ಸ್ ಅನ್ನು ನಾವು ಸೇರಿಸುತ್ತಾ ಹೋಗುತ್ತೇವೆ, ಇನ್ನೊಂದು ಕಡೆ ಗೌರ್ನಮೆಂಟ್ ಆಫ್ ಇಂಡಿಯಾದವರು ತೆಗೆದುಕೊಳ್ಳುವ ನಿರ್ಣಯದಿಂದ, ಎಸ್‌ಕಲೇಷನ್ ಜಾಸ್ತಿಯಾಗುತ್ತದೆ. ಪೆಟ್ರೋಲ್ ಇರಬಹುದು ಡೀಸೆಲ್ ಇರಬಹುದು, ಸಿಮೆಂಟ್ ಬೆಲೆ ಇರಬಹುದು, ಇದನ್ನು ಹೆಚ್ಚಿಸುವುದರಿಂದ ಕಾಸ್ಟ್ ಎಸ್‌ಕಲೇಷನ್ ಆಗುತ್ತದೆ. ಇವೊತ್ತು ನಮ್ಮ ಸರ್ಕಾರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕ ಇಂಜಿನಿಯರುಗಳು ಯಾರಿದ್ದಾರೆ ಅವರಿಗೆ ನಮ್ಮ ಪುರಸ್ಕಾರ ಇದ್ದೇ ಇರುತ್ತದೆ. ಒಂದು ಮಾತನ್ನು ನಾನು ಹೇಳಲೇಬೇಕಾಗುತ್ತದೆ. ಅವರು ಕಾನೂನಿನ ಚೌಕಟ್ಟಿನಲ್ಲಿ ಸಡಿಲ ಮಾಡಿ ಕೆಲಸ ಮಾಡಿದರೂ ಚಿಂತೆಯಿಲ್ಲ, ನಾನು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸರೂ ಒಂದು ಮಾತನ್ನು ಹೇಳಿದರು. ಹೇಮಾವತಿ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ ಪೀಸ್‌ವರ್ಕ್ ಸಿಸ್ಟಂನಲ್ಲಿ ಒಬ್ಬ ಅಧಿಕಾರಿ ನಿರ್ಣಯ ಮಾಡಿದ್ದಾನೆ ಎಂದು ಹೇಳಿದರು. ಸ್ವಾಮಿ, ಆ ಕೆಲಸವನ್ನು ಲ್ಯಾಂಡ್ ಆರ್ಮಿಗೆ ಕೊಟ್ಟಿದ್ದರು., ಅವರು ಮಾಡಲಿಲ್ಲ. ರಿಸೈಂಡ್ ಮಾಡಿ ಎಸ್ಟಿಮೇಟ್ ಕಾಸ್ಟ್‌ನಲ್ಲಿ ಕೊಟ್ಟರು. ಈ ಬಗ್ಗೆ ಅಧಿಕಾರಿಗಳು ಪಿ. ಎ. ಸಿ. ಮುಂದೆ ಸರಿಯಾಗಿ ಎವಿಡೆನ್ಸ್ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಆಕ್ಷನ್ ಟೇಕನ್ ರಿಪೋರ್ಟ್ ಕಳುಹಿಸಬೇಕಾಗುತ್ತದೆ, ಕಳುಹಿಸುತ್ತೇವೆ. ಯಾವ ಕೆಲಸ ಲ್ಯಾಂಡ್ ಆರ್ಮಿಯವರು ಮಾಡುವುದು ನಿಂತು ಹೋಯಿತೋ ಅದನ್ನು ವಿತ್‌ಡ್ರಾ ಮಾಡಿ ಪೀಸ್ ವರ್ಕ್‌ನಲ್ಲಿ ಕೊಟ್ಟರು. ಎಸ್ಟಿಮೇಟ್ ಕಾಸ್ಟ್‌ಗೆ ಅದನ್ನು ಕೊಟ್ಟಿದ್ದಾರೆ. ಕೊಟ್ಟು ಕೆಲಸ ಮಾಡಿದ್ದಾರೆ. ಅದರಿಂದ ಮುಂದೆ ಕೆನಾಲ್ ಸಿಸ್ಟಂನಲ್ಲಿ ಅಚ್ಚುಕಟ್ಟು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಯಿತು. ನಾನು ಈ ಸ್ಥಾನದಲ್ಲಿ ಕುಳಿತಿರುವವರೆಗೆ ರೈತರ ಹಿತದೃಷ್ಟಿಯಿಂದ ಬರೀ ವಿಧಾನಸೌಧವನ್ನು ನೋಡದೆ ಸ್ಥಳದಲ್ಲೇ ಜವಾಬ್ದಾರಿಯಿಂದ ನಿರ್ಣಯ ಮಾಡುವುದಾದರೆ, ಆ ನಿರ್ಣಯದಲ್ಲಿ ಯಾವುದೇ ಬೇರೆ ಸ್ವಾರ್ಥದ ಹಿನ್ನೆಲೆ ಇಲ್ಲದೆ ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಅಂಥ ಅಧಿಕಾರಿಗೆ ಕಾನೂನಿನ ಚೌಕಟ್ಟಿನಲ್ಲಿ ಸಡಿಲ ಮಾಡಿ ರಕ್ಷಣೆ ಕೊಡತಕ್ಕ ಕೆಲಸ ಮಾಡುತ್ತೇನೆ. ಎಂದು ಭರವಸೆ ಕೊಡುತ್ತೇನೆ. ನನಗೆ ಬೇಕಾಗಿರತಕ್ಕದ್ದು ಅಂತಿಮ ಫಲಿತಾಂಶ. ಆ ದೃಷ್ಟಿಕೋನದಿಂದ ಅವರು ಕೆಲಸ ಮಾಡಲಿ. ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತು ನಮ್ಮ ಬಗ್ಗೆ ಹೇಳುವ ಮಾಲೀಕರು ಇದ್ದಾರೆ. ಅವರು ಹೇಳುವುದು ಮುಖ್ಯವಲ್ಲ. ನಮ್ಮ ಮಾಲೀಕರು ಹೊರಗಡೆ ಇದ್ದಾರೆ. ಕರ್ನಾಟಕದ ನಾಲ್ಕು ಕೋಟಿ ಜನ ಇದ್ದಾರೆ. ದಾರಿ ತಪ್ಪಿ ನಡೆದರೂ ಕೂಡ ಯೋಗ್ಯ ರೀತಿಯಲ್ಲಿ ಯೋಚನೆ ಮಾಡಿ ಕೆಲಸ ಮಾಡಿದರೆ ಅಂಥ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತೇನೆಂದು ಮತ್ತೊಮ್ಮೆ ಹೇಳುತ್ತೇನೆ. ಬ್ಲಾಕ್ ಶಿಪ್ಸ್ ಎಲ್ಲಾ ಕಡೆಯೂ ಇರುತ್ತಾರೆ. ಅವರ ಬಗ್ಗೆ ನಮಗೆ ತಿಳಿಸಿದರೆ ಕ್ರಮ ತೆಗೆದುಕೊಳ್ಳುತ್ತೇನೆ ಈ ಇಲಾಖೆಗೆ ಹಿಂದೆ ಇದ್ದಂಥ ಕೆಟ್ಟ ಹೆಸರು ಎಂಬುದಕ್ಕೆ ಬದಲಾಗಿ ಹೇಳುವುದಾದರೆ ಹಿಂದೆ ಇದ್ದ ವಾತಾವರಣದಿಂದ ಸ್ವಲ್ಪ ದೂರ ಹೊರಹೊಮ್ಮಿ ಮುಂದೆ ತೆಗೆದುಕೊಂಡು ಹೋಗುವುದಕ್ಕೆ, ವರ್ಚಸ್ಸನ್ನು ಹೆಚ್ಚು ಮಾಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಇಷ್ಟು ಹೇಳಿ ಮತ್ತೊಮ್ಮೆ ತಮಗೆಲ್ಲಾ ಅಭಿನಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಈ ಇಲಾಖೆಗೆ ಒಂದು ಹೊಸ ಇಮೇಜ್ ಕೊಡಬೇಕೆಂದು ಮಾನ್ಯ ಸಚಿವರಾದ ದೇವೇಗೌಡರು ಹೋಲಿಕೆ ಮಾಡಿ ಭಾಷಣ ಮಾಡಿದ್ದಾರೆ. ನಾನು ಈ ಸಾರಿ ಹೋಲಿಕೆ ಮಾಡಿ ಭಾಷಣ ಮಾಡುವುದನ್ನು ಬಿಟ್ಟೆ.

ಶ್ರೀ ದೇವೇಗೌಡ.—ಫಿಗರ್ಸ್ ಕೊಟ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮ ಭಾಷಣ ಚೆನ್ನಾಗಿತ್ತು. ಆದರೆ ಇಲಾಖೆಯಲ್ಲಿ...

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಚೆನ್ನಾಗಿ ಹೇಳಿಲ್ಲವೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಪರಿಣಾಮಕಾರಿಯಾಗಿ ಭಾಷಣ ಮಾಡುತ್ತೀರಿ. ತಮ್ಮ ಇಲಾಖೆ ಮಟ್ಟಿಗೆ ಭಾಷಣ ಮಾಡುವುದು it is a pleasure. I always deem it a pleasure...

ತಾವು ಪರಿಣಾಮಕಾರಿಯಾಗಿ ಉತ್ತರ ಕೊಡುತ್ತೀರಿ, ಪ್ರತಿಪಾದನೆ ಮಾಡುತ್ತೀರಿ. ಆ ಶಕ್ತಿ ಕೂಡ ನಿಮಗಿದೆ. ವಿರೋಧ ಪಕ್ಷದಲ್ಲಿದ್ದು ತಾವು ಕೆಲಸ ಮಾಡಿದ್ದೀರಿ, ಈಗ ಸರ್ಕಾರದಲ್ಲಿ ಕೂಡ ಕೆಲಸ ಮಾಡುತ್ತಿದ್ದೀರಿ. ಆದರೆ ಇಲಾಖೆ ಪ್ರಾಮಾಣಿಕ ಬಗ್ಗೆ ಅನಿಸಿಕೆಗಳು ನನಗೆ ಕನ್‌ವಿನ್ಸ್ ಆಗಲಿಲ್ಲ. ಯಾವುದೇ ಇಲಾಖೆಯನ್ನು ತೆಗೆದುಕೊಂಡರೂ ಎಲ್ಲಿ ಮೆಚ್ಚುಗೆ ತೋರಿಸಬೇಕೋ ಆ ಬಗ್ಗೆ ನನ್ನ ಭಾಷಣದಲ್ಲಿ ಹೇಳಿದ್ದೇನೆ ನಮ್ಮ ಕೆಲವು ಪ್ರಾಜೆಕ್ಟ್ ಬಗ್ಗೆ ಅದರಲ್ಲೂ ಕೂಡ ಅಂತರ ರಾಜ್ಯ ವಿವಾದ ಇರತಕ್ಕ ಪ್ರಾಜೆಕ್ಟ್‌ಗಳು, ಯು. ಕೆ. ಪಿ. ಇರಬಹುದು, ಬೇರೆ ಇರಬಹುದು ಅದರ ಬಗ್ಗೆ ಸನ್ಮಾನ್ಯ ಸಚಿವರು ವಿವರವಾಗಿ ಹೇಳಲಿಲ್ಲ. ಕಾವೇರಿ ಬೇಸಿನ್‌ಗೆ ಕೇಂದ್ರದ ಒಪ್ಪಿಗೆ ಕೊಡುವ ಪ್ರಶ್ನೆ ಇಲ್ಲ. ಆದರೆ ಆ ಯೋಜನೆಗಳ ಬಗ್ಗೆ ಬಹಳ ಸೂಕ್ಷ್ಮವಾಗಿ ಹೇಳಿದರು. ಕೆಲವು ಯೋಜನೆಗಳಿಗೆ ಪ್ಲಾನಿಂಗ್ ಕಮಿಷನ್‌ನವರು ಕ್ಲಿಯರೆನ್ಸ್ ಕೊಡಬೇಕು. ಪ್ಲಾನ್ ಅಲೋಕೇಷನ್ ಮಾಡಬೇಕು. ತಾಂತ್ರಿಕವಾಗಿ ಮಂಜೂರಾತಿಯನ್ನು ವಾಟರ್ ಅಂಡ್ ಪವರ್ ಕಮಿಷನ್‌ನವರು ಕೊಡುತ್ತಾರೆ. ಆಂಧ್ರ ಪ್ರದೇಶದ ತೆಲುಗು ಗಂಗಾ ಯೋಜನೆ ವಾಟರ್ ಪವರ್ ಕಮಿಷನ್ ಮುಂದೆ ಇದೆ, ಪ್ಲಾನಿಂಗ್ ಕಮಿಷನ್ ಮುಂದೆ ಇಲ್ಲ. ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಕೆಲವು ಪ್ರಾಜೆಕ್ಟ್‌ಗಳನ್ನು ತಾವು ತಯಾರು ಮಾಡಿ ಟೆಕ್ನಿಕಲ್ ಸ್ಯಾಂಕ್ಷನ್ ಮಾಡಿಕೊಂಡು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್‌ಗೆ ಕಳುಹಿಸಿ ಮಂಜೂರು ಮಾಡಿ ತೆಗೆದಿಡುವ ಸಂದರ್ಭ ಬಂದಾಗ ಮಾಡಬಹುದು ಎಂದು ಹೇಳಿದ್ದೀರಿ. ಇದು ಪ್ಲಾನಿಂಗ್ ಕಮಿಷನ್ ವಿಷಯ ಅಲ್ಲ. ತಾವು ವಿಚಾರಗಳನ್ನು ಮಿಕ್ಸ್ ಮಾಡಿದ್ದೀರಿ ಎಂದು ನನ್ನಗನ್ನಿಸುತ್ತದೆ.

ಇನ್ನು ನಾನು ತೆಲಗು–ಗಂಗಾ ಬಗ್ಗೆ ಹೇಳುವುದಕ್ಕೆ ಹೋದರೆ, ರಾಜಕೀಯ ಮಾಡುತ್ತಿದ್ದೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದು. ಆದರೆ ಅದು ಅಲ್ಲ. ನಾನು ಪ್ರಾಮಾಣಿಕವಾಗಿ ಕರ್ನಾಟಕ ರಾಜ್ಯದ ಜನರ ಆಸಕ್ತಿಯ ಬಗ್ಗೆ ಮಾತನಾಡುತ್ತಿದ್ದೇನೆ. ಈ ಜನರ ಆಸಕ್ತಿಯ ಬಗ್ಗೆ ನಮಗೆ ಬೇಕಾಗಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಅಭಿಪ್ರಾಯ ಪಟ್ಟರೆ ಅದಕ್ಕೆ ಜನರು ಉತ್ತರ ಕೊಡುತ್ತಾರೆ. ಅದನ್ನು ನಾನು ಇಲ್ಲಿ ಉತ್ತರ ಕೇಳುವ ಪ್ರಶ್ನೆ ಇಲ್ಲ. ಆ ರೀತಿ ಸರ್ಕಾರ ತೆಲಗು–ಗಂಗಾ ಬಗ್ಗೆ ಸಂಪೂರ್ಣವಾದ ಉದಾಸೀನ ಧೋರಣೆಯನ್ನು ಇಂದು ಇಟ್ಟುಕೊಂಡರೆ ಆ ಬಗ್ಗೆ ಜನರೇ ಉತ್ತರ ಕೊಡುತ್ತಾರೆ. ಅವರು ಹೇಳಿದ ಧಾಟಿಯಲ್ಲಿ ಆ ಬಗ್ಗೆ ಅಷ್ಟು ಲಿಬರ್ಟಿ ತಮಗೆ ಇಲ್ಲ ಎಂದು ನನಗೆ ಭಾವನೆಯಾಗುತ್ತದೆ. ಅವರ ಹೇಳಿಕೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಹೇಳುವುದಾದರೆ ಯು. ಕೆ. ಪಿ. ಬಗ್ಗೆ ೧೦೦ ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿ ಈಗ ಡೀಟೇಲ್ಡ್ ಎಸ್ಟಿಮೇಟ್ ಇದೆ. ಇದರ ಪ್ರಕಾರ ನಾವು ನೋಡುವುದಾದರೆ ಇದರಲ್ಲಿ ಎಷ್ಟು ಕೊಟ್ಟಿದ್ದಾರೋ ಅದಕ್ಕಿಂತ ಹೆಚ್ಚು ಖರ್ಚು ಮಾಡುವುದಕ್ಕೆ ಆಗುತ್ತದೆಯೋ ? ೧೯೮೬–೮೭ರಲ್ಲಿ ೬೦.೮೦ ಕೋಟಿ ರೂಪಾಯಿಗಳು ಇದೆ. ೧೯೮೫–೮೬ರಲ್ಲಿ ೪೪.೨೫ ಕೋಟಿ ರೂಪಾಯಿಗಳು ಇದೆ. ೧೯೮೪–೮೫ರಲ್ಲಿ ೪೧.೩೪ ಕೋಟಿ ರೂಪಾಯಿಗಳು ಇದೆ. ೭೭ ಕೋಟಿಯನ್ನು ಈಗ ನಾವು ಕೊಟ್ಟಿದ್ದೇವೆಂದು ಸಭೆಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇದನ್ನು ನಾನು ಇಷ್ಟಕ್ಕೆ ನಿಲ್ಲಿಸುತ್ತೇನೆ. ನೀವು ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆನ್ನುವುದಕ್ಕೆ ಡೀಟೇಲ್ಡ್ ಎಸ್ಟಿಮೇಟ್‌ನಲ್ಲಿ ಯಾವುದೇ ವಿವರಣೆ ಇಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಡೀಟೆಲ್ಡ್ ಎಸ್ಟಿಮೇಟಿನ ಪುಟ ೧೩೬ ರ ಪಾರ್ಟ್ ೩ರಲ್ಲಿ ಬೇರೆ ಡಾಕ್ಯುಮೆಂಟ್ಸ್ ಬಗ್ಗೆ ಹೇಳಿಲ್ಲ. ಇನ್ನು ಇರಿಗೇಷನ್ ಪೊಟೆನ್ಶಿಯಲ್ ಕ್ರಿಯೇಟ್ ಮಾಡುವ ಬಗ್ಗೆ ಹೇಳಿದ್ದಾರೆ, ಆದರಲ್ಲಿ ಅವರು ಹೇಳಿದ್ದುದು ಸರಿಯಲ್ಲ ಎಂದು ಅಷ್ಟೇ ಹೇಳುತ್ತೇನೆ. ಎರಡನೆಯದಾಗಿ, ಮೊನ್ನೆ ನಾನು ಒಂದು ವಿಷಯ ಪ್ರಸ್ತಾಪ ಮಾಡಿದ್ದೆ. ಅಡೆಂಡಮ್ ಏನು ಕೊಟ್ಟಿದ್ದೀರೋ ಅದನ್ನು ನಾನು ನೋಡಿದೆ. ಫ್ರೆಷ್ ವರ್ಕ್ಸ್ ಬಗ್ಗೆ ಅನುಬಂಧ 'ಇ' ನಲ್ಲಿ ತಾರಾತಮ್ಯ ಇದೆ. ಆ ಸಬ್–ಡಿವಿಜನ್ ಏನಿದೆ, ಸರ್ಕಲ್ ಏನಿದೆ ಅದನ್ನು ಫ್ರೆಷ್ ವರ್ಕ್ಸ್ ಎಂದು ಹೇಳಿ ಕೊಟ್ಟಿದ್ದಾರೆ. ಮತ್ತೆ ಅದಲ್ಲಿ ಪ್ರಿಂಟಿಂಗ್ ಹೋಗುವಾಗ ತಪ್ಪು ಆಗಿದೆ ಎಂದು ಹೇಳುತ್ತೀರಿ. ಅದರಲ್ಲಿ ತಪ್ಪು ಆದರೆ ತಾಲ್ಲೂಕು ತಪ್ಪು ಆಗಬಹುದು ಸರ್ಕಲ್ ತಪ್ಪು ಆಗಬಹುದು, ಕ್ಷೇತ್ರ ತಪ್ಪು ಆಗಬಹುದಾಗಿತ್ತು. ಆದರೆ

ಅದ್ಯಾವುದೂ ತಪ್ಪಾಗಿಲ್ಲ. ಫ್ರೆಷ್ ಐಟಂನಲ್ಲಿ ಎಲ್ಲಾ ಇದೆ. ಇದರಲ್ಲಿ ಬೆಂಗಳೂರು ಸರ್ಕಲ್ ಆಗಲೀ, ಮಂಡ್ಯಾ ಡಿವಿಜನ್ ಆಗಲೀ ಕೋಲಾರ ಡಿವಿಜನ್ ಆಗಲೀ, ಚಿಕ್ಕಬಳ್ಳಾಪುರ ಡಿವಿಜನ್ ಆಗಲೀ, ಚಿತ್ರದುರ್ಗ ಡಿವಿಜನ್ ಆಗಲಿ. ಚೆನ್ನಗಿರಿ ಡಿವಿಜನ್ ಆಗಲೀ, ಕೊಡಗು ಡಿವಿಜನ್ ಆಗಲೀ ಎಲ್ಲಾ ಕೂಡಾ ಫ್ರೆಷ್ ವರ್ಕ್ಸ್‌ನಲ್ಲಿ ಇವೆ. ಮತ್ತು ಅವು ಕೂಡಾ ಅನೆಕ್ಷರ್ ಭಾಗ ೨ರಲ್ಲಿ ಕೂಡಾ ಇವೆ ಆದರೆ ಭಾಗ ೨ಕ್ಕೆ ಪ್ರಿಂಟ್‌ನಲ್ಲಿ ತಪ್ಪು ಇದೆ ಎಂದು ಹೇಳಿದ್ದೀರಿ. ಆ ಪ್ರಕಾರ ಪೇಜ್ ೨೫೬ಕ್ಕೆ ಎ ಮತ್ತು ಬಿ ಎಂದು ಸೇರಿಸಿದ್ದೇವೆಂದು ಹೇಳಿದಿರಿ. ಪುಟ ೨೫೮ ಆದಮೇಲೆ ೨೫೯ ಇದೆ ಅದೇ ಸರ್ಕಲ್. ಮಂಗಳೂರು ಡಿವಿಜನ್, ಉಡುಪಿ ಡಿವಿಜನ್, ಕೊಡಗು ಡಿವಿಜನ್, ಧಾರವಾಡ ಡಿವಿಜನ್ ಇವೆ. ಆದ್ದರಿಂದ ಇದು ಪ್ರಿಂಟಿಂಗ್ ಮಿಸ್ಟೇಕ್ ಪ್ರಶ್ನೆ ಅಲ್ಲ. ಅದಕ್ಕೆ ಸಂಬಂಧಪಟ್ಟ ಡೀಟೇಲ್ ಎಸ್ಟಿಮೇಟ್ ೧ ಕೋಟಿ ೨೦ ಲಕ್ಷ ೧೦ ಸಾವಿರ ರೂಪಾಯಿಗಳು. ಪ್ರೊವೈಡ್ ಮಾಡಿದ್ದುದು ೪೦ ಲಕ್ಷ ೩೨ ಸಾವಿರ ರೂಪಾಯಿಗಳು ಹಾಗಿದ್ದಮೇಲೆ ಇಷ್ಟು ಬಡ್ಜೆಟ್‌ನಲ್ಲಿ ಜಾಸ್ತಿಯಾಗಬೇಕು. ಇದಕ್ಕೆ ಅಮೆಂಡ್‌ಮೆಂಟ್ ಎಲ್ಲಿ ಇದೆ? ಆದುದರಿಂದ ಇದನ್ನು ತಾವು ಲಂಪ್‌ಸಮ್ ಆಗಿ ಮಾಡಿ ಆಮೇಲೆ ಅಡ್‌ಜಸ್ಟ್‌ಮೆಂಟ್ ಮಾಡಿ. ಆದರೆ ಈಗ ತಾವು ಅದನ್ನು ಹಿಂದೆ ತೆಗೆದುಕೊಳ್ಳಬೇಕಾಗುತ್ತದೆ. Otherwise we will lose sanctity of it or else we have no other option but to move a privilege motion......ತಾವು ಹಿರಿಯ ಮಂತ್ರಿಗಳಿದ್ದೀರಿ. ಆ ಮಟ್ಟಕ್ಕೆ ಹೋಗುವುದು ಬೇಡ. ತಾವು ನಿನ್ನೆ ಹೇಳಿದ ಮೇಲೆ ಪ್ರಿಂಟ್ ಮಿಸ್ಟೇಕ್ ಇದೆಯೇ ಎಂದು ನಾನು ಪುನಃ ಎಲ್ಲಾ ಪುಟಗಳನ್ನು ತೆಗೆದು ನೋಡಿದೆ. ಅದರಲ್ಲಿ ಅದೇ ಸರ್ಕಲ್, ಅದೇ ಐಟಮ್ ಇದೆ. ಎಲ್ಲಿ ತಪ್ಪು ಆಗಿದೆ? ತಾವು ಸೇರಿಸಿ ಬೇಕೆಂದಿದ್ದರೆ ಅದು ನಿಮ್ಮ ಪ್ರಿವಿಲೇಜ್, . ಇವತ್ತು ಹೊಸ ಕೆಲಸಗಳನ್ನು ಮಧ್ಯದಲ್ಲಿ ಸೇರಿಸಿದರೆ ಮತ್ತೆ ಬೇರೆ ಇಲಾಖೆಯವರೂ ಇದೇ ಕೆಲಸವನ್ನು ಮಾಡುವುದಕ್ಕೆ ದಾರಿ ಹಾಕಿ ಕೊಟ್ಟಂಥಾಗುತ್ತದೆ. ಅದೂ ಕೂಡಾ ಸೀನಿಯರ್ ಮಿನಿಸ್ಟರ್ ಆದ ತಾವು ಇದನ್ನು ಜಸ್ಟಿಫೈ ಮಾಡುವುದಕ್ಕೆ ಯಾವ ಕಾರಣಗಳೂ ಇಲ್ಲ. ಇನ್ನು ಮೇಜರ್ ಇರಿಗೇಷನ್ ನಿಗಮ ಮಾಡುವುದರ ಬಗ್ಗೆ ಹೇಳಿದ್ದ. ಕೆ.ಪಿ.ಸಿ.ಗೆ ಪ್ರಾಜೆಕ್ಟ್ ತಯಾರು ಮಾಡತಕ್ಕ ಕೆಲಸ ಇದೆ. ಇವತ್ತು ಮೇಜರ್ ಇರಿಗೇಷನ್ ಬಗ್ಗೆ ನಬಾರ್ಡ್ ಹೇಳುತ್ತೀರಿ. ಮೇಂಟೆನೆನ್ಸ್ ಆಫ್ ಪ್ರಾಜೆಕ್ಟ್, ಕಾಡಾ ಡೆವಲಪ್‌ಮೆಂಟ್ ಏನು ಕೆಲಸ ಇದೆ ಅದಕ್ಕೆ ನಬಾರ್ಡ್‌ನಿಂದ ಸಹಾಯವಾಗುತ್ತದೆ. ಇವತ್ತು ರಿಸೋರ್ಸ್ ಮೊಬಲೈಸ್ ಮಾಡಬೇಕಾದರೆ ರೈತರಿಗೆ ಸಹಾಯ ಬೇಕಾಗುತ್ತದೆ. ಇವತ್ತು ಯು.ಕೆ.ಪಿ.ಗೆ ಅಲೋಕೇಷನ್ ಜಾಸ್ತಿ ಮಾಡಿದ್ದೇವೆಂದು ಹೇಳುತ್ತೀರಿ. ಆದರೆ ಅಂಕಿಅಂಶಗಳನ್ನು ನೋಡಿದರೆ ೧೯೮೪-೮೫ರಲ್ಲಿ ೪೦ ಕೋಟಿ ೧೯೮೫-೮೬ರಲ್ಲಿ ೪೦ ಕೋಟಿ ೧೯೮೬-೮೭ರಲ್ಲಿ ೪೪ ಕೋಟಿ ರೂಪಾಯಿ ಆಗಿದೆ. ಇವರಲ್ಲಿ ಹೆಚ್ಚು ಕಡಿಮೆ ಎನ್ನುವ ಪ್ರಶ್ನೆ ಎಲ್ಲಿ ಬಂತು? ಇವತ್ತು ತಾವು ಲೆಕ್ಕ ಕೊಟ್ಟ ಪ್ರಕಾರ ಎಲ್ಲಿ ಜಾಸ್ತಿಯಾಗಿದೆ ಎಂಬುದು ಕಂಡು ಬರುತ್ತಿಲ್ಲ. ಕಾವೇರಿ ಬೇಸಿನ್ ಬಗ್ಗೆ ಪುನರ್ ಉಚ್ಚಾರಕ್ಕೆ ನಾನು ಹೋಗುವುದಿಲ್ಲ. ಇವತ್ತು ತಾವು ಹೆಚ್ಚು ಹಣ ಖರ್ಚು ಮಾಡಿದ್ದೇವೆಂದು ಏನು ಹೇಳಿದ್ದೀರಿ ಹಾಗೂ ರೆಕಾರ್ಡ್ಸ್‌ನಲ್ಲಿ ಕೊಟ್ಟಿದ್ದೀರಿ ಅದನ್ನು ನೋಡಿದರೆ ವ್ಯತ್ಯಾಸ ಕಾಣುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ನೀಡಬೇಕು.

ಶ್ರೀ ಎಚ್. ಡಿ ದೇವೇಗೌಡ.—ಅಧ್ಯಕ್ಷರೇ, ಒಂದು ಮಹತ್ವವಾದ ವಿಷಯವನ್ನು ಅವರು ಎತ್ತಿದ್ದಾರೆ ಆ ಬಗ್ಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು ಮಿಕ್ಕದ್ದಕ್ಕೆ ಅಷ್ಟು ಮಹತ್ವವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಮಿನಿಮಮ್ ನೀಡ್ ಪ್ರೋಗ್ರಾಮ್ ರೋಡ್‌ನಲ್ಲಿ Detailed Estimates for Irigation. Electricity and Public Works Part II and Bridges Appendix...ಬಡ್ಜೆಟ್ ಪ್ರಿಂಟ್‌ಗೆ ಹೋದಂತಹ ಕಾಲದಲ್ಲಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಎಂದರೆ ಇದು ಎಂ.ಎನ್.ಪಿ.ದ್ದು ಎಂದು ಹೇಳುತ್ತೀರಾ?

ಶ್ರೀ ಎಚ್. ಡಿ ದೇವೇಗೌಡ.—ಹೌದು, ಸ್ವಲ್ಪ ಓದಿ ನೋಡಿ ಸ್ವಾಮಿ. ಇದರೊಳಗೆ ಇದು ೩೪೬ ಲಕ್ಷ ಪ್ರಿಂಟ್ ಆಗಿದೆ. ಇಲ್ಲಿ ಬೇರೆ ಡಿಟೇಲ್ಸ್ ಕೊಟ್ಟಿರುವಾಗ ೪೦.೩೨ ಲಕ್ಷ ರೂಪಾಯಿಯ ವರ್ಕ್ಸ್ ಅಚ್ಚು ಆಗಿಲ್ಲ: ೧ ಕೋಟಿ ರೂಪಾಯಿಗಳನ್ನು ಲಂಪ್‌ಸಮ್ ಆಗಿ ಇಟ್ಟುಕೊಂಡಾಗ ಇದನ್ನು ಇಟ್ಟುಕೊಳ್ಳುವುದಕ್ಕೇನೂ ಕಷ್ಟ ಆಗಲಾರದು. ಎಫ್.ಡಿ. ಯಿಂದ ಪ್ರಿಂಟಿಂಗ್‌ಗೆ ಹೋಗತಕ್ಕ ಸಮಯದಲ್ಲಿ ೩೪೬ ಲಕ್ಷ ರೂ ಗಳಿಗೆ ಅಮೌಂಟ್ ನಿಗದಿ ಮಾಡುವುದಕ್ಕೆ ಡಿಟೇಲ್ಸ್ ಹೋದಾಗ ೪೦ ಲಕ್ಷ ರೂಪಾಯಿ ವರ್ಕ್ಸ್ ಕೈಬಿಟ್ಟಿವೆ. ಹಾಗೇನೂ ಮಾಡುವ ಹಾಗಿದ್ದರೆ ನಾನು ಲಂಪ್‌ಸಮ್‌ನಲ್ಲೇ

ಇಟ್ಟುಕೊಳ್ಳುತ್ತಿದ್ದೆ. ಇದರಲ್ಲಿ ಯಾವುದೇ ಭ್ರಷ್ಟಾಚಾರ ವಂಚನೆ ಮತ್ತೊಂದು ಇಲ್ಲ. ಇದು ಕೇವಲ ಪ್ರಿಂಟಿಂಗ್ ಮಿಸ್ಟೇಕ್. ಇದರಿಂದ ನಾನೇನೂ ಸದನವನ್ನು ತಪ್ಪುದಾರಿಗೆ ಎಳೆಯಬೇಕೆಂದಿಲ್ಲ. ಇನ್ನು ಯು.ಕೆ.ಪಿ.ಗೆ ೭೪ ಕೋಟಿ ರೂಪಾಯಿ ಇಟ್ಟಿದ್ದೇವೆ. ಪ್ಲಾನ್ ಅಲೋಕೇಷನ್ ೬೪ ಕೋಟಿ ರೂಪಾಯಿ ಕಾಡಾದಿಂದ ಇರತಕ್ಕದ್ದು ೧೩ ಕೋಟಿ ರೂಪಾಯಿಗಳು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕಾಡಾದನ್ನು ಸೇರಿಸಿದ್ದೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಟೋಟಲ್ ೧ ಸಾವಿರದ ೭೧ ಕೋಟಿ ರೂಪಾಯಿ ಏನು ಖರ್ಚು ಮಾಡುತ್ತೇವೆಯೋ ಅದನ್ನೆಲ್ಲಾ ಸೇರಿಸಿದ್ದೇನೆ.

ಶ್ರೀ ಹೆಚ್. ಡಿ ದೇವೇಗೌಡ.— ಟೋಟಲ್ ೧ ಸಾವಿರದ ೭೧ ಕೋಟಿ ರೂಪಾಯಿ ಏನು ಖರ್ಚು ಮಾಡುತ್ತೇವೆಯೋ ಅದನ್ನೆಲ್ಲಾ ಸೇರಿಸಿದ್ದೇವೆ. ಪ್ರತಿ ವರ್ಷ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಮಾಡಿದ್ದೇವೆ. Major money we are giving to spend for feild canals ಆದರೆ ಈ ಸದನವನ್ನು ತಪ್ಪು ದಾರಿಗೆಳೆಯತಕ್ಕ ಯಾವುದೇ ಅಭಿಪ್ರಾಯವೂ ಇದರಲ್ಲಿಲ್ಲ. ಇಷ್ಟು ಮಾತ್ರ ನಾನು ಹೇಳುತ್ತೇನೆ, ನೀವು ದಯವಿಟ್ಟು ಇದರಲ್ಲಿ ರಾಜಕೀಯವನ್ನು ಮಾಡುವುದಕ್ಕೆ ಹೋಗಬೇಡಿ. ತೆಲುಗು – ಗಂಗಾ ಯೋಜನೆಯಲ್ಲಿ ನೀವು ಮೋಸ ಮಾಡುತ್ತಿದ್ದೀರಿ, ಜನರೇ ನಿಮ್ಮನ್ನು ನೋಡಿಕೊಳ್ಳುತ್ತಾರೆ. ಹಾಗೆ, ಹೀಗೆ ಎಂದು ಏನು ಹೇಳಿದಿರಿ ಅದು ಸರಿಯಲ್ಲ ಎನ್ನುವ ಮಾತನ್ನು ತಮಗೆ ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಹಾಗಾದರೆ ಇನ್ನು ಮೇಲೆ ನಾವು ಈ ವಿಧಾನ ಸಭೆಯಲ್ಲಿ ಮಾತನಾಡುವುದನ್ನು ನಿಲ್ಲಿಸಿಬಿಡುತ್ತೇವೆ. ಹೊರಗಡೆ ಮಾತನಾಡುತ್ತೇವೆ. ನೀವು ಸರಿಯಾದ ರೀತಿಯಲ್ಲಿ ನಾವು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಿಲ್ಲವಾದ್ದರಿಂದ ನಾವು ಈ ಮಾತನ್ನು ಹೇಳಬೇಕಾಗುತ್ತದೆ. ಆದರೆ ಇದು ರಾಜಕೀಯ ಎಂದು ತಾವು ಹೇಳುವುದಾದರೆ ಇನ್ನುಮೇಲೆ ಇಲ್ಲಿ ಮಾತನಾಡುವುದನ್ನು ನಾವು ನಿಲ್ಲಿಸುತ್ತೇವೆ.

ಶ್ರೀ ಹೆಚ್. ಡಿ ದೇವೇಗೌಡ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ನಾನು ಇನ್ನೊಂದು ಸಾರಿ ಸ್ಪಷ್ಟಪಡಿಸಬಯಸುತ್ತೇನೆ. ಇದರಲ್ಲಿ ಯಾರೂ ಕೂಡ ರಾಜಕೀಯವನ್ನು ಮಿಶ್ರ ಮಾಡಬಾರದು ಅದು ಕೃಷ್ಣಾ ನದಿ ನೀರಿನ ವಿಚಾರ ಇರಬಹುದು ಅಥವಾ ಕಾವೇರಿ ನದಿ ನೀರಿನ ವಿಚಾರ ಇರಬಹುದು. ಆದರೆ ದಯವಿಟ್ಟು ಯಾರೂ ಕೂಡ ಇದರಲ್ಲಿ ರಾಜಕೀಯವನ್ನು ಸೇರಿಸುವುದಕ್ಕೆ ಹೋಗಬಾರದು. ನಮ್ಮೆಲ್ಲರ ಗುರಿ ನಮ್ಮ ರಾಜ್ಯಕ್ಕೆ ಬರಬೇಕಾದ ಪ್ರತಿಯೊಂದು ಹನಿ ಹನಿ ನೀರನ್ನೂ ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕೆಂಬುದು. ಇದರಲ್ಲಿ ಹೆಚ್ಚಾಯಿತು ಅಥವಾ ಕಡಿಮೆಯಾಯಿತು ಎಂದು ಪ್ರದರ್ಶನವನ್ನು ಇಲ್ಲಿ ಯಾರೂ ತೋರಿಸಬೇಕಾಗಿಲ್ಲ. ರಾಜ್ಯದ ಬಗ್ಗೆ ನಮಗಿರುವಷ್ಟೇ ಆಸಕ್ತಿ ನಿಮಗೂ ಇದೆ, ಇದರಲ್ಲಿ ಅನುಮಾನ ಬೇಡ. ನಿದ್ರೆಯಲ್ಲಿರುವ ಮನುಷ್ಯನನ್ನು ಎಚ್ಚರಿಸಬಹುದು, ಆದರೆ ನಿದ್ರೆ ಮಾಡುವವನಂತೆ ನಟಿಸುವ ಮನುಷ್ಯನನ್ನು ಎಚ್ಚರಿಸುವುದು ಸಾಧ್ಯವಿಲ್ಲ. ನಾನಾದರೂ ಹೇಳುತ್ತೇನೆ, ನಮ್ಮ ಕರ್ನಾಟಕ ರಾಜ್ಯಕ್ಕೆ ಬರಬೇಕಾದ ಪ್ರತಿಯೊಂದು ಹನಿ ನೀರನ್ನೂ ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ನಿಮ್ಮೆಲ್ಲರ ಸಹಕಾರದಿಂದ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆಂದು ಮತ್ತೊಮ್ಮೆ ತಮಗೆ ಹೇಳಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ — ಮಾನ್ಯ ಅಧ್ಯಕ್ಷರೆ. ನಾನು ಹೆಚ್ಚು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗದೆ ಕೇವಲ ಎರಡೇ ಎರಡು ಸಣ್ಣ ವಿಚಾರಗಳನ್ನು ಸಚಿವರಿಗೆ ಕೇಳುತ್ತೇನೆ. ಮಾನ್ಯ ದೇವೇಗೌಡರು ಬಹಳ ಚೆನ್ನಾಗಿ ಭಾಷಣವನ್ನು ಮಾಡಿದ್ದಾರೆ. ಅವರು ಭಾಷಣ ಮಾಡುವಾಗ ನಮಗೆ ಏನು ಅನಿಸುತ್ತದೆಂದರೆ, ಎಲ್ಲರ ಮನಸ್ಸಿಗೂ ಸಮಾಧಾನವಾಗುವಂತೆ ಅವರ ಆತ್ಮಸಾಕ್ಷಿಯಾಗಿ ನಡೆದುಕೊಂಡಿದ್ದಾರೆ ಎನಿಸುತ್ತದೆ. ಬಹಳ ಸಂತೋಷ, ಸ್ವಾಮಿ, ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ. ನೀವು ಅತಿಮುಖ್ಯವಾಗಿ ಮಾಡಬೇಕಾದ ಕೆಲಸದಲ್ಲಿ ಒಂದೆರಡನ್ನು ಮಾಡಿಲ್ಲ. ಅದೇನೆಂದರೆ ನಮ್ಮಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ರಿಸರ್ವೇಷನ್ ಪ್ರೋ... ಎಂದು (ಜೂನಿಯರ್ ಕ್ಲಾಸ್–೧) ಪ್ರೊಮೋಷನ್ ಕೊಡಬೇಕೆಂದು ನಮ್ಮ ಕ್ಯಾಬಿನೆಟ್‌ನಲ್ಲಿ ಹಂಗಾಮಿಯಾಗಿ ಒಪ್ಪಿಕೊಂಡಿದ್ದೆವು. ಅಂದರೆ ೨೫ ಪರ್ಸೆಂಟ್ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಕೊಡಬೇಕೆಂದು

ತಾವು ಮಾಡಿದಿರಿ. ಅದು ಕೋರ್ಟಿಗೆ ಹೋಗಿ ತಡೆಯಾಜ್ಞೆ ಬಂದು ಹಾಗೆಯೇ ನಿಂತಿದೆ, ಈಗ ನೀವು ಏನು ಮಾಡಿದ್ದೀರಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೂ ೧೨೦೦ ರೂಪಾಯಿನ ಸ್ಕೇಲ್, ಜೂನಿಯರ್ ಕ್ಲಾಸ್-Iಗೂ ೧೨೦೦ ರೂಪಾಯಿಗಳ ಸ್ಕೇಲ್ ಎಂದು ನಿಗದಿ ಮಾಡಿರುವುದರಿಂದ ಇದರಲ್ಲಿ ಪ್ರೊಮೋಷನ್ ಎಲ್ಲಿ ಬರುತ್ತದೆ ? ವಾದವನ್ನು ಮುಂದೆ ಇಟ್ಟಿದ್ದಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಹುದ್ದೆಯನ್ನು ಮಾನ್ಯತೆ ಕೊಡಬೇಕು. ದಯವಿಟ್ಟು ಇದರಲ್ಲಿ ಸಂಬಳದ ಮೇಲೆ ನಿರ್ಧಾರ ಮಾಡುವುದಕ್ಕೆ ಹೋಗಬೇಡಿ. ಆದರೆ ನೀವು ಪ್ರೊಮೋಷನ್ ಕೊಡುವುದರಲ್ಲಿ ಅನ್ಯಾಯವನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮಾಡಿದ್ದೀರಿ. ಇದು ಒಳ್ಳೆಯದಲ್ಲ. ನಿಮ್ಮ ಈ ನೀತಿಯನ್ನು ಬದಲಾವಣೆ ಮಾಡಿ. post to post ನೀವು promotion ಕೊಡಿ. ಸಂಬಳದ ಸ್ಕೇಲನ್ನು ತೋರಿಸಿ ಅನ್ಯಾಯ ಮಾಡಲು ಹೋಗುವುದು ಸರಿಯಲ್ಲ.

ಇನ್ನು ಎರಡನೆಯದಾಗಿ, ಜಾತಿಯ ಸುಳ್ಳು ಸರ್ಟಿಫಿಕೇಟನ್ನು ತೆಗೆದುಕೊಂಡು ಬಂದು ಅಸಿಸ್ಟೆಂಟ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಹುದ್ದೆಗಳಿಗೆ ಬೇರೆ ಜಾತಿಯವರು ಸೇರಿಕೊಂಡಿದ್ದಾರೆ. ಉದಾಹರಣೆಗೆ ಗಂಗ-ಮತಸ್ಥರು ಎಂದು ಇದ್ದಾರೆ. ಮಹಾರಾಷ್ಟ್ರದಲ್ಲಿ ಕೋಳಿ ಎಂದು ಇದ್ದಾರೆ. ಆದರೆ ಇವರಿಗೆ ಅಲ್ಲಿ ಸರ್ಟಿಫಿಕೇಟ್‌ನ್ನು ಕೊಡುವಾಗ ಕೋಳಿ-ಡೋರ್ (೨) ಎಂದು ಕೊಡುತ್ತಾರೆ. ಈ ಪದವನ್ನು ಸೇರಿಸುವುದರಿಂದ ಇದನ್ನು ನೋಡಿಕೊಂಡು ಅವರಿಗೆ ನೀವು ಪ್ರೊಮೋಷನ್ ಕೊಡುತ್ತೀರಿ. ಹೀಗೆ ಕೊಡುವುದರಿಂದ ಎಸ್. ಸಿ. ನವರಿಗೆ ಅನ್ಯಾಯವಾಗುತ್ತದೆ. ಅಲ್ಲದೆ ಇದು ರಾಜ್ಯಾಂಗಕ್ಕೆ ವಿರುದ್ಧವೂ ಆಗುತ್ತದೆ. ಈ ರೀತಿ ಮಾಡಬೇಡಿ ಎಂದು ಹೈಕೋರ್ಟ್‌ನವರೂ ಕೂಡ ಇದನ್ನು ಮಾಡಕೂಡದು ಎಂದು ತೀರ್ಪನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್, ಡಿ. ದೇವೇಗೌಡ — ಸ್ವಾಮಿ, ಹಿಂದೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಹುದ್ದೆಯಿಂದ ಎಕ್ಸಿಕ್ಯುಟಿವ್ ಇಂಜಿನಿಯರ್ ಹುದ್ದೆಗೆ ಪ್ರೊಮೋಷನ್ ಕೊಡುವ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ನಿಮ್ಮ ಅಧಿಕಾರದಲ್ಲಿದ್ದಂಥ ನೀತಿಯನ್ನೇ ನಾವೂ ಅನುಸರಿಸಿಕೊಂಡು ಬರುತ್ತಿದ್ದೇವೆ. ನಮ್ಮ ಜನತಾ ಸರ್ಕಾರ ಬಂದಮೇಲೆ ಹೊಸ ನೀತಿಯನ್ನೇನೂ ನಾವು ಅನುಸರಿಸುತ್ತಿಲ್ಲ.

ಇನ್ನು ಎರಡನೆಯದಾಗಿ, ಹೇಳುವುದಾದರೆ, ನಿಮಗಿಂತಲೂ ನಾವು ಇನ್ನೂ ಒಂದು ಹೆಜ್ಜೆಯನ್ನು ಮುಂದೆ ಹೋಗಿದ್ದೇವೆ. ರಿಕ್ರೂಟ್‌ಮೆಂಟ್ ಮಾಡುವ ಸಂದರ್ಭದಲ್ಲಿ ೧೮ ಪರ್ಸೆಂಟ್ ಇದ್ದುದನ್ನು ೨೫ ಪರ್ಸೆಂಟ್‌ಗೆ ರೆಕ್ರೂಟ್‌ಮೆಂಟ್‌ನಲ್ಲಿ ರಿಸರ್ವೇಷನ್‌ನ್ನು ಹೆಚ್ಚಿಸಿದ್ದೇವೆ. ತಮಗೆ ಹೇಳಬೇಕಾದರೆ ಮೊಟ್ಟ ಮೊದಲ ಬಾರಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದನ್ನು ಮಾಡಿದ್ದೇವೆ. ಭಾರತದ ಬೇರೆ ಯಾವ ರಾಜ್ಯದಲ್ಲೂ ಈ ನೀತಿ ಇಲ್ಲ. ಅದರಲ್ಲೂ ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ......

ಶ್ರೀ ಬಿ. ಬಸವಲಿಂಗಪ್ಪ — ಅದರ ಪರಿಣಾಮ ಏನಾಯಿತು ? ಕೋರ್ಟಿಗೆ ಹೋಗಿ ತಡೆಯಾಜ್ಞೆ ಬಂದಿದೆ.

ಶ್ರೀ ಹೆಚ್. ಡಿ. ದೇವೇಗೌಡ.— ನಾವು ಹೊಸದಾಗಿ ಈ ರಿಸರ್ವೇಷನ್‌ನ್ನು ಹೆಚ್ಚು ಮಾಡಿದ್ದರ ಪರಿಣಾಮವಾಗಿ ಇತ್ತೀಚೆಗೆ ನಡೆದ ನೇಮಕಾತಿಯಲ್ಲಿ ೧೨೫ ಜನ ಜೂನಿಯರ್ ಇಂಜಿನಿಯರ್‌ಗಳು ಪ್ರಥಮಬಾರಿಗೆ ಆಯ್ಕೆಯಾಗಿದ್ದಾರೆ. This is first state Government which has taken such a decision in the whole of the country. Total impact of the entire recruitment is changed. ಈ ವ್ಯವಸ್ಥೆಯ ಬಗ್ಗೆ ನೀವು ಯೋಚನೆ ಮಾಡಿ ನೋಡಬೇಕು. ನೇಮಕಾತಿ ಸಂದರ್ಭದಲ್ಲೇ ೨೫ ಪರ್ಸೆಂಟ್ ರಿಸರ್ವೇಷನ್ ಇಟ್ಟಿದ್ದೇವೆ. ನಮ್ಮ ಇಡೀ ಭಾರತ ದೇಶದಲ್ಲೇ ಎಲ್ಲೂ ಅನುಸರಿಸದ ನೀತಿಯನ್ನು ನಾವು ಅನುಸರಿಸುತ್ತಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಏನಾದರೂ ಇದರ ಬಗ್ಗೆ ಟೀಕೆ ಮಾಡುವುದಾದರೆ ಅದು ಅವರ ಆತ್ಮ ವಂಚನೆ ಮಾಡಿಕೊಂಡಂತಾಗುತ್ತದೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ — ಕೇವಲ ಕಾನೂನು ಮಾಡಿದರೇ ಸಾಲದು. ಅದು ಜಾರಿಗೆ ಬರಬೇಕು, ಒಂದುವೇಳೆ ಇದನ್ನು ಜಾರಿಗೆ ತಂದಿದ್ದರೆ ಅದರ ಮಾಹಿತಿ ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.— ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತಮಗೆ ಬೇಕಾದರೆ ಕಳುಹಿಸಿಕೊಡುತ್ತೇನೆ, ಆದರೆ ಹಿಂದೆ ನೀವು ಅಧಿಕಾರದಲ್ಲಿದ್ದಾಗ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್‌ನ ವ್ಯಕ್ತಿ

ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಹುದ್ದೆಯಲ್ಲಿ ಕನಿಷ್ಟ ೫ ವರ್ಷ ಸೇವೆ ಸಲ್ಲಿಸಿದ್ದರೆ ಮುಂದಿನ ಹುದ್ದೆಗೆ ಪ್ರೊಮೋಷನ್ ಕೊಡಬೇಕೆಂಬ ನಿಮ್ಮ ನೀತಿ ಏನಿತ್ತು ಅದೇ ನೀತಿಯನ್ನೇ ನಾವೂ ಮುಂದು ವರಿಸಿ ಕೊಂಡು ಹೋಗುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.— ಕಾಂಗ್ರೆಸ್ ಸರ್ಕಾರದವರು ಏನು ನೀತಿಯನ್ನು ಅನುಸರಿಸುತ್ತಿದ್ದರು ಅದೇ ನೀತಿಯನ್ನೇ ನಾವೂ ಮುಂದುವರಿಸಿಕೊಂಡು ಹೋಗುತ್ತಿದ್ದೇವೆಂದು ತಾವು ಹೇಳಿದಿರಿ, ಬಹಳ ಸಂತೋಷ. ಆದರೆ ಲೋಕೋಪಯೋಗಿ ಇಲಾಖೆಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲ. ೩ ವರ್ಷ ಕಾಲ ಖಾಲಿ ಇರತಕ್ಕ ಹುದ್ದೆಗಳಿಗೆ ಪ್ರೊಮೋಷನ್ ಕೊಟ್ಟು ಇವರನ್ನು ತುಂಬಬೇಕೆಂದು ನಾವು ಹೇಳಿದ್ದೇವೆ. ತಾವು ಮಾಡಿದ್ದೀರಿ ?

ಶ್ರೀ ಹೆಚ್. ಡಿ. ದೇವೇಗೌಡ.— ತಾವು ವಕೀಲರು. ನಾನು ವಕೀಲನಲ್ಲ. ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಸರ್ವೀಸ್‌ನಲ್ಲಿ ೧ ಸಾರಿ ಪ್ರೊಮೋಷನ್ ಕೊಡಬೇಕೆಂದು ನೀವು ಏನು ತೀರ್ಮಾನ ಮಾಡಿದ್ದೀರಿ ಅದನ್ನು ನಾವು ೨ ಸಾರಿ ಕನ್ಸೆಷನ್ ಎಂದು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.— ಸಂತೋಷ. ಆದರೆ ಕೆಲವು ವಿಚಾರಗಳಲ್ಲಿ ನಿಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ, ನಾನು ಕೇವಲ ಎರಡು ಪ್ರಶ್ನೆಗಳನ್ನು ಮಾತ್ರ ನನ್ನ ಭಾಷಣದ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೆ. ಆದರೆ ಅವುಗಳಿಗೆ ಮಾನ್ಯ ಸಚಿವರು ಉತ್ತರವನ್ನು ಹೇಳಿದಂತೆ ಕಾಣಲಿಲ್ಲ. ಪಿ. ಎಸ್. ಸಿ. ಯಲ್ಲಿ ಅನೇಕ ಶಿಫಾರಸುಗಳನ್ನು ಮಾಡಿದರೂ ಕೇವಲ ಕೆಲವೊಂದು ವಿಚಾರಗಳನ್ನು ಮಾತ್ರ ಇಲ್ಲಿ ಹೇಳಿದ್ದಾರೆ. ನಾನಾದರೂ ಕೇಳುತ್ತೇನೆ ಅವರು ಮಾಡಿರ ತಕ್ಕ ಶಿಫಾರಸುಗಳು ಯಾವುವು ಎಂಬುದನ್ನೆಲ್ಲಾ ಹೇಳಬೇಕು. ಕೆಲವರನ್ನು ಸಸ್ಪೆಂಡ್ ಮಾಡಿದ್ದೇವೆಂದು ಹೇಳಿದ್ದಾರೆ. ಸಂತೋಷ. ಇದೇರೀತಿ ಇನ್ನೂ ಅನೇಕ ವಿಚಾರಗಳಲ್ಲಿ ಏನೇನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನೂ ಹೇಳಬೇಕು. ಈಗಲೇ ತಾವು ಹೇಳುವುದಾದರೆ ಹೇಳಿ. ಇಲ್ಲದಿದ್ದರೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ಒಂದು ನೋಟ್ ಆದರೂ ಕೊಡಿ. ಆಗ ನಮಗೆ ಏನು ಮಾಡಿದ್ದಾರೆಂದು ಅರ್ಥವಾಗುತ್ತದೆ.

ಇನ್ನು ಎರಡನೆಯದಾಗಿ ಹೇಳುವುದಾದರೆ, ಗುಲ್ಬರ್ಗಾ, ಬೀದರ್ ಮುಂತಾದ ಕಡೆಗಳಲ್ಲಿ ಲೇಬರ್ ಟ್ರಿಬ್ಯುನಲ್‌ಗಳು ತೀರ್ಮಾನವನ್ನು ಕಾರ್ಮಿಕರ ಪರವಾಗಿ ಕೊಟ್ಟಿವೆ. ಆದರೆ ನೀವು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದೀರಿ. ಅದು ಡಿಕ್ರಿ ಆಗಿದೆ. ನಿಮ್ಮ ಪ್ರಾಪರ್ಟಿಯೆಲ್ಲಾ ಅಟ್ಯಾಚ್‌ಮೆಂಟ್ ಆಗಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗ ಕಾರ್ಮಿಕರ ಮೇಲೆ, ಕಾರ್ಮಿಕ ನಾಯಕರ ಮೇಲೆ ಕೇಸ್‌ಗಳನ್ನು ಹಾಕತಕ್ಕ ಸಂದರ್ಭ ಬಂದಿದೆ. ನೀವು ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇದೆ. ಆದರೆ ಲೇಬರರ್ಸ್ ಪರವಾಗಿ ಆಗಿರತಕ್ಕ ಕೇಸ್‌ಗಳಲ್ಲೂ ಕೂಡ ಕೋರ್ಟಿಗೆ ಹೋಗಿ ತಡೆಯಾಜ್ಞೆ ತರುವುದು ಸರಿಯಲ್ಲ. ಇಲಾಖೆಗಳಲ್ಲಿ ನಡೆಯತಕ್ಕ ಅನೇಕ ವಿಚಾರಗಳು ತಮ್ಮ ಗಮನಕ್ಕೆ ಬಾರದೇ ಇರಬಹುದು.

ತೆಲುಗು ಗಂಗಾ ವಿಷಯದಲ್ಲಿ ಹೇಳುವುದಾದರೆ ತಾವು ನಮ್ಮ ಪಾಲಿಗೆ ಬರಬೇಕಾದ ನೀರಿನ ಒಂದು ಹನಿಯನ್ನು ಕೂಡ ಬಿಟ್ಟುಕೊಡುವುದಿಲ್ಲವೆಂದು ಹೇಳಿರುತ್ತೀರಿ. ಬಹಳ ಸಂತೋಷ. ಆದರೆ ಎನ್.ಟಿ.ಆರ್.ರವರೂ ಬಹಳವಾಗಿ ಮಾತನಾಡಿದ್ದಾರೆ. ಅವರು ಯಾವರೀತಿ ಮಾತನಾಡಿದ್ದಾರೆಂದರೆ ಅದನ್ನು ಕೇಳುವುದಕ್ಕೆ ನಮಗೆ ಅಧಿಕಾರವೇ ಇಲ್ಲ ಎನ್ನುವ ಮಟ್ಟಕ್ಕೆ ಮಾತನಾಡಿದ್ದಾರೆ. ಸರ್ಪ್ಲಸ್ ವಾಟರ್ ಬಗ್ಗೆ ಯೂಸ್ ಮಾಡುತ್ತೇವೆಂದು ಅವರು ಪ್ರಾಜೆಕ್ಟ್ ಕಟ್ಟತಕ್ಕಂಥ ಪರಿಸ್ಥಿತಿಗೆ ಹೋಗಿದ್ದಾರೆ. ಇದೆಲ್ಲಾ ಪತ್ರಿಕೆಗಳಲ್ಲಿ ಬರುತ್ತಿರತಕ್ಕಂಥ ವರದಿಯಾಗಿದೆ. ೭೩೪ ಟಿ.ಎಂ.ಸಿ.ಎಫ್.ಟಿ. ಬಚಾವತ್ ಅವಾರ್ಡ್ ಆಗಿರುವುದರಲ್ಲಿ ೪೦೦ ಟಿ.ಎಂ.ಸಿ.ಎಫ್.ಟಿ. ನೀರನ್ನು ಮಾತ್ರ ನಾವು ಉಪಯೋಗಿಸಿರ ತಕ್ಕಂಥದ್ದಾಗಿರುತ್ತದೆ. ಉಳಿದ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿರುತ್ತೀರಿ ಎನ್ನುವ ಪ್ರಶ್ನೆ ಬರುತ್ತದೆ. ಏನು ಮಾತನಾಡಿದರೂ ಇದು ಆಗಲಾರದು ಎನ್ನುವ ಸಂಶಯ ನಮ್ಮ ರಾಜ್ಯದ ಜನತೆಗೆ ಬರುತ್ತದೆ. ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ೭೩೪ ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ವಿವಾದ ಎದ್ದಿದೆ. ಅದನ್ನು ಹೇಗೆ ಯೂಸ್ ಮಾಡುತ್ತೀರೆಂದು ಕೇಳಿದ್ದಾರೆ. ಅದರ ಬಗ್ಗೆ ವಿವರಣೆ ಈರೀತಿ ಇರುವುದನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. Utilisation by projects already in operation 398 TMCft. Utilisation by projects under Construction 249 TMCft. Utilisation under proposed projects 87 TMCft. ಎರಡು ಸಾವಿರ ಟಿ.ಎಂ.ಸಿ.ಎಫ್.ಟಿ. ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳತಕ್ಕಂಥ ನಿರ್ಣಯವನ್ನು ಈಗಾಗಲೇ ಮಾಡಿದ್ದೇವೆಂದು ಮತ್ತೊಮ್ಮೆ ಹೇಳುತ್ತೇನೆ. ಇಷ್ಟೊತ್ತು ಅವರು ಹಾಗೆ ಹೇಳಿದರೂ ಕೂಡ, ಕಟ್ಟುವಂಥ ಕಟ್ಟೆ ಮೂರು ರಾಜ್ಯಗಳ ಪ್ರಯೋಜನ ಪಡೆಯುವಂತೆ ಕಟ್ಟಲಾಗುತ್ತದೆಂದು ಬಚವತ್ ಅವಾರ್ಡ್‌ನಲ್ಲಿ ಹೇಳಿರತಕ್ಕಂಥದ್ದು ಇದೆ. ಕೇಂದ್ರ ಸರ್ಕಾರಕ್ಕೆ ಈ ವಿಚಾರದ ಬಗ್ಗೆ ಎನ್‌ಫೋರ್ಸ್ ಮಾಡಿ ನಮ್ಮ ಪಾಲಿನ ಪ್ರಕಾರ ನೀರನ್ನು ಯೂಸ್ ಮಾಡಿಕೊಳ್ಳುವ ಬಗ್ಗೆ ಯಾವ ಸಂಶಯವೂ ಬೇಡವೆಂದು ಸ್ಪಷ್ಟಪಡಿಸುತ್ತೇನೆ.

ಎರಡನೆಯದಾಗಿ, ಡೇಲಿ ವೇಜಸ್ ಬಗ್ಗೆ ಕೋರ್ಟಿನಲ್ಲಿ ಡಿಕ್ರಿ ತಂದಿದ್ದಾರೆ, ಇಂಡಿವಿಜುಯಲ್ ಕೇಸ್ ಇದ್ದರೆ ಅದನ್ನು ನೋಡಿಸುತ್ತೇನೆ. ಅದರ ಬಗ್ಗೆ ಹೈದರಾಬಾದ್ ಕರ್ನಾಟಕ ಬಿಜಾಪುರ ಎರಡು ಮೂರು ಕೇಸ್‌ಗಳ ಬಗ್ಗೆ ಗಮನ ಸೆಳೆದಿರುತ್ತಾರೆ. ಸಮಾನ ಕೆಲಸಕ್ಕೆ ಸಮಾನ ವೇತನ ಎನ್ನತಕ್ಕಂಥ ನಿರ್ಣಯದಂತೆ ಇಂಡಿವಿಜುಯಲ್ ಕೇಸ್ ಯಾವುದಾದರೂ ಇದ್ದರೆ ಅದರ ಬಗ್ಗೆ ಪರಿಶೀಲನೆ ಮಾಡಲು ಸಾಧ್ಯವಿದೆ ಎಂದು ಹೇಳುತ್ತೇನೆ. ಹಿಂದೆ ಯಾವುದೇ ಸರ್ಕಾರ ದಿನಗೂಲಿಯ ಬಗ್ಗೆ ನಮ್ಮ ಸರ್ಕಾರ ತೋರಿಸಿದಷ್ಟು ಆಸಕ್ತಿಯನ್ನು ತೋರಿಸಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ಶಹಬಾಷ್ ಗಿರಿಯನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಅದೇ ರೀತಿಯಲ್ಲಿ ಇಟ್ಟಿರತಕ್ಕಂಥ ಸಹಾನುಭೂತಿ ಜನಕ್ಕೆ ಗೊತ್ತಿರುತ್ತದೆ. ಸಾರ್ವತ್ರಿಕವಾಗಿ ನ್ಯಾಯಾಲಯದ ಮುಂದೆ ನಮ್ಮ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಒಂದು ಹಂತದಲ್ಲಿ ಅಪಾಲಜಿ ಕೊಡತಕ್ಕಂಥ ಸನ್ನಿವೇಶ ಆದುದ್ದು ಇರುತ್ತದೆ. ನನಗಿಂತಲೂ ಹೆಚ್ಚಿನದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಲವಾರು ಬಾರಿ ಈ ವಿಷಯದಲ್ಲಿ ತುಂಬ ಆಸ್ಥೆ ವಹಿಸಿದ್ದಾರೆ. ಆದರೆ ಹೈಕೋರ್ಟಿನ ಆಜ್ಞೆಯನ್ನು ಉಲ್ಲಂಘನೆ ಮಾಡಿ ಸುಪ್ರೀಂ ಕೋರ್ಟ್‌ವರೆಗೆ ಹೋಗುವ ಮಟ್ಟಕ್ಕೆ ಹೋಗಿದ್ದಾರೆ. ಸಮಾನ ಕೆಲಸಕ್ಕೆ ಸಮಾನ ವೇತನದ ನಿರ್ಣಯದ ಬಗ್ಗೆ ಮಾತನಾಡಿದ್ದಾರೆ. ತಾವು ಹೇಳಿದಂಥ ಒಂದೆರಡು ಘಟನೆಗಳ ಬಗ್ಗೆ ಏನು ಇದೆ ಅದನ್ನು ಪರಿಶೀಲನೆ ಮಾಡಿಸುತ್ತೇನೆಂದು ಹೇಳುತ್ತೇನೆ.

ಇನ್ನು ಪಿ.ಎ.ಸಿ. ರಿಪೋರ್ಟ್ ಬಗ್ಗೆ ಹೇಳಿರುತ್ತೀರಿ. Here, I would like to say that action taken will be reported back to the P.A.C. ೧೯೭೬ ಮತ್ತು ೧೯೭೮ರನೇ ಇಸವಿಯ ರಿಪೋರ್ಟ್‌ಗಳನ್ನು ತೆಗೆದುಕೊಂಡು ನಾವು ಏನು ಹೇಳಲು ಸಾಧ್ಯವಾಗುತ್ತದೆ. ನಾವು ಕೊಟ್ಟಿರತಕ್ಕಂಥ ಇತ್ತೀಚಿನ ರಿಪೋರ್ಟ್‌ಗಳ ಬಗ್ಗೆ ಕೇಳಿ, ಅದನ್ನು ಕೇಳತಕ್ಕಂಥ ಅಧಿಕಾರವಿರುತ್ತದೆ. ಅದಕ್ಕೆ ಆಕ್ಷನ್ ಟೇಕನ್ ಏನು ಎಂಬುದನ್ನು ಹೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ನಾನಂತೂ ತಮ್ಮ ಇಲಾಖೆಯ ಬಗ್ಗೆ ಏನು ಮಾತನಾಡಲಿಲ್ಲ. ನಮ್ಮ ಶ್ರೀ ಕೆ. ಎಚ್. ಪಾಟೀಲ್‌ರವರು ಮಾತನಾಡುತ್ತಾ, ಹಳೇ ಮೈಸೂರು ಭಾಗಕ್ಕೆ ಎಲ್ಲವನ್ನು ಮಾಡಿಬಿಟ್ಟಿದ್ದೀರಿ ಎಂದು ಹೇಳಿದರು. ಇದು ನಿಜವಾಗಿರುತ್ತದೆಯೋ ಎಂದು ಪುಸ್ತಕವನ್ನು ತೆಗೆದು ಒಂದೊಂದೇ ಹಾಳೆಯನ್ನು ತೆಗೆದು ನೋಡಿದೆ. ಎಲ್ಲೂ ಕೂಡ ಹೆಬ್ಬಾಳ್ ಪ್ರಾಜೆಕ್ಟ್ ಬಗ್ಗೆ ಒಂದು ಶಬ್ದವನ್ನೂ ಕೂಡ ಹೇಳಿದ್ದುದು ಕಂಡು ಬಂದಿಲ್ಲ. ಇದರಿಂದಾಗಿ ನಮಗೆ ಕುಡಿಯುವುದಕ್ಕೆ ನೀರಿಲ್ಲ, ಇರಿಗೇಷನ್‌ಗೆ ನೀರಿಲ್ಲ, ಬಂಡೀಪುರದ ಪ್ರಾಣಿಗಳಿಗೂ ಸಹ ಕುಡಿಯುವುದಕ್ಕೆ ನೀರಿಲ್ಲದಂತಾಗಿದೆ. ನಿಮಗೆ ನೀರು ಕೊಡುವುದಕ್ಕೆ ಮನಸ್ಸು ಇಲ್ಲವೆಂದು ಕಾಣುತ್ತದೆ. ಈ ಪ್ರಾಜೆಕ್ಟ್ ಎಲ್ಲಿ ಹೋಯಿತೋ ಗೊತ್ತಿಲ್ಲ. ಮಾನ್ಯ ಪಾಟೀಲ್‌ರವರು ಕೇಳಿದ್ದಕ್ಕೆ ಚೀಟಿಯನ್ನು ಬರೆದು ಕಳುಹಿಸಿದಿರಿ. ನಾನು ನಿಮ್ಮನ್ನು ಓಪನ್ ಆಗಿ ಕೇಳುತ್ತಿದ್ದೇನೆ. ಅವರ ಕೆಲಸ ಮಾಡಿಕೊಡಿ ಬೇಡವೆಂದು ಹೇಳುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯೆಯವರು ನನ್ನ ಕ್ಷೇತ್ರದಲ್ಲಿ ಏನು ಕೆಲಸ ಕಾರ್ಯಗಳನ್ನು ಮಾಡಿಲ್ಲವೆಂಬುದಾಗಿ ತಿಳಿಸಿದರು. ಮಾನ್ಯ ದೊಡ್ಡಮೇಟಿ, ಮಾನ್ಯ ಯಾವಗಲ್‌ರವರ

ಕ್ಷೇತ್ರದಲ್ಲೆಲ್ಲಾ ಹದಿನಾಲ್ಕು ಜಿಲ್ಲೆಗಳಲ್ಲಿ ಭೇಟಿಕೊಟ್ಟು ಸಣ್ಣ ಸಣ್ಣ ರಸ್ತೆಗಳ ಕೆಲಸ ಇವೆಲ್ಲ ಕೆಲಸಗಳನ್ನು ಮಾಡಿಸಿರುತ್ತೇವೆ. ನಿಮ್ಮ ಹೆಬ್ಬಳ್ಳ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ ನನ್ನ ಹತ್ತಿರ ಅದರ ಬಗ್ಗೆ ಪೂರ್ಣ ಮಾಹಿತಿ ಇಲ್ಲ ಆದರಿಂದ ನೀರು ಎಷ್ಟು ದೊರೆಯುತ್ತದೆ, ಎನ್ನುವ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಬೇಕಾಗಿದೆ. ಆ ಪ್ರಾಜೆಕ್ಟನ್ನು ಮಾಡುವುದರಿಂದ ಉಪಯೋಗವಾಗುತ್ತದೆ ಎನ್ನುವುದಾದರೆ ಸರ್ಕಾರ ನಿಮ್ಮ ಬಗ್ಗೆ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಮೇಜರ್ ಮತ್ತು ಮಿಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಳು ಇಲ್ಲದೆ ಇರುವ ಕೆಲವು ಕ್ಷೇತ್ರಗಳಲ್ಲಿ ಕೋಲಾರವು ಒಂದಾಗಿರುತ್ತದೆ. ಇದರ ಬಗ್ಗೆ ಸ್ಪೆಷಲ್ ಆಗಿ ಕನ್‌ಸಿಡರೇಷನ್ ಕೊಟ್ಟು ಒಂದು ಅಂತರ್ ಜಲ ಬಗ್ಗೆ ಮಾಸ್ಟರ್ ಪ್ಲಾನ್ ಮಾಡಬೇಕು. ಇಲ್ಲದಿದ್ದರೆ ಚಿಕ್ಕ ಚಿಕ್ಕ ಕೆರೆಗಳಲ್ಲಿ ಹೂಳು ತೆಗೆಯುವಂಥ ಕೆಲಸವನ್ನು ಮಾಡಬೇಕು,

ಎರಡನೆಯದಾಗಿ ಲೆಟರ್ ಆಫ್ ಕ್ರೆಡಿಟ್ ಇಂಟ್ರಡ್ಯೂಸ್ ಮಾಡಿದ್ದಾರೆ. ಮೂರು ನಾಲ್ಕು ವರ್ಷಗಳಿಂದ ಆದರಿಂದ ಏನಾಗುತ್ತಿದೆ ಎಂದರೆ ದುಡ್ಡೇ ಬರುತ್ತಿಲ್ಲ. ಚಿಕ್ಕ ಚಿಕ್ಕ ಕಂಟ್ರಾಕ್ಟರ್ಸ್‌ಗಳು ಹೋಗಿಬಿಟ್ಟು ದೊಡ್ಡ ಸಾಹುಕಾರರುಗಳಿಗೆ ಮನಪಲಿಯಾಗಿ ಹೋಗಿಬಿಟ್ಟಿದೆ, ಇದನ್ನು ತಪ್ಪಿಸಬೇಕು. ಮತ್ತೆ ಚೀಫ್ ಇಂಜನೀಯರ್ ವೆಂಕಟೇಶನ್ ಎಂಬುವರ ಮೇಲೆ ಯಾರೋ ಒಬ್ಬ ಸ್ಟೋರ್ ಕೀಪರ್ ಮಾಡಿದ ತಪ್ಪಿಗಾಗಿ ಇವರ ಮೇಲೆ ಕೇಸ್ ಹಾಕಿದ್ದಾರೆ. ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ಮಾಡಿ ಚೀಫ್ ಇಂಜನೀಯರ್‌ರವರ ಮೇಲೆ ಕರುಣೆಯನ್ನು ತೋರಿಸಬೇಕು. ಅವರ ಮೇಲೆ ಕ್ರಿಮಿನಲ್ ಕೇಸ್ ಹೂಡುವುದು ಬೇಡಿ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಕೋಲಾರ ಜಿಲ್ಲೆಯಲ್ಲಿ ಯಾವ ಮೇಜರ್ ಮೀಡಿಯಂ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ತಯಾರಾಗಿಲ್ಲ. ಅಲ್ಲಿ ಮೈನರ್ ಇರಿಗೇಷನ್‌ಗೆ ಎಷ್ಟು ಪ್ರಾಧಾನ್ಯತೆಯನ್ನು ಕೊಡಬೇಕೋ ಅಷ್ಟು ಕೊಡುತ್ತೇನೆ. ನಿಮ್ಮ Geological Dept. ನಲ್ಲಿ green area, ಅಥವಾ grey area ಎಂದು ಏನಿದೆ, ಅದನ್ನು ಸಡಿಲ ಮಾಡುತ್ತೇವೆ. ಇನ್ನು ಕೆರೆಗಳಲ್ಲಿ ಸಿಲ್ಟ್ ತೆಗೆಯುವ ಬಗ್ಗೆ ಹೇಳಿರುತ್ತೀರಿ. ಎನ್‌ಆರ್‌ಇಪಿ ಮತ್ತು ಆರ್‌ಎಲ್‌ಇಜಿಪಿಯು ಅದಕ್ಕೆ ಆದ್ಯತೆಯನ್ನು ಕೊಟ್ಟು ಇದೆಲ್ಲಾ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಮತ್ತೆ ಮೈನರ್ ಇರಿಗೇಷನ್‌ಗಾಗಿ ಕೋಲಾರ ಜಿಲ್ಲೆಗೆ ಹಣವನ್ನು ಕಡಿಮೆ ಕೊಟ್ಟಿದ್ದೀರಿ ಎಂದು ಹೇಳಿರುತ್ತಾರೆ, ಹೆಚ್ಚು ಹಣ ಕೊಡಬೇಕಿದ್ದರೆ ಕೊಡುತ್ತೇವೆ. ನೀವು ದೃಢ ವಿಶ್ವಾಸವನ್ನು ಈ ಸರ್ಕಾರದ ಮೇಲೆ ಇಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಬೈರೇಗೌಡರು ಕೂಡ ತಮಗೆ ಹೇಳಿಕೊಡುತ್ತಿದ್ದಾರೆಂದು ಕಾಣುತ್ತದೆ, ಅವರ ಸಮಸ್ಯೆ ನಿಮ್ಮ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಮಾಡಿಕೊಡುತ್ತೇನೆ. ಚಿಂತೆ ಪಡಬೇಡಿ ಎಂದು ಹೇಳುತ್ತೇನೆ.

ಈ ಚೀಫ್ ಇಂಜಿನಿಯರ್ ಬಗ್ಗೆ ಹೇಳಿದ್ದಾರೆ. ಸ್ವಾಮಿ, ನಾನು ಪೂರ್ಣ ತನಿಖೆ ಮಾಡಿಸುತ್ತೇನೆ. ಸರ್ಕಾರಕ್ಕೆ ಯಾರನ್ನೂ ಹಾರ್ಮ್ ಮಾಡಬೇಕೆಂದು ಇಲ್ಲ. ಪೂರ್ಣ ಮಾಹಿತಿ ತರಿಸಿ ನೋಡುತ್ತೇನೆ. ಒಂದುವೇಳೆ ರಾಜಕೀಯ ಉದ್ದೇಶಕ್ಕೋಸ್ಕರವಾಗಿ ಅಂದಿನ ಚೇರ್ಮನ್ನರ ಮೇಲೆ ಯಾವುದಾದರೂ ನಿರ್ಣಯ ತೆಗೆದುಕೊಳ್ಳಬೇಕೆಂದು ಮಾಡಿದ್ದರೆ, ಅದರಲ್ಲಿ ಅವರದ್ದು ನೇರವಾದ ಪಾತ್ರ ಇದ್ದರೆ ಸರ್ಕಾರ ಇದರ ಬಗ್ಗೆ ತನ್ನ ನಿರ್ಣಯ ತೆಗೆದುಕೊಳ್ಳಲು ಕಾನೂನು ಇಲಾಖೆಯಿಂದ ಅಡ್ವೋಕೇಟ್ ಜನರಲ್ ಅವರನ್ನು ಕರೆಯಿಸಿ ವಿಚಾರ ಮಾಡುತ್ತದೆ. ಇದರ ಬಗ್ಗೆ ಏನು ನಿರ್ಣಯ ಮಾಡಬೇಕೋ ಅದನ್ನು ತೆರೆದ ಮನಸ್ಸಿನಿಂದ ಈಗ ನಾನು ಆಲೋಚನೆ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇನ್ನು ಎಲ್.ಒ.ಸಿ. ಸಿಸ್ಟಮ್ ತೆಗೆಯುವುದಕ್ಕೆ ಕಷ್ಟ ಇದೆ, ಪಿ.ಡಬ್ಲ್ಯೂ.ಡಿ ನಲ್ಲಿ ಮೇಲಿಂದಮೇಲೆ, ಈ ತಿಂಗಳಿನದ್ದು ಮುಂದಿನ ತಿಂಗಳಿಗೆ ಹಾಕತಕ್ಕಂಥಾದ್ದು ವ್ಯವಸ್ಥೆ ಇರುತ್ತದೆ. ಇದು ಹೊಸದೇನೂ ಅಲ್ಲ. ಮಾನ್ಯ ಶ್ರೀ ವೀರಪ್ಪಮೊಯಿಲಿಯವರು ಓವರ್‌ಡ್ರಾಫ್ಟನ್ನು ಯಾವ ತರಹ ಕಡಿಮೆ ಮಾಡಬೇಕೆಂದು ಇದನ್ನು ತೆಗೆದುಕೊಂಡು ಬಂದಿರುವುದು. ಇದನ್ನು ನಾವು ಹೊಸದಾಗಿ ಮಾಡಿದ್ದು ಏನೂ ಅಲ್ಲ. ಸ್ವಲ್ಪ ಇದರ ಬಗ್ಗೆ ಇನ್ನು ಉತ್ತಮಗೊಳಿಸುವುದಕ್ಕೆ ಶಕ್ತಿಮೀರಿ ಪ್ರಯತ್ನಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸಾವಿರಾರು ಕಿಲೋ ಮೀಟರ್ ರಸ್ತೆಗಳಿಗೆ ಜಲ್ಲಿ ಸಂಗ್ರಹಣೆ ಆಗಿದೆ. ಆದರೆ ಇದಕ್ಕೆ ಸಾಕಷ್ಟು ಲಾರಿ, ರೋಲರ್‌ಗಳು ಇಲ್ಲದ ಕಾರಣ ಎಲ್ಲ ಕೆಲಸ ಸ್ಥಗಿತವಾಗಿದೆ. ಸಾಕಷ್ಟು ಲಾರಿ, ರೋಲರ್‌ಗಳನ್ನು ಖರೀದಿ ಮಾಡಿ ಕೆಲಸ ಕೈಗೊಳ್ಳುವುದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ? ಕೆಲವು ಲಾರಿ, ರೋಲರ್‌ಗಳು ಇದ್ದರೂ ಅವುಗಳ ರಿಪೇರಿ ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಶಿಕಾರಿಪುರದ ಇರಿಗೇಶನ್ ಡಿಪಾರ್ಟ್‌ಮೆಂಟಿನ ರೋಲರ್‌ನ್ನು, ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಚರ್ಚೆ ಆಗಿದ್ದರೂ ಸಹಿತ ಏನೂ ಮಾಡಿಲ್ಲ ಈಗ ಇರುವುದನ್ನು ರಿಪೇರಿ ಮಾಡಿಲ್ಲ. ವರುಣಾ ಡಿವಿಜನ್‌ನಲ್ಲಿ ಸ್ಟೋನ್ ಕ್ರಶರ್ ೬-೭ ವರ್ಷಗಳಿಂದ ಖರೀದಿ ಮಾಡಿದಂಥಾದ್ದು ಹಾಗೆಯೇ ಇದೆ ಎರೆಕ್ಷನ್ ಮಾಡಿ ಹಾಗೆಯೇ ನಿಂತಿದೆ ಆದ್ದರಿಂದ ಈ ಲಾರಿ, ರೋಲರ್‌ಗಳನ್ನು ಖರೀದಿ ಮಾಡುವಂಥಾದ್ದು ಮತ್ತು ರಿಪೇರಿ ಮಾಡಿಸುವಂಥಾದ್ದು ಮಾಡಬೇಕು. ಆ ಮೇಲೆ ನಮ್ಮಲ್ಲಿ ಸನ್ಯಾಸಿಕೊಪ್ಪ ಸಣ್ಣ ನೀರಾವರಿ ಯೋಜನೆಗೆ ಈಗಾಗಲೇ ಮಂಜೂರಾತಿ ಕೊಟ್ಟಿದ್ದಾರೆ ಎಂದು ಜನ ತಿಳಿದುಕೊಂಡಿದ್ದಾರೆ. ಇದಕ್ಕೆ ಲಂಪಸಮ್ ಗ್ರಾಂಟ್ ಮಂಜೂರು ಮಾಡುವ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಇದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ರೋಲರ್‍ಸ್, ಲಾರಿಗಳು ಕಡಿಮೆ ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೋದಸಾರಿ ಒಂದು ವರ್ಷ ಒಂದು ಕೋಟಿ ರೂಪಾಯಿಗಳ ರೋಲರ್ ಖರೀದಿಗೆ ಪ್ರಯತ್ನ ಮಾಡಿದೆ. ಇದರಿಂದ ಒಂದೊಂದು ಜಿಲ್ಲೆಗೆ ಒಂದೊಂದು ಕೊಡಲಿಕ್ಕೆ ಸಾಧ್ಯವಾಯಿತು. ನಾವು ಅಧಿಕಾರಕ್ಕೆ ಬಂದಮೇಲೆ ತೆಗೆದುಕೊಂಡಿರತಕ್ಕಂಥ ಕೆಲಸ ಒಂದಕ್ಕೆ ಎರಡು ಪಟ್ಟು ಹೆಚ್ಚು ಮಾಡಿದ್ದೇವೆ. ಇದಕ್ಕೆ ಅನುಸರಿಸಿ ರೋಲರ್ ಪ್ರಮಾಣ ಹೆಚ್ಚು ಮಾಡಬೇಕು, ಮತ್ತು ಇದರಿಂದ ಜೆಲ್ಲಿ ಸಂಗ್ರಹಣೆ ಮಾಡಿ ಕನ್ಸಾಲಿಡೇಷನ್ ಮಾಡಲಿಕ್ಕೆ ಆಗಲಿಲ್ಲ. ಹೊಸ ರೋಲರ್‌ಗಳನ್ನು ಕೊಂಡುಕೊಳ್ಳಲಿಕ್ಕೆ ಪರಿಶೀಲನೆ ಮಾಡುತ್ತೇನೆ.

ಎರಡನೆಯದಾಗಿ ಈಗ ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ಮಾಡಿ ಅದಕ್ಕೆ ಒಬ್ಬ ಚೀಫ್ ಇಂಜಿನಿಯರ್‌ನ್ನು ಇಟ್ಟಿದ್ದೇವೆ. ಮೂರು ತಿಂಗಳಿಗೊಮ್ಮೆ ಅವರು ಈ ವಿಚಾರದಲ್ಲಿ ರಿವ್ಯೂ ಮಾಡಿ ವರದಿ ಒಪ್ಪಿಸುತ್ತಾರೆ. ಮಾನ್ಯ ಸದಸ್ಯರು ಹೇಳಿದ ಎರಡು ಘಟನೆ ಏನಿದೆ, ಇದರ ಬಗ್ಗೆ ಏನೂ ರಿಪೋರ್ಟ್ ಆಗಿಲ್ಲವೆಂದಾದರೆ, ನಾನು ರಿಪೋರ್ಟ್ ಮಾಡಿಸುತ್ತೇನೆ. ರಿಪೇರಿ ಮಾಡಿಸಲಿಕ್ಕೆ ಯೋಗ್ಯವಲ್ಲ ಎನ್ನುವುದಾದರೆ ಅದನ್ನು ಹರಾಜು ಮಾಡಬೇಕೆಂದು ಇದ್ದರೂ, ಕೆಲವು ನಿಯಮಾವಳಿಗಳ ಪ್ರಕಾರ ಕೆಲವು ತೊಂದರೆಗಳು ಇವೆ. ಈ ವಿಚಾರ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಬರಬೇಕು, ಅಲ್ಲಿಂದ ಕ್ಲಿಯರೆನ್ಸ್ ಆಗಬೇಕು. ನಂತರ ಅನುಪಯುಕ್ತ ಸಾಮಗ್ರಿಗಳನ್ನು ಗುರುತಿಸಿ ಹರಾಜು ಮಾಡ ಬೇಕೆಂದರೂ ಕೆಲವು ನಿಯಮಾವಳಿಗಳನ್ನು ಪಾಲಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಪ್ರದೇಶಕ್ಕೆ ಸಂಬಂಧಪಟ್ಟ ರೋಲರ್ ರಿಪೇರಿ ಅಥವಾ ಹರಾಜು ಮಾಡಿ ಹೊಸ ರೋಲರ್ ಕೊಡಿಸುವ ಬಗ್ಗೆ ಯೋಚನೆ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಲೋಕೋಪಯೋಗಿ ಸಚಿವರು ಡಿಪ್ಲೋಮೊ ಪದವೀಧರರು. ಡಿಪ್ಲೋಮಾ ಪದವಿ ಪಡೆದು ಈ ಇಲಾಖೆಯಲ್ಲಿ ಕೆಲಸ ಮಾಡುವವರು ಇದ್ದಾರೆ. ಈಗ ಕೇಂದ್ರ ಸರ್ಕಾರದಲ್ಲಿ ಪದವೀಧರರು ಮತ್ತು ಪದವೀಧರರಲ್ಲದ ಇಂಜೀನಿಯರುಗಳು ಇದ್ದಾರೆ, ಅವರನ್ನು ಒಂದೇ ರೀತಿಯಾಗಿ ಪರಿಗಣಿಸಬೇಕೆಂದು ಒತ್ತಾಯ ಬಂದಿದ್ದರಿಂದ, ಅದಕ್ಕೆ ಒಪ್ಪಿ ಅದೇ ರೀತಿಯಾಗಿ ಪರಿಗಣಿಸಲಾಗುತ್ತದೆ. ಆಂಧ್ರಪ್ರದೇಶದಲ್ಲಿ ಪದವೀಧರರು ಹಾಗೂ ಡಿಪ್ಲೋಮಾ ಹೋಲ್ಡರ್‍ಸ್ ಏನಿದ್ದಾರೆ, ಅವರಿಗೆ ಕೇವಲ ೫೦ ರೂಪಾಯಿಗಳ ಅಂತರ ಇದ್ದರೂ ಅದೇ ರೀತಿಯಾಗಿ ನಡೆಸುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಇಬ್ಬರಿಗೂ ಒಂದೇ ವೇತನ ಶ್ರೇಣಿ ಇದ್ದರೂ, ಪದವೀಧರರಿಗೆ ಮಾತ್ರ ಐದು ವಾರ್ಷಿಕ ಹೆಚ್ಚಿನ ಮುಂಬಡ್ತಿ ಕೊಡಬೇಕೆಂದು ಮಾಡಿದ್ದಾರೆ ನಮ್ಮಲ್ಲಿ ೪೫೦೦ ಕಿರಿಯ ಅಭಿಯಂತರರಿಗೆ ಕೇವಲ ೨೫೦ ಸಹಾಯ ಕಾರ್ಯನಿರ್ವಾಹಕ ಅಭಿಯಂತರರಾಗಿ ಕೊಡಬೇಕೆಂದು ಮಾಡಿದ್ದೀರಿ. ಇದರಿಂದ ಶೇಕಡ ೯೫ರಷ್ಟು ಈ ಪ್ರಮೋಷನ್ ಡಿಪ್ಲೋಮೊ ಹೋಲ್ಡರ್‍ಸ್‌ಗೆ ಏನು ಸಿಗಬೇಕೋ ಅದು ಸಿಗುತ್ತಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ನೋಡಬೇಕು. ಡಿಪ್ಲೋಮೊ ಹೋಲ್ಡರ್‍ಸ್ ಮಾಡುವ ಕೆಲಸ ಒಂದೇ, ಪದವೀಧರರು ಮಾಡುವ ಕೆಲಸವೂ ಒಂದೇಯಾಗಿದೆ. ಈಗಿರುವ ಒಂದನೆಯ ಆರರಷ್ಟು ಪ್ರಮಾಣವನ್ನು ಜಾಸ್ತಿ ಮಾಡಬೇಕು. ಇದನ್ನು ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟರಾಮಯ್ಯನವರು ಕೇಳಿದ ಪ್ರಶ್ನೆಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಈಗ ಏನಾಗಿದೆ ಎಂದರೆ ಇಂಜಿನಿಯರ್ ಗ್ರೇಡ್ ಸಂಬಳ ಪೇ ಕಮೀಷನ್ ಮುಂದೆ ಹೋಗಬೇಕು. ಪೇ ಕಮೀಷನ್ ಕೊಡುವ ವರದಿಯ ಆಧಾರದಮೇಲೆ ಸರ್ಕಾರ ಎಷ್ಟರಮಟ್ಟಿಗೆ ಈ ಪ್ರಮೋಷನ್ ಸೌಲಭ್ಯವನ್ನು ಹೆಚ್ಚು ಕೊಡಬೇಕೆಂಬುದನ್ನು ಪರಿಶೀಲನೆ ಮಾಡುತ್ತದೆ. ಇದರ ಬಗ್ಗೆ ಸಹಾನುಭೂತಿಯನ್ನು ನಾವು ಇಟ್ಟುಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ ನಮ್ಮ ಬಿಜಾಪುರ ಜಿಲ್ಲೆ ಅತ್ಯಂತ ಬರಪೀಡಿತ ಜಿಲ್ಲೆ. ಇವೊತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ನಮ್ಮ ಜಿಲ್ಲೆಯಲ್ಲಿ ಪೂರ್ತಿಯಾದರೂ ಸಿಂಧಗಿ, ಇಂಡಿಗೆ, ಏನು ನೀರು ಬರುತ್ತದೆ ಅಷ್ಟು ನೀರು ಬಿಜಾಪುರಕ್ಕೆ ಬರುತ್ತಿಲ್ಲ. ಎರಡು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಮುಳುವಾಡ ಲಿಫ್ಟ್ ಇರಿಗೇಷನ್ ಅತಿಮುಖ್ಯವಾಗಿ ಆಗಬೇಕಾಗಿದೆ. ಪತ್ರಿಕೆಗಳಲ್ಲಿ ಇದು ಪ್ರಾರಂಭವಾಗುತ್ತದೆ ಎಂದು ಸಂದ್ಧಿ ಇದೆ. ಈ ಯೋಜನೆ ಆದರೆ ಮಾತ್ರ ನಮಗೆ ಸಾವಿರಾರು ಎಕರೆ ಜಮೀನಿಗೆ ನೀರು ದೊರೆಯುತ್ತದೆ. ಬಡ್ಜೆಟ್ಟಿನಲ್ಲಿ ಇದಕ್ಕೆ ಎಷ್ಟು ಇಟ್ಟಿದ್ದೀರಿ, ಮತ್ತು ಯಾವಾಗ ಇದನ್ನು ಪ್ರಾರಂಭ ಮಾಡುತ್ತೀರೆಂದು ನಿರ್ಧಿಷ್ಟವಾಗಿ ಹೇಳುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.– ಇದೇ ವಿಚಾರವನ್ನು ಮಾನ್ಯ ವೀರಪ್ಪಮೊಯಿಲಿ ಅವರು ಸಹ ಎತ್ತಿದ್ದರು. ಏನೆಂದರೆ, ಕೃಷ್ಣಾ ಯೋಜನೆಯಿಂದ ಬಿಜಾಪುರ ಜಿಲ್ಲೆಯಲ್ಲಿ ಎರಡೂವರ ಲಕ್ಷ ಎಕರೆಗೆ ನೀರಾವರಿಯಾದರೂ ಸಹ ಸುಮಾರು ಎರಡು ಲಕ್ಷ ಎಕರೆಗಳಷ್ಟು ಪ್ರದೇಶ ಮುಳುಗಡೆ ಆಗುತ್ತದೆ. ಇದು ಬಿಜಾಪುರ ಜಿಲ್ಲೆಗೆ ಆದಂಥ ಅನ್ಯಾಯ ಎಂದು ಹೇಳುವುದಕ್ಕೆ ಬದಲು, ಆಗಿರುವಂತಹ ಹಾನಿಯನ್ನು ಸರಿಪಡಿಸಲು ಎಂದರೆ ೨ ಲಕ್ಷ ೮೧ ಸಾವಿರ ಜನರಿಗೆ ಏನು ಹಾನಿಯಾಗಿದೆ. ಅದನ್ನು ಸರಿಪಡಿಸಬೇಕೆಂದಿದ್ದೇವೆ. ಅದಕ್ಕಾಗಿ ಈ ಬಗ್ಗೆ ವಾಟರ್ ಪ್ಲಾನಿಂಗ್‌ನಲ್ಲಿ ಕೆಲವು ಮಾರ್ಪಾಡು ಮಾಡುವಂತಹ ನಿರ್ಣಯವನು ಸರ್ಕಾರದವರು ಈಗಾಗಲೇ ತೆಗೆದುಕೊಂಡಿದ್ದಾರೆ. ಇದರಿಂದ ಮಾನ್ಯ ಸದಸ್ಯರಿಗೆ ಸಮಾಧಾನ ಆಗಬಹುದು ಮುಳವಾಡ್ ಲಿಫ್ಟ್ ಇರಿಗೇಷನ್ ಸ್ಕೀಮು ಸೇರಿದಂತೆ ಅಲ್ಲಿ ೫ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ತೆಗೆದುಕೊಂಡು, ವಿಶ್ವಬ್ಯಾಂಕ್‌ನ ೪೮೦ ಕೋಟಿ ರೂಪಾಯಿಗಳ ಒಂದು ಯೋಜನೆ ಏನಿದೆ, ಅದರಲ್ಲಿ ೩೨ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಲು ಪ್ರಾವಿಜನ್ ಮಾಡಿದ್ದೇವೆ. ಹೆಡ್–ವರ್ಕ್ಸ್ ಮತ್ತು ಬೇರೆಬೇರೆ ಕೆಲಸಗಳಿಗೆ ಈ ಹಣವನ್ನು ಖರ್ಚು ಮಾಡುತ್ತೇವೆ.

ಶ್ರೀ ಎಸ್. ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿ ಮಾರ್ಕಂಡೇಯ ಯೋಜನೆಯನ್ನು ಕಾರ್ಯಗತ ಮಾಡಿದರೆ, ಬರಗಾಲ ಪೀಡಿತ ಪ್ರದೇಶಗಳಾದ ಬೈಲಹೊಂಗಲ, ಸವದತ್ತಿ, ರಾಮದುರ್ಗ ಮತ್ತು ಗೋಕಾಕ್ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಅದ್ದರಿಂದ ಈ ಕೆಲಸವನ್ನು ಈ ವರ್ಷವೇ ಪೂರ್ಣವಾಗಿ ತೆಗೆದುಕೊಂಡು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಪರಿಶೀಲನೆ ಮಾಡುತ್ತೇನೆ

ಶ್ರೀ ಎಸ್. ಪ್ರಭಾಕರ್ ರಾಣೆ.—ಮಾನ್ಯ ಸಚಿವರು ನೀರಾವರಿ ಸಾಧನೆ ಬಗ್ಗೆ ಹಣ ಬಹಳಷ್ಟು ಹೇಳಿಕೊಂಡಿದ್ದಾರೆ. ಈ ಬಗ್ಗೆ ಅವರು ಸಾಧನೆ ಮಾಡಿದ್ದಾರೆಯೋ ಅಥವಾ ಇಲ್ಲವೇ ಎಂಬುದನು ನಾನು ವಿಮರ್ಶೆ ಮಾಡುವುದಿಲ್ಲ. ಆದರೆ ನಮ್ಮ ಉತ್ತರಕನ್ನಡ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆಯ ಸಾಧನೆ ಅಲ್ಲಿ ಅತಿ ಕಡಿಮೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಅವರು ವಿವರಣೆ ಕೇಳುವುದಕ್ಕೆ ಬದಲು ಭಾಷಣ ಮಾಡುತ್ತಿದ್ದಾರೆ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಿ?

ಶ್ರೀ ಎಸ್. ಪ್ರಭಾಕರ್ ರಾಣೆ.—ನಾವು ನಮ್ಮ ಜಿಲ್ಲೆಗೆ ದೊಡ್ಡ ನೀರಾವರಿ ಯೋಜನೆಗಳನ್ನಾಗಲೀ ಮಧ್ಯಮ ನೀರಾವರಿ ಯೋಜನೆಗಳನ್ನಾಗಲೀ ಕೇಳುತ್ತಿಲ್ಲ. ನಾವು ಕೇಳುತ್ತಿರುವುದು ಚಿಕ್ಕ ನೀರಾವರಿ ಯೋಜನೆಗಳ ಪೈಕಿ ಅತಿ ಚಿಕ್ಕ ನೀರಾವರಿ ಯೋಜನೆಗಳನ್ನು ನಮ್ಮಲ್ಲಿ ಈಗ ವಿಶೇಷವಾಗಿರುವಂತಹ ಕಾರ್ಲೆಂಡ್ ಸ್ಕೀಮುಗಳು ಏನಿವೆ, ಅವುಗಳನ್ನು ಉಪ್ಪು ನೀರಿನಿಂದ ಸಂರಕ್ಷಿಸುವಂತಹ ಕೆಲಸ ನಡೆದಿಲ್ಲ. ಹೊಸ

ಸ್ಕೀಮುಗಳನ್ನು ನಾವು ಕೇಳುತ್ತಿಲ್ಲ. ಇದ್ದಂಥ ಯೋಜನೆಗಳ ರಿಪೇರಿ ಕೂಡ ನಡೆಯುತ್ತಿಲ್ಲ. ನನ್ನ ಕಾರವಾರ ತಾಲ್ಲೂಕ್‌ನಲ್ಲಿ ಇಂತಹ ೧೪ ಯೋಜನೆಗಳಿವೆ ಈ ಬಗ್ಗೆ ನಾನು ಕಳೆದ ಸಲವೂ ಸಹ ಪ್ರಸ್ತಾಪ ಮಾಡಿದ್ದೆ. ಆದರೆ ಇವು ಕಳೆದ ಎರಡು ವರ್ಷಗಳಿಂದ ರಿಪೇರಿ ಕಾಣದೆ ನಿರುಪಯುಕ್ತವಾಗಿದೆ. ನಮ್ಮಲ್ಲಿ ಸಾವಿರಾರು ಎಕರೆಗಳಷ್ಟು ಭೂಮಿ ಉಪ್ಪು ನೀರಿನಿಂದ ಹಾಳಾಗಿದೆ. ಸರ್ಕಾರದ ನಿಯಮಗಳ ಚೌಕಟ್ಟಿನಲ್ಲಿ ಅಲ್ಲಿನ ಸ್ಥಳೀಯ ಅಧಿಕಾರಿಗಳಿಗೆ ಉಪ್ಪು ನೀರಿನಿಂದ ಕೂಡಿರುವ ಭೂಮಿಯನ್ನು ಸಂರಕ್ಷಿಸುವುದಕ್ಕೆ ವಿಶೇಷವಾದಂಥ ಗ್ರ್ಯಾಂಟ್‌ನ್ನು ಸಹ ನೀಡದ ಕಾರಣ ಅವರು ಯಾವ ಕ್ರಮವನ್ನೂ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ನಮ್ಮಲ್ಲಿ ಬೇರೆ ಯಾವುದೇ ಹೊಸ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಬದಲು ಇರುವ ಯೋಜನೆಗಳನ್ನು ರಿಪೇರಿ ಮಾಡಿಸಲು ಹೆಚ್ಚಿನ ಆದ್ಯತೆ ಕೊಡಬೇಕು. ಎರಡು ವರ್ಷಗಳ ಹಿಂದೆ ಇಂತಹ ಭೂಮಿಯನ್ನು ಸಂರಕ್ಷಿಸುವ ಸಲುವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಬೋರ್ಡನ್ನು ರಚಿಸಲಾಗಿತ್ತು. ಇಲ್ಲಿಯವರೆಗೆ ಈ ಬೋರ್ಡಿನವರು ಮಾಡಿದ ಕೆಲಸಗಳೇನೆಂಬುದು ಯಾರಿಗೂ ಗೊತ್ತಿಲ್ಲ. ಅದೇ ಮಹಾರಾಷ್ಟ್ರದಲ್ಲಿ ಇಂತಹ ಉಪ್ಪು ನೀರಿನಿಂದ ಕೂಡಿದ ಘಜನಿ ಭೂಮಿಯನ್ನು ಸಂರಕ್ಷಿಸಲು ವಿಶೇಷವಾದಂಥ ಯೋಜನೆ ಇದೆ. ಆದ್ದರಿಂದ ಅಲ್ಲಿಗೆ ನಮ್ಮ ರಾಜ್ಯದ ಅಧಿಕಾರಿಗಳನ್ನು ಅಧ್ಯಯನ ಮಾಡಿ ಬರಲು ಕಳುಹಿಸಿಕೊಡಬೇಕು. ಅಲ್ಲಿನ ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತಂದರೆ, ನಮ್ಮಲ್ಲಿ ಮೀನಿನ ಅಭಿವೃದ್ಧಿಯನ್ನು ಮಾಡಬಹುದು ಮತ್ತು ಕೃಷಿ ಬೆಳೆಯ ಅಭಿವೃದ್ಧಿಯನ್ನು ಸಹ ಮಾಡಬಹುದು. ಆದ್ದರಿಂದ ಈ ಬಗ್ಗೆ ಏನಾದರೂ ಯೋಜನೆ ಹಾಕಿಕೊಂಡಿದ್ದೀರಾ ಎಂದು ಕೇಳುತ್ತೇನೆ? ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ಡಿಸೆಂಬರ್ ೨೫ರಂದು ನಮ್ಮ ಜಿಲ್ಲೆಗೆ ಬಂದಿದ್ದಾಗ ಕಾಳಿನದಿ ಯೋಜನೆಯಿಂದ ಜಮೀನನ್ನು ಕಳೆದುಕೊಂಡ ಜನರ ಪುನರ್ವಸತಿ ಸಂಬಂಧಪಟ್ಟಂತೆ ಒಂದು ಸಭೆ ಕರೆದಿದ್ದರು. ಆ ಸಂದರ್ಭದಲ್ಲಿ ಈ ಜನರಿಗೆ ರಾಮನಗರದಲ್ಲಿ ಪುನರ್ವಸತಿ ಕಲ್ಪಿಸಿದ ಮೇಲೆ, ನಾಲ್ಕು ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟರು. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿನ ಜನತೆಗೆ ಆಶ್ವಾಸನೆ ಕೊಟ್ಟ ಮೇಲೂ ಸಹ ಆ ಕೆಲಸಗಳನ್ನು ಈ ಸಲದ ಬಡ್ಜೆಟ್‌ನಲ್ಲಿ ಸೇರಿಸಿರುವುದು ಕಂಡುಬರುತ್ತಿಲ್ಲ. ಇದರಿಂದ ಈ ಇಲಾಖೆ ನಮ್ಮ ಕ್ಷೇತ್ರದ ಬಗ್ಗೆ ಪಕ್ಷಪಾತ ಧೋರಣೆಯನ್ನು ಅದುಸರಿಸುತ್ತಿದೆ ಎಂದು ಹೇಳಬಹುದು.

ಅಧ್ಯಕ್ಷರು.—ತಾವು ವಿವರಣೆ ಮಾತ್ರ ಕೇಳಿ? ಭಾಷಣ ಬೇಡ.

ಶ್ರೀ ಎನ್. ಪ್ರಭಾಕರ್ ರಾಣೆ.—ಕಾರವಾರ ಮತ್ತು ಸೂಪ ಜನರ ಬಗ್ಗೆ ಈ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿರುವುದರಿಂದ, ಆ ಭಾಗದ ಜನರು ಗೋವಾಕ್ಕೆ ಏತಕ್ಕೆ ಹೋಗಬಾರದೆಂದು ಯೋಚನೆ ಮಾಡುತ್ತಿದ್ದಾರೆ. ಈ ಸರ್ಕಾರದ ಧೋರಣೆಯಿಂದ ಇಂತಹ ಒಂದು ಪ್ರಚೋದನೆ ಆ ಜನರಲ್ಲಿ ಉಂಟಾಗುತ್ತಿದೆ. ಆದ್ದರಿಂದ ಇದನ್ನು ದೂರ ಮಾಡುವ ಸಲುವಾಗಿ, ಯಾವುದೇ ಪಕ್ಷಪಾತ ಧೋರಣೆಯನ್ನು ಮಾಡದೆ ನಮ್ಮ ಭಾಗದ ಜನರಿಗೆ ಸರಿಯಾದ ಸಹಾಯ ಮತ್ತು ಅನುದಾನವನ್ನು ಕೊಡುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ಕಾಲರ್ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡನ್ನು ರಚನೆ ಮಾಡಬೇಕೆಂದು ನನ್ನ ಸಹೋದ್ಯೋಗಿಗಳಾದಂಥ ಶ್ರೀ ದೇಶಪಾಂಡೆ ಅವರು ಕಳೆದ ಒಂದು ವರ್ಷದಿಂದ ನನ್ನ ಬಳಿ ಹೆಚ್ಚು ಒತ್ತಾಯ ಮಾಡಿದ್ದಾರೆ. ಅವರು ಈ ನನ್ನ ಜೊತೆ ಈ ಬಗ್ಗೆ ಸಮಾಲೋಚನೆ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇದಕ್ಕಾಗಿ ಇಷ್ಟೊಂದು ದೊಡ್ಡ ಪ್ರಮಾಣದ ಬೋರ್ಡನ್ನು ರಚನೆ ಮಾಡುವಂತಹ ಅವಶ್ಯಕತೆ ಬರಲಾರದೆಂಬ ಮಾತನ್ನು ಹೇಳಿದರು. ಆದರೂ ಸಹ ಈ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡುತ್ತೇವೆ. ಇದರ ಒಂದು ಉಪಯುಕ್ತತೆ ಮತ್ತು ಅವಶ್ಯಕತೆ ಇದೆ ಎಂದು ಕಂಡು ಬಂದರೆ, ಇದರ ಬಗ್ಗೆ ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಹಿಂದೆ ಬೀಳುವುದಿಲ್ಲ. ಎಂದು ಹೇಳುತ್ತೇನೆ. ಮುಖ್ಯವಾಗಿ ಇದರ ಉಪಯೋಗ ಆಗಬೇಕು,

ಇನ್ನು ಎರಡನೆಯದಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ನೀರಾವರಿ ಯೋಜಗಳು ಇಲ್ಲ. ಅದಕ್ಕೆ ಪರ್ಯಾಯವಾಗಿ ಅಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಪ್ರಾಜೆಕ್ಟ್‌ಗಳನ್ನು ಮಾಡುತ್ತೇವೆ. ಇದರಿಂದ ಅಲ್ಲಿಯ ಜನತೆಗೆ ಸಾಕಷ್ಟು ಹಾನಿ ಆಗುವುದರಿಂದ ಅಲ್ಲಿ ಮೈನರ್ ಇರಿಗೇಷನ್‌ಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದುಕೊಂಡು, ಈ ಸಲದ ಬಡ್ಜೆಟ್‌ನಲ್ಲಿ ಹೆಚ್ಚು ಹಣವನ್ನು ಇಟ್ಟಿದ್ದೇವೆ. ಮತ್ತೊಂದು

ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಏನೆಂದರೆ, ಅಲ್ಲಿನ ಪುನರ್ವಸತಿ ಜನತೆಗೆ ಅನುಕೂಲ ಮಾಡಿ ಕೊಡಲು ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಕೈಕೊಳ್ಳುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ಡಿಸೆಂಬರ್ ತಿಂಗಳಲ್ಲಿ ಏನು ಭರವಸೆ ಕೊಟ್ಟು ಬಂದಿದ್ದಾರೆ, ಆ ಕೆಲಸವನ್ನು ಈ ವರ್ಷ ಕಾರ್ಯಗತ ಮಾಡುತ್ತೇವೆ. ಆ ಬಗ್ಗೆ ಮಾನ್ಯ ಸದಸ್ಯರು ಸಂಶಯ ಪಡಬೇಕಾಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಉತ್ತರ ಕನ್ನಡದ ಜಿಲ್ಲೆಯ ಬಗ್ಗೆ ರಾಜಕೀಯ ಉದ್ದೇಶದಿಂದ ಮಲತಾಯಿ ಧೋರಣೆಯನ್ನು ಅನುಸರಿಸಲಾಗುತ್ತಿದೆ ಎಂದು ಏನು ಹೇಳಿದ್ದಾರೆ, ಆ ವಾದ ಸರಿಯಲ್ಲ. ಆ ಜಿಲ್ಲೆಯನ್ನು ನಾವು ಅಲಕ್ಷ್ಯ ಮಾಡುವುದಿಲ್ಲ. ಅಲ್ಲಿನ ಪುನರ್ವಸತಿ ಜನತೆಯ ಅನುಕೂಲಕ್ಕಾಗಿ ಮುಖ್ಯ ಮಂತ್ರಿಗಳು ಮೂರು ಇಲ್ಲವೇ ನಾಲ್ಕು ಇಲ್ಲವೇ ಐದು, ಎಷ್ಟೇ ಲಿಫ್ಟ್ ಇರಿಗೇಷನ್‌ಗಳ ಬಗ್ಗೆ ಹೇಳಿರಲಿ, ಅದನ್ನು ನಾವು ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ— ಮಾನ್ಯ ಅಧ್ಯಕ್ಷರೇ, ಈ ಸರ್ಕಾರದವರು ತಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಎಲ್ಲೆಲ್ಲಿ ನೀರಾವರಿ ಸೌಲಭ್ಯ ದೊರೆಯುವುದಿಲ್ಲ, ಅಂತಹ ಕಡೆಗಳಲ್ಲಿ ಅಂದರೆ ಪ್ರತಿ–ಯೊಂದು ಮಂಡಲ್ ಪಂಚಾಯತ್ ವ್ಯಾಪ್ತಿಯಲ್ಲಿ ಕೊನೆಯ ಪಕ್ಷ ೨೫೦ ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸುವಂತಹ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ೧೯೮೬–೮೭ನೇ ಸಾಲಿನ ಬಜೆಟ್‌ನಲ್ಲಿ ಈ ಬಗ್ಗೆ ಒಂದು ಚಕಾರ ಶಬ್ದ ಸಹ ಇಲ್ಲ. ಆದ್ದರಿಂದ ಈ ಆಶ್ವಾಸನೆಯನ್ನು ಕೈಬಿಡಲಾಗಿದೆಯೋ ಹೇಗೆ ಎಂಬುದನ್ನು ತಾವು ತಿಳಿಸಬೇಕು?

ಶ್ರೀ ಎಚ್. ಡಿ. ದೇವೇಗೌಡ— ಈಗ ನಾವು ನೀರಾವರಿಗೆ ಹೆಚ್ಚು ಹಣ ತೊಡಗಿಸಿ ಕೆಲಸ ಮಾಡುತ್ತಿರುವುದರಿಂದ. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಜನತೆಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಆ ಬಗ್ಗೆ ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ. ನಾವು ಹೇಳಿರುವುದನ್ನು ಮಾಡುತ್ತೇವೆ.

ಶ್ರೀ ಪಂಪಾಪತಿ— ನಾನು ಎರಡು ವಿಷಯಗಳಲ್ಲಿ ವಿವರಣೆ ಕೇಳುತ್ತೇನೆ. ದಾವಣಗೆರೆ ನಗರ ಮಧ್ಯೆ ನಾಲ್ಕನೇ ಹೆದ್ದಾರಿ ಇದೆ. ಈ ರಸ್ತೆಯಲ್ಲಿ ಹೆಚ್ಚಿನ ವಾಹನಗಳ ಓಡಾಟ ಇರುವುದರಿಂದ ಅದನ್ನು ತಪ್ಪಿಸಲು ಬೇರೆ ಒಂದು ಹೆದ್ದಾರಿಯನ್ನು ನಿರ್ಮಿಸುವ ಕೆಲಸ ೮ ವರ್ಷಗಳ ಹಿಂದೆ ಪ್ರಾರಂಭವಾಯಿತು. ಆದರೆ ಆ ಕೆಲಸ ಇನ್ನೂ ಪೂರ್ಣವಾಗಿಲ್ಲ. ರೈಲ್ವೇ ಸೇತುವೆ ಕೆಲಸವೂ ಸಹ ಇನ್ನೂ ಪೂರ್ಣ ಆಗಿಲ್ಲ.

ಈ ಹೆದ್ದಾರಿಯು ನಗರದ ಮಧ್ಯದಲ್ಲಿ ಹಾದು ಹೋಗುವುದರಿಂದ ಪ್ರಾಣಾಪಾಯಗಳು ಹೆಚ್ಚಾಗುತ್ತವೆ. ಇನ್ನು ಭದ್ರಾ ಅಣೆಕಟ್ಟು ಅಚ್ಚುಗಟ್ಟು ಪ್ರದೇಶಕ್ಕೆ ಈ ಸಾರಿ ಕೇವಲ ೩೩ ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಇದರಿಂದ ಏನೇನು ಕೆಲಸಗಳು ಆಗುವುದಿಲ್ಲ. ಭದ್ರಾ ಅಣೆಕಟ್ಟು ಪ್ರದೇಶದಲ್ಲಿ ನೀರಿನ ಕಾಲುವೆಗಳೆಲ್ಲಾ ಸರಿಯಾದ ರೀತಿಯಲ್ಲಿ ಇಲ್ಲ. ಇವುಗಳನ್ನೆಲ್ಲಾ ರಿಪೇರಿ ಮಾಡಿಸಿ ಕೊಡಬೇಕು. ನೀರು ಸುಮ್ಮನೆ ವ್ಯಯವಾಗುತ್ತಿದೆ. ಈ ವರ್ಷವಾದರೂ ಹೆಚ್ಚಿನ ಹಣವನ್ನು ಇದಕ್ಕೆ ಒದಗಿಸುವುದರ ಮೂಲಕ ಕಾಲುವೆಗಳನ್ನು ರಿಪೇರಿ ಮಾಡಿಸಿಕೊಡಬೇಕು, ಇನ್ನು ದಾವಣಗೆರೆ ಹರಿಹರ ಮಧ್ಯದಲ್ಲಿ ೨ ರೈಲ್ವೇ ಕ್ರಾಸಿಂಗ್‌ಗಳು ಬರುತ್ತವೆ. ಈ ರೈಲ್ವೆ ಕ್ರಾಸಿಂಗ್‌ಗಳಿಂದ ಬಹಳ ತೊಂದರೆಯಾಗುತ್ತಿರುವುದರಿಂದ ಅಲ್ಲಿ ಓವರ್ ಬ್ರಿಡ್ಜ್‌ಗಳನ್ನು ಮಾಡಿಸಿ ಅನುಕೂಲವನ್ನು ಮಾಡಿಕೊಡಬೇಕು, ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗದೆ ಒಳ್ಳೆಯದಾಗುತ್ತದೆ. ಇದನ್ನು ಆದಷ್ಟು ಜಾಗ್ರತೆ ಮಾಡಿಕೊಟ್ಟರೆ ಒಳ್ಳೆಯದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ದಾವಣಗೆರೆಯಿಂದ ಹರಿಹರದವರೆಗೆ ೪ನೇ ಹೆದ್ದಾರಿ ಏನು ಹೋಗುತ್ತದೆ. ಅದು ತುಂಬಾ ಕೆಟ್ಟು ಹೋಗಿದೆ. ಈ ಹೆದ್ದಾರಿಯನ್ನು ಕೂಡಲೇ ರಿಪೇರಿ ಮಾಡುವುದಕ್ಕೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ— ಬೈಪಾಸ್‌ನ್ನು ಶೀಘ್ರವಾಗಿ ಈ ವರ್ಷವೇ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ. ಆಮೇಲೆ ಊರಿನ ಒಳಗಡೆ ರಿಪೇರಿ ಮಾಡಿಸಬೇಕು ಎಂದು ಹೇಳಿದ್ದಾರೆ, ಅದನ್ನೂ ಮಾಡಿಸುತ್ತೇನೆ. ನಿಶ್ಚಯವಾಗಿ ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಹೋದ ಸಾರಿಗಿಂತ ಈ ಸಾರಿ ಹೆಚ್ಚು ಹಣವನ್ನು ಒದಗಿಸಿರುತ್ತೇವೆ. ಇದಕ್ಕಾದರೂ ನೀವು ಸರ್ಕಾರಕ್ಕೆ ಒಳ್ಳೆಯ ಮಾತನ್ನು ಹೇಳಬೇಕಾಗಿತ್ತು.

ಶ್ರೀ ಪಂಪಾಪತಿ— ರೈಲ್ವೆ ಕ್ರಾಸಿಂಗ್ ಬಗ್ಗೆ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ— ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು— ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಸಮಯಕ್ಕೂ ಒಂದು ಮಿತಿ ಇದೆ.

ಶ್ರೀ ಎಂ ಮಲ್ಲಿಕಾರ್ಜುನಖರ್ಗೆ— ಅಧ್ಯಕ್ಷರೇ ಈ ಬೇಡಿಕೆ ಮೇಲೆ ಚರ್ಚೆ ನಡೆಯುತ್ತಿರುವಾಗ ನಾನು ಕಾರಣಾಂತರಗಳಿಂದ ಗುಲ್ಬರ್ಗಾಕ್ಕೆ ಹೋಗಬೇಕಾಗಿ ಬಂತು. ಆದ್ದರಿಂದ ಚರ್ಚೆಯಲ್ಲಿ ಭಾಗ ವಹಿಸಲಿಕ್ಕಾಗಲಿಲ್ಲ, ಈಗ ಕ್ಲಾರಿಫಿಕೇಷನ್ ಕೇಳುವುದಕ್ಕಾದರೂ ಅವಕಾಶ ಕೊಡಿ.

ಶ್ರೀ ಕೆ ಬಿ ಶಾಣಪ್ಪ— ಮಾನ್ಯ ಅಧ್ಯಕ್ಷರೇ, ನನಗೆ ಒಂದು ನಿಮಿಷವಾದರೂ ತಾವು ಅವಕಾಶ ಮಾಡಿಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ— ನಾನು ಮಾತನಾಡಿಬಿಡುತ್ತೇನೆ. ಆಮೇಲೆ ತಾವು ಕೇಳಿ. ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಬಹಳ ಚೆನ್ನಾಗಿ ಉತ್ತರ ಕೊಟ್ಟರು. ಆ ಉತ್ತರದ ಬಗ್ಗೆ ಯಾರದೂ ಭಿನ್ನಾಭಿಪ್ರಾಯ ಇಲ್ಲ. ಅವರು ಯಾವಾಗಲೂ ಅಷ್ಟೇ ಮಾತನಾಡುವಾಗ ಬಹಳ ಕನ್ವಿನ್ಸಿಂಗ್ ಆಗಿ ತಮಗೆ ಬೇಕಾದಂತಹ ರೀತಿಯಲ್ಲಿ ಫ್ಯಾಕ್ಟ್ಸ್ ಅಂಡ್ ಫಿಗರ್ಸ್‌ಗಳನ್ನು ಇಟ್ಟುಕೊಂಡು ಮಾತನಾಡತಕ್ಕವರು. ನಾನು ಸದನಕ್ಕೆ ಬರುವುದಕ್ಕಿಂತ ಮೊದಲೇ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ಬಹಳ ವಿವರವಾಗಿ ಉತ್ತರ ಹೇಳಿರಬಹುದು. ನಾನು ಸ್ವಲ್ಪ ಲೇಟ್ ಆಗಿ ಸದನಕ್ಕೆ ಬಂದಿದ್ದರಿಂದ ಪೂರ್ತಿಯಾಗಿ ವಿವರಣೆಯನ್ನು ಕೇಳಲಿಕ್ಕಾಗಲಿಲ್ಲ. ಅವರಿಗೇ ಗೊತ್ತಿರುವ ಹಾಗೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಫಸ್ಟ್ ಸ್ಟೇಜ್ ಕಂಪ್ಲೀಟ್ ಆಗಬೇಕಾಗಿದೆ. ಇದು ಕಂಪ್ಲೀಟ್ ಆಗಬೇಕಾದ ೧,೦೭೧ ಕೋಟಿ ರೂಪಾಯಿಗಳು ಬೇಕಾಗುತ್ತವೆ ಸೆಕೆಂಡ್ ಸ್ಟೇಜ್‌ಗೆ ೧೨೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಫಸ್ಟ್ ಸ್ಟೇಜಿಗೆ ಬೇಕಾಗಿರುವ ೧,೦೭೧ ಕೋಟಿ ರೂಪಾಯಿಗಳಲ್ಲಿ ಇದುವರೆಗೆ, ನಮ್ಮ ಸರ್ಕಾರ ಮತ್ತು ಇವರ ಸರ್ಕಾರದವರು ಸೇರಿ ೪೦೦ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೇವೆ. ಇನ್ನು ಉಳಿದ ೬೦೦ ಕೋಟಿ ರೂಪಾಯಿಗಳನ್ನು ಇನ್ನೂ ಬಿಡುಗಡೆ ಮಾಡಬೇಕಾಗಿದೆ. ೬೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಫಸ್ಟ್ ಸ್ಟೇಜ್ ಮುಕ್ತಾಯವಾಗುತ್ತದೆ. ಇನ್ನು ಸೆಕೆಂಡ್ ಸ್ಟೇಜ್ ವಿಷಯವನ್ನು ಬಿಟ್ಟು ಬಿಡಬೇಕಾಗುತ್ತದೆ. ಅದು ಪ್ರಾರಂಭವಾಗುವ ಹೊತ್ತಿಗೆ ನಾವು ಇರುತ್ತೇವೆಯೋ ಇಲ್ಲವೋ ಫಸ್ಟ್ ಸ್ಟೇಜ್‌ಗೇ ಈ ಪರಿಸ್ಥಿತಿ ಬಂದಿರುವಾಗ ಇನ್ನೂ ಸೆಕೆಂಡ್ ಸ್ಟೇಜಿನ ಮಾತೆಲ್ಲಿ? ಈ ಸಾರಿಯ ಬಜೆಟ್‌ನಲ್ಲಿ ಫಸ್ಟ್ ಸ್ಟೇಜ್‌ಗೆ ೬೧ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಕಾವೇರಿ ಬೇಸಿನ್‌ಗೆ ಮಾತ್ರ ಇವರು ಹೆಚ್ಚು ಹೆಚ್ಚು ಹಣವನ್ನು ಕೊಡುತ್ತಿದ್ದಾರೆ. ಈ ಸಾರಿ ಕಾವೇರಿ ಬೇಸಿನ್‌ಗೆ ೭೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದನ್ನು ಬೇಗನೆ ಮುಗಿಸಬೇಕು ಎಂದು ನಿಮ್ಮ ಅಭಿಪ್ರಾಯ. ಕಾವೇರಿ ಬೇಸಿನ್‌ನ್ನು ಬೇಗ ಮುಗಿಸಬೇಡಿ ಎಂದು ನಾನು ಹೇಳುವುದಿಲ್ಲ. ಕೃಷ್ಣ ಬೇಸಿನ್‌ನ್ನು ಬೇಗ ಮುಗಿಸಲಿಕ್ಕೆ ಹೆಚ್ಚು ಹಣವನ್ನು ಕೊಟ್ಟಿದ್ದರೆ ಒಳ್ಳೆಯದಿತ್ತು. ಕೃಷ್ಣ ಬೇಸಿನ್‌ಗೆ ನೀವು ಇಷ್ಟು ಕಡಿಮೆ ಹಣ ಕೊಟ್ಟರೆ ಇನ್ನೂ ೬೦೦ ಕೋಟಿ ರೂಪಾಯಿಗಳನ್ನು ಯಾವಾಗ ಕೊಡುತ್ತೀರಿ? ಈ ಯೋಜನೆ ಪೂರ್ಣಗೊಂಡರೆ ಸುಮಾರು ೫ ಲಕ್ಷ ಎಕರೆಗೆ ನೀರಾವರಿ ಸೌಲಭ್ಯ ಸಿಗುತ್ತದೆ ಇನ್ನೊಂದು ಮಾತನ್ನು ಮಾನ್ಯ ದೇವೇಗೌಡರು ಬಾಗಲಕೋಟೆಗೆ ಬಂದಿದ್ದಾಗ ಈ ಯೋಜನೆಗೆ ೧೯೮೫-೮೬ನೇ ಸಾಲಿಗೆ ೧೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಕೊಡದೇ ಹೋದರೆ ನಾನು ಬಾಗಲಕೋಟೆಗೆ ಪುನಃ ಬರುವುದಿಲ್ಲವೆಂದು ಹೇಳಿದ್ದರು. ಅಷ್ಟು ಹೇಳಿ ಈಗ ೬೧ ಕೋಟಿ ರೂಪಾಯಿಗಳನ್ನು ಮಾತ್ರ ಪ್ರಾವಿಷನ್ ಮಾಡಿದ್ದಾರೆ, ಇನ್ನು ಕಾಡಾ ವಿಷಯ ಬಿಡಿ, ಅದರ ಬಗ್ಗೆ ನೀವು ಹೇಳಿದ ಹಾಗೆ ನಡೆದುಕೊಂಡೇ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ದೇವೇಗೌಡರು ನಮ್ಮ ಕಾನ್ಸಿಟ್ಯೂಯೆನ್ಸಿಗೆ, ಮಾನ್ಯ ಸ್ಟೀಫನ್‌ರವರು ತೀರಿಕೊಂಡ ಮೇಲೆ ಬೈ ಎಲೆಕ್ಷನ್ ಸಮಯದಲ್ಲಿ ಬಂದಿದ್ದರು ನಮ್ಮ ಕ್ಷೇತ್ರದ ಸಮಸ್ಯೆಗಳು ಇವರಿಂದ ಬಗೆಹರಿಯುತ್ತವೆಂದು ಆಸೆ ಇಟ್ಟುಕೊಂಡು, ಇವರು ಬಂದಾಗ ನಾನು ಇವರನ್ನು ಸ್ವಾಗತಿಸಿ ನಮ್ಮ ಕ್ಷೇತ್ರದಲ್ಲಿ ಒರಂಜಾ ಬಾಚವಾರ್ ಚಾಮನಾಲ್ ಬ್ರಿಡ್ಜ್‌ಗಳನ್ನು ಮಾಡಿಕೊಡಬೇಕೆಂದು ಕೇಳಿಕೊಂಡೆ. ಇವರು ಆಗಲಿ ಎಂದು ಹೇಳಿದರು. ಆದರೆ ಇದುವರೆಗೂ ಅದರ ಕಡೆ ಗಮನವನ್ನೇ ಕೊಡಲಿಲ್ಲ. ಮಾನ್ಯ ದೇವೇಗೌಡರು ಇದರ ಬಗ್ಗೆ ಅನೌನ್ಸ್ ಮಾಡಿದರು. ಆದರೆ ೩ ವರ್ಷಗಳಾದರೂ ಬಜೆಟ್‌ನಲ್ಲಿ ಇದರ ವಿಷಯವೇ ಇಲ್ಲ. ಅದೇನಾಯಿತು ಎಂಬುದರ ಬಗ್ಗೆ ಸದ್ದೇ ಇಲ್ಲ. ಚಾಮನಾಲ್ ಬ್ರಿಡ್ಜ್‌ಗೆ ಟೋಕನ್ ಅಡ್ವಾನ್ಸ್ ಆಗಿ ೧೧೦೦ ರೂಪಾಯಿ

ಗಳನ್ನು ಇಟ್ಟಿದ್ದರು. ಅದು ಕೂಡ ಲ್ಯಾಪ್ಸ್ ಆಯಿತು, ಇನ್ನು ಒಂದು ಏನೆಂದರೆ, ಮಿನಿ ವಿಧಾನ ಸೌಧವನ್ನು ಕಟ್ಟಬೇಕೆಂದು, ಎಂದರೆ ಡಿಸ್ಟ್ರಿಕ್ಟ್‌ಗಳಲ್ಲಿ ಒಂದೊಂದು ಆಫೀಸ್ ಕಾಂಪ್ಲೆಕ್ಸ್‌ನ್ನು ತೆಗೆಯು ಬೇಕೆಂದು ನಾನು ಮಂತ್ರಿಯಾಗಿದ್ದಾಗಲೇ ಯೋಜನೆ ಹಾಕಿದ್ದೆವು. ಇವರ ಸರ್ಕಾರ ಬಂದು ೩ ವರ್ಷ ವಾಯಿತು. ಆದರೆ ಇದರ ಬಗ್ಗೆ ಯೋಚನೆಯನ್ನೇ ಮಾಡಿಲ್ಲ. ನಾಲ್ಕನೆಯದಾಗಿ, ಅವರನ್ನು ಕಳಕಳಿ ಯಿಂದ ಬೇಡಿಕೊಳ್ಳುವುದೇನೆಂದರೆ ಅವರ ಮತ ಕ್ಷೇತ್ರ ಯಾವ ರೀತಿ ಅಭಿವೃದ್ಧಿ ಹೊಂದಿದೆಯೋ ಆದೇ ರೀತಿ ನನ್ನ ಮತ ಕ್ಷೇತ್ರವನ್ನು ಅಭಿವೃದ್ಧಿ ಮಾಡಿಕೊಡಲಿಕ್ಕೆ ಪ್ರಯತ್ನಿಸಬೇಕು. ಕೊನೆಯದಾಗಿ ಹೇಳುವುದೇನೆಂದರೆ, ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್‌ನಲ್ಲಿ ಬರುವ ಕ್ಯಾಂಡಿಡೇಟ್‌ಗಳಿಗೆ ೩ ವರ್ಷಕ್ಕಾದರೂ ಒಂದು ಸಾರಿ ಪ್ರಮೋಷನ್ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇದು ಪ್ರಗತಿ ಪರವಾದ ಕೆಲಸ. ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಾನು ಸಲಹೆ ಮಾಡುತ್ತೇನೆ.

ಹೋದ ಆ ಸಲ ಇದನ್ನು ತೆಗೆದುಕೊಂಡು ಇಂಪ್ಲಿಮೆಂಟ್ ಮಾಡಿದಾಗ ಅನೇಕ ಜನರು ಅಸಿಸ್ಟೆಂಟ್ ಇಂಜಿನೀಯರ್ಸ್, ಎಕ್ಸಿಕ್ಯೂಟಿವ್ ಇಂಜಿನೀಯರ್ಸ್ ಸೂಪರಿಂಟೆಂಡೆಂಟ್ ಇಂಜಿನಿಯರ್ಸ್ ಆದರು. ಇಲ್ಲದಿದ್ದರೆ ಆಗುತ್ತಿರಲಿಲ್ಲ. ಏಕೆಂದರೆ ಡೈರೆಕ್ಟ್ ರಿಕ್ರೂಟ್‌ಮೆಂಟ್‌ಗೆ ಇವೊತ್ತಿನ ದಿವಸ ಹೈಕೋರ್ಟಿನಲ್ಲಿ ಸ್ಟೇ ಇದೆ ಆದ ಕಾರಣ ಪ್ರಮೋಷನ್ ಸಿಗತಕ್ಕಂಥಾದ್ದು ಬಹಳ ಕಡಿಮೆ ಚಾನ್ಸ್‌ಸ್ ಇರುತ್ತದೆ. ಅದಕ್ಕಾಗಿ ತಾವುಗಳು ಇದನ್ನು ಒಪ್ಪ ಬೇಕು. ಇದರಿಂದ ತೊಂದರೆಯಾಗುವುದಿಲ್ಲ. ಕೆಲವು ಸೆಂಟ್ರಲ್ ಗೌರ್ನಮೆಂಟ್ ಸ್ಕೀಮ್‌ನಲ್ಲಿ ಅನೇಕಕಡೆ ಡೈರೆಕ್ಟಾಗಿ ಎಕ್ಸಿಕ್ಯೂಟಿವ್ ಇಂಜಿನಿಯರ್ ರಿಕ್ರೂಟ್ ಆಗುತ್ತಾರೆ. ಆದ್ದರಿಂದ ಇಲ್ಲಿಯೂ ತಾವು ದಯವಿಟ್ಟು ಇದನ್ನು ಒಪ್ಪಿಕೊಳ್ಳ ಬೇಕು.

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಅಧ್ಯಕ್ಷರೆ, ನಾನು, ಮುಖ್ಯಮಂತ್ರಿಗಳವರು ಅವರ ಕ್ಷೇತ್ರಕ್ಕೆ ಹೋದಂತಹ ಕಾಲದಲ್ಲಿ ಮಾನ್ಯರು ಹೇಳಿದ ಮೂರು ಕೆಲಸದ ಬಗ್ಗೆ ನಾನು ಹೇಳಿದ್ದೇನೆ 'ಇಲ್ಲ' ಎಂದು ಹೇಳುವುದಿಲ್ಲ. ಹಾಗೆಯೇ ಈ ಸಾರಿ ಬಜೆಟ್‌ನಲ್ಲಿ ಎಲ್ಲಾ ಕ್ಷೇತ್ರಗಳಿಗಿಂತಲೂ, ಇವರ ಕ್ಷೇತ್ರಕ್ಕೆ ಗುಲ್ಬರ್ಗ ಜಿಲ್ಲೆಯಲ್ಲಿ ಹೆಚ್ಚಿಗೆ ಕೆಲಸ ಕೊಟ್ಟಿದ್ದೇವೆ. ನನ್ನ ಹತ್ತಿರ ಎಲ್ಲಾ ಕ್ಷೇತ್ರಗಳ ಲಿಸ್ಟ್ ಇದೆ. ಗುಲ್ಬರ್ಗ ಜಿಲ್ಲೆಯಲ್ಲಿ ನೀವೆ ಪ್ರಥಮ ಸ್ಥಾನದಲ್ಲಿರುವುದು.

ಎರಡನೇಯದಾಗಿ, ಯು. ಕೆ. ಪಿ ಬಗ್ಗೆ ಹೇಳುವುದಾದರೆ, ಆದರ ಪೂರ್ಣ ವಿವರಣೆಯನ್ನು ಕೊಟ್ಟಿದ್ದೇನೆ. ಫಸ್ಟ್ ಸ್ಟೇಜಿನಲ್ಲಿ ೧೧೯ ಟಿ. ಎಮ್. ಸಿ. ಎಫ್. ಟಿ. ಮತ್ತು ಸೆಕೆಂಡ್ ಸ್ಟೇಜಿನಲ್ಲಿ ೩೫ ಟಿ. ಎಮ್. ಸಿ.ಎಫ್.ಟಿ. ಯನ್ನು ಸೇರಿಸಿ ಒಟ್ಟು ೧೫೦ ಟಿ.ಎಮ್.ಸಿ.ಎಫ್.ಟಿ. ನೀರನ್ನು ೨,೦೦೦ ಎ. ಡಿ. ಯೊಳಗಾಗಿ ಉಪಯೋಗ ಮಾಡಿಕೊಳ್ಳಲಿಕ್ಕೆ, ಈ ವರ್ಷ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳುವುದಕ್ಕೆ ನಾನು ಬದ್ಧನಾಗಿದ್ದೇನೆ. ಈ ಕೆಲಸವನ್ನು ಮಾಡತಕ್ಕಂಥಾದ್ದರಲಿ. ನಾವು ಸ್ವಲ್ಪವೂ ಹಿಂದೆ ಬೀಳುವುದಿಲ್ಲ. ಎಂದು ಹೇಳಿದ್ದೇನೆ. ಈ ಸಾರಿ ಕಾಡಾ ಸೇರಿಸಿ ೭೨ ಕೋಟಿ ಹೆಚ್ಚಾಗಿದುದು ನಿಜ. ಫೀಲ್ಡ್ ಕ್ಯಾನಾಲ್ಸ್ ಪ್ರತಿಯೊಂದು ೮೦ ಪರ್ಸೆಂಟ್‌ಗಿಂತ ಹೆಚ್ಚಾಗಿದೆ For more than 80 of the work, money will be spent for only Canal System. ಅದರೊಳಗೆ ವಿಶೇಷ ಏನೂ ಇಲ್ಲ. ಎರಡನೇಯದು ೨-೩ ಕೆಲಸದ ಬಗ್ಗೆ ತಾವು ಹೇಳಿದ್ದೀರಿ, ಅದನ್ನು ಕಳುಹಿಸಿ ಕೊಡಿ. ಅದರ ಬಗ್ಗೆ ಸರಕಾರ ಪಕ್ಷಾತೀತವಾದ ಕೆಲಸ ಮಾಡುತ್ತದೆ. ಇವರು ಕೊಟ್ಟಿರುವುದನ್ನು ಪಟ್ಟಿಯೊಳಗೆ ಹಾಕಿ ಸ್ವಲ್ಪ ಓವರ್ ವೇಟೇಜ್ ಕೊಡುವುದಕ್ಕೆ ಹೇಳಿದ್ದೇನೆ. ಇನ್ನೂ ಒಂದು ಸೇರಿಸಬೇಕೆಂದು ಹೇಳಿದರೆ?

ರಿಕ್ರೂಟ್‌ಮೆಂಟ್ ಬಗ್ಗೆ ಬಸವಲಿಂಗಪ್ಪನವರಿಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಬಿ ಶಾಣಪ್ಪ.—ಅಧ್ಯಕ್ಷರೆ, ಯು. ಕೆ ಪಿ. ಬಗ್ಗೆ ಸಾಧ್ಯವಾದಷ್ಟುಮಟ್ಟಿಗೆ, ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಸಂತೋಷ. ನಾನು ಗುಲ್ಬರ್ಗ ಜಿಲ್ಲೆಯ ರಸ್ತೆಗಳ ಬಗ್ಗೆ ಹೇಳ ಬೇಕಾಗಿದೆ. ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ, ಗುಲ್ಬರ್ಗ ಮತ್ತು ರಾಯ ಚೂರು ಜಿಲ್ಲೆಯ ಪೂರ್ಣ ಭಾಗಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯ ಇನ್ನೂ ಕೂಡಾ ಆಗಲಿಲ್ಲ. ಈ ತಾರತಮ್ಯವನ್ನು ಏತಕ್ಕಾಗಿ ತಳೆದಿದ್ದೀರಿ? ನಾವು ಸಿಮೆಂಟ್ ಉತ್ಪಾದನೆ ಮಾಡುತ್ತೇವೆ, ಕಲ್ಲುಗಳನ್ನು ತೆಗೆಯುತ್ತೇವೆ. ಎಲ್ಲಾ ಮಾಡಿದರೂ ಕೂಡಾ ಜನರಿಗೆ ರಸ್ತೆಯ ಸೌಲಭ್ಯಗಳು ಸರಿಯಾಗಿಲ್ಲ, ಸಮರ್ಪಕವಾಗಿಲ್ಲ. ಈ ವರ್ಷ ಗುಲ್ಬರ್ಗ, ರಾಯಚೂರು, ಜಿಲ್ಲೆಗಳಿಗೆ ರಸ್ತೆಗಳನ್ನು ಕೊಟ್ಟಿದ್ದೀರಿ. ಆದರೆ ೧೯೮೫ರಲ್ಲಿ ಮಾಡಿಕೊಟ್ಟಂತಹ, ಮಾಡಬೇಕಾದಂತಹ ಕೆಲಸವೇ ಇನ್ನೂ ಮುಗಿದಿಲ್ಲ. ಮಾನ್ಯ

ಮುಖ್ಯಮಂತ್ರಿಗಳವರೂ ಕೂಡಾ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಬರೆದು ಹೆಚ್ಚು ಹಣವನ್ನು ರಿಲೀಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಬನಹಟ್ಟಿ ಲಾಲಪುರ, ಶಹಾಬಾದ್, ಈ ಕ್ಷೇತ್ರದಲ್ಲಿ ಬರುತ್ತದೆ. ಅಲ್ಲಿಂದ ೬-೧೨ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನನ್ನ ಕ್ಷೇತ್ರಕ್ಕೆ ಇನ್ನೂ ಹೆಚ್ಚಿಗೆ ಹಣವನ್ನು ಕೊಟ್ಟು ಕೆಲಸಕಾರ್ಯ ಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್, ಡಿ. ದೇವೇಗೌಡ.—ಅಧ್ಯಕ್ಷರೆ, ಸವಿಸ್ತಾರವಾದ ವಿವರಣೆಯನ್ನು ಈಗ ಕೊಡುವುದು ಕಷ್ಟ. ಆದರೂ ಕೂಡಾ ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಪರಿಶೀಲಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆಗೆ ಉತ್ತರ, ವಿವರಣೆ ಮುಕ್ತಾಯವಾಯಿತು.

ಅಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ

"೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೩೪,೩೫,೪೪ ೪೫,೪೬ಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಬೇಕು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ ೩೪ ಸಣ್ಣ ನೀರಾವರಿ.

"ರಾಜ್ಯಪಾಲರ ಶಿಪಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫, ೩೩, ೯೦,೦೦೦ರೂ, ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೪,೮೦,೬೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ ೩೫

ನೀರಾವರಿ, ಜಲ ಸಂಚಾರ ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು,

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ ಜಲಸಂಚಾರ. ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೩೯,೬೫,೫೦,೦೦೦ರೂ. ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೨,೧೬,೨೫.೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೪ ಲೋಕೋಪಯೋಗಿ ಕಾಮಗಾರಿ [ನಿರ್ಮಾಣ ರಹಿತ]

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ) ಸದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೦,೮೦,೩೫,೦೦೦ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೪೫, ಕಟ್ಟಡಗಳು

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೩೮,೪೯,೦೦೦-ರೂ. ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೧,೯೭,೩೧ ೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೪೬ ರಸ್ತೆಗಳು ಮತ್ತು ಸೇತುವೆಗಳು

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯಂಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫೮,೭೧,೩೯,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೧,೯೭,೩೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಧ್ಯಕ್ಷರು.— ಈಗ ಪ್ರಶ್ನೋತ್ತರಗಳು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.

ಶ್ರೀ ಹೆಚ್. ಸಿ. ಮಹದೇವಪ್ಪ.— ಮಾನ್ಯ ಸದಸ್ಯರ ಗೈರು ಹಾಜರಿ.

ಶಹಬಾದ್ ವಿಧಾನ ಸಭಾ ಕ್ಷೇತ್ರದಲ್ಲಿರುವ ಎ, ಎನ್. ಎಂ. ಕೇಂದ್ರಗಳು.

೧೩೨೦. ಶ್ರೀ ಕೆ. ಬಿ ಶಾಣಪ್ಪನವರು (ಶಹಬಾದ್).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಬಾದ್ ವಿಧಾನ ಸಭಾ ಕ್ಷೇತ್ರಗಳಲ್ಲಿ ಎಷ್ಟು ಎ. ಎನ್. ಎಂ. ಕೇಂದ್ರಗಳಿವೆ, ಅವುಗಳ ಪ್ರಾರಂಭ ಯಾವ ಯಾವ ವರ್ಷಗಳಲ್ಲಿ ಆಯಿತು. ಹಾಗೂ ಅವುಗಳ ಹೆಸರುಗಳನ್ನು ತಿಳಿಸುವುದು.

ಆ) ಅವುಗಳನ್ನು ಯಾವ ಆಧಾರದ ಮೇಲೆ ಮಂಜೂರು ಮಾಡಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೆಗೌಡ (ಆರೋಗ್ಯ ಮಂತ್ರಿಗಳು).—

ಅ) ಶಹಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ ೨೪ ಎ. ಎನ್. ಎಂ. ಉಪ ಕೇಂದ್ರಗಳಿವೆ. ಅವುಗಳ ಸ್ಥಾಪನೆ ೧೯೮೩ರಲ್ಲಿ ಆಗಿದೆ ಅವುಗಳ ಹೆಸರುಗಳು ಈ ಕೆಳಕಂಡತಿವೆ.

೧) ಖಂಡಾಲ್
೨) ಹೆರೂರು
೩) ಪಟ್ಟಣ್
೪) ಫೆತೇಹಾಬಾದ್
೫) ಬಸವಪಟ್ಟಣ್
೬) ಹುಣಸಿಹಡ್ಗಿಲ್
೭) ಜೋಗೂರು
೮) ಕೊತ್ತನೂರು
೯) ಬಿ. ನರಡಗಿ
೧೦) ಕಡ್ಣಿ
೧೧) ಕೋವಳಗ
೧೨) ಎನ್. ನಸರಡ್ಗಿ
೧೩) ಇಟ್ಗಿ